
ಸಂಗಾತಿ



ಅಂತರರಾಷ್ಟ್ರೀಯ ಮಹಿಳಾ ದಿನ

ಮಾರ್ಚ್ 8, 1985

• ಖಾಸಗಿ ಪ್ರಸಾರಕ್ಕಾಗಿ

ಸಂಪಾದಕ ಮಂಡಳಿ

ಎನ್. ಗಾಯತ್ರಿ (ಸಂಪಾದಕಿ)
ಡಾ॥ ಮಾರ್ಗರೆಟ್ ಬಿಸ್ವಾಸ್
ಲಕ್ಷ್ಮಿ ಚಂದ್ರಶೇಖರ್
ಭಾರತಿ
ಎಲ್. ಎನ್. ಶ್ಯಾಮಲಾದೇವಿ
ಧನಲಕ್ಷ್ಮಿ

ಮುಖ ಚಿತ್ರ : ಬೆಳಕಿನತ್ತ ಹೆಜ್ಜೆ
(ಕಲೆ: ಧನಲಕ್ಷ್ಮಿ)

ಪ್ರಸರಣಾಧಿಕಾರಿ

ಎನ್. ಶಾಂತಾ

ಪ್ರತಿಗಳಿಗೆ

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ
221, 4ನೇ ಮೇನ್
ವ್ಯಯಾಳಿ ಕಾವಲ್
ಬೆಂಗಳೂರು–560 003.

ಚಂದಾ ವಿವರ

ವಾರ್ಷಿಕ : 10 ರೂ.
ಬಿಡಿ ಪ್ರತಿ : 2 ರೂ.

ಒಳಗೇನಿದೆ ?....

ಸಂಪಾದಕೀಯ

ಕೆಲವು ವರ್ಷಗಳ ಹಿಂದಿನ ಮಾತು. ಹುಣಿಸೇಕೋಟೆಯ ಅನಸೂಯಮ್ಮನ ಮೇಲೆ ನಡೆದ ಅತ್ಯಾಚಾರದ ಹಗರಣದ ನೆನಪು ಇನ್ನೂ ಮಾಸಿಲ್ಲ. ಅತ್ಯಾಚಾರವನ್ನು ಪ್ರತಿಭಟಿಸಿದ ಅವಳ ಗಂಡ ಪಾಪಿ ಕೃಷ್ಣಪ್ಪನಿಂದ ಹತನಾದ. ಈ ಕೃತ್ಯವನ್ನು ವಿರೋಧಿಸಿ ಮಹಿಳಾ ಸಂಘಟನೆಗಳು, ದಲಿತ ಸಂಘರ್ಷ ಸಮಿತಿ, ಮುಂತಾದ ಪ್ರಗತಿಪರ ಸಂಘಟನೆಗಳು ತಮ್ಮ ಪ್ರತಿಭಟನೆಯನ್ನು ತೋರಿಸಿದುವು. ಆದರೆ ಇಂತಹ ಘೋರ ಪ್ರಸಂಗಗಳು ಆಕೆಯ ಅನುಭವದೊಂದಿಗೆ ಕೊನೆಯಾಗಲಿಲ್ಲ. ಹಾಗೇ ಪದ್ಮಕ್ಕನ ಪ್ರಕರಣ, ಕೌಸಲ್ಯಾಳ ಪ್ರಕರಣ........ಹೀಗೆ ಹೆಸರಿಸುತ್ತಲೇ ಹೋಗಬಹುದೇನೋ! ಇದಕ್ಕೆ ಕೊನೆ ಮೊದಲೇ ಇಲ್ಲವೇ? ಇಂತಹ ಪ್ರಕರಣಗಳ ಸಂದರ್ಭಗಳಲ್ಲಿ ನಡೆದ ಪ್ರತಿಭಟನೆಗಳು ತತ್ ಕ್ಷಣದ, ಕೆಲವೊಮ್ಮೆ ಆವೇಶದ, ಕ್ರಿಯೆಗಳಾಗಿ ಅಪರಾಧಿಗೆ ಶಿಕ್ಷೆಯಾಗುವುದರ ಮೂಲಕ ಗೆಲುವನ್ನು ಗಳಿಸಿಕೊಟ್ಟಿರಲೂಬಹುದು. ಆದರೆ ಈ ಪಾತಕಗಳಿಗೆ ಇತಿಶ್ರೀ ಹಾಡುವಂತಹ ಪ್ರಯತ್ನವನ್ನು ಈ ಪ್ರತಿಭಟನೆಗಳು ಸಾಧಿಸಲು ಅಶಕ್ತವಾದವು. ಇಂತಹ ಯಾವುದೇ ಪ್ರತಿಭಟನೆಯು ನಿರಂತರ ಚಳುವಳಿಯಾಗಿ ದೀರ್ಘಾವಧಿಯ ದರ್ಶನ ಹೊಂದಿಲ್ಲದಿದ್ದರೆ ಹೆಣ್ಣು—ಗಂಡುಗಳ ಸಮಾನತೆಯ ಹೊಸ ಸಂಸ್ಕೃತಿಗೆ ನಾಂದಿಯಾಗಲಾರದು ಎಂಬುದು ಅನುಭವದಿಂದ ಕಂಡುಬಂದಿರುವ ಸತ್ಯ.

ವೈಜ್ಞಾನಿಕವಾಗಿ ಸಮಾಜವನ್ನು ವಿಶ್ಲೇಷಿಸದ, ಸುಸಂಬದ್ಧ ಸಿದ್ಧಾಂತದ ಬೆನ್ನೆಲುಬಿಲ್ಲದ ಚಳುವಳಿಗಳಿಂದ ಯಾವುದೇ ಸಮಸ್ಯೆಯ ಆಮೂಲಾಗ್ರ ಉಚ್ಚಾಟನೆಗೆ ಹೋರಾಟ ನಡೆಸುವುದು ಕಷ್ಟವಾಗುತ್ತದೆ. ವೈಜ್ಞಾನಿಕ ಸಿದ್ಧಾಂತವನ್ನಷ್ಟೇ ಇಟ್ಟುಕೊಂಡು, ಅದರ ಆಧಾರದ ಮೇಲೆ ಯಾವುದೇ ಚಳುವಳಿಯನ್ನು ಹೂಡದಿರುವುದು ಪುಸ್ತಕದ ಬದನೆಕಾಯಿಯಷ್ಟೇ ನಿಷ್ಪ್ರಯೋಜಕವಾದದ್ದು. ಇವೆರಡರ ಸಾಮರಸ್ಯವನ್ನು ಸಾಧಿಸುವತ್ತ ಜಾಗೃತಿ ಮಹಿಳಾ ಅಧ್ಯಯನ ಕೇಂದ್ರವು ಅತ್ಯಂತ ಸಣ್ಣ ರೀತಿಯಲ್ಲಾದರೂ ಪ್ರಾಮಾಣಿಕ ಪ್ರಯತ್ನವನ್ನು ನಡೆಸುವ ಸಂಕಲ್ಪ ಹೊಂದಿದೆ. ಈ ದಿಸೆಯಲ್ಲಿ ಕೆಲಸ ಮಾಡುತ್ತಿರುವ ಅಖಿಲ ಭಾರತ ಮಟ್ಟದ ಒಂದೆರಡು ಪ್ರಗತಿಪರ ಮಹಿಳಾ ಸಂಘಟನೆಗಳ ಚಟುವಟಿಕೆಗಳಿಗೆ ಪೂರಕವಾಗುವಂತೆ ಕೆಲಸಮಾಡುವ ಇಚ್ಛೆ ಹೊಂದಿದೆ.

ಇಂದು ಮಹಿಳೆ ಮೂರು ರೀತಿಯ ಬವಣೆಗೆ ಸಿಲುಕಿದ್ದಾಳೆ. ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಸಂಪ್ರದಾಯದ ಕಪಿಮುಷ್ಟಿಯಲ್ಲಿ ಸಿಲುಕಿರುವುದಷ್ಟೇ ಅಲ್ಲದೆ, ಆರ್ಥಿಕವಾಗಿಯೂ ಮಹಿಳೆಯು ದಮನಕ್ಕೆ ತುತ್ತಾಗಿದ್ದಾಳೆ. ಪುರುಷನೂ ಈ ರೀತಿಯ ತುಳಿತಕ್ಕೆ ಸಿಕ್ಕಿದ್ದರೂ ಮಹಿಳೆ ಇವೆರಡನ್ನೂ ಒಳಗೊಂಡಂತೆ ಮಹಿಳೆಯಾಗಿ ಇನ್ನೂ ಅಧಿಕವಾದ ದಮನಕ್ಕೆ ತುತ್ತಾಗಿರುವುದರಿಂದ ಅವಳ ಸಮಸ್ಯೆ ಅನನ್ಯವಾದುದು.

ಮಹಿಳಾ ಹೋರಾಟದ ಧ್ಯೇಯೋದ್ದೇಶ ಪುರುಷನ ವಿರುದ್ಧ ಸೆಣಸಾಡುವುದಲ್ಲ. ಸ್ತ್ರೀಯರು ಜಯಗಳಿಸಿರುವ ಎಷ್ಟೋ ಹೋರಾಟಗಳಲ್ಲಿ ಪುರುಷರ ಭಾಗವಹಿಸುವಿಕೆಯು

ಗಮನಾರ್ಹವಾಗಿ ಇದ್ದೇ ಇದೆ. ಮೊದಲನೆಯ ಜಾಗತಿಕ ಯುದ್ಧದ ನಂತರ ಬ್ರಿಟನ್ನಿನಲ್ಲಿ ಮಹಿಳೆಯರು ಮತದಾನದ ಹಕ್ಕಿಗಾಗಿ ನಡೆಸಿದ ಹೋರಾಟದಲ್ಲಿ ಅವರು ಗಳಿಸಿದ ಜಯಕ್ಕೆ ಪುರುಷರ ಭಾಗವಹಿಸುವಿಕೆಯೂ ಕಾರಣವಾಗಿತ್ತು. ಚರಿತ್ರೆಯಲ್ಲಿ ಇಂತಹ ಬೇರೆ ನಿದರ್ಶನಗಳೂ ಹೇರಳವಾಗಿ ಸಿಕ್ಕುತ್ತವೆ.

ನಮ್ಮ ಆರ್ಥಿಕ ವ್ಯವಸ್ಥೆಯ ಬದಲಾವಣೆಗಾಗಿ ನಡೆಯಬೇಕಾಗಿರುವ ಹೋರಾಟದಿಂದಲೇ ಮಹಿಳಾ ಸಮಸ್ಯೆಗೆ ಪರಿಹಾರ ದೊರಕುತ್ತದೆಂದು ಭ್ರಮಿಸುವುದು ಅಂತಹ ಹೋರಾಟದ ವ್ಯಾಪ್ತಿಯನ್ನು ಕಡಿಮೆ ಮಾಡಿದಂತೆ ಕೂಡ. ನಾವು ಅಪೇಕ್ಷಿಸುವಂತಹ ಆರ್ಥಿಕ ಬದಲಾವಣೆಯ ವ್ಯವಸ್ಥೆ ಬಂದ ಸಂದರ್ಭದಲ್ಲೂ, ತತ್ ಕ್ಷಣ ಯಾವುದೇ ಪ್ರಯತ್ನವಿಲ್ಲದೆ ಹೆಣ್ಣಿಗೆ ವಿಮೋಚನೆ ದೊರಕುತ್ತದೆಂದುಕೊಳ್ಳುವುದು ತಪ್ಪು. ಆದರೆ ಅಂತಹದೊಂದು ವ್ಯವಸ್ಥೆಯಲ್ಲಿ ನಾವು ಬಯಸುವ ಬದಲಾವಣೆ ತರಲು ಹೆಚ್ಚು ಸಾಧ್ಯತೆಯಿದೆಯೆಂಬುದನ್ನು ಮರೆಯದೆ ಮಹಿಳಾ ಸಮಸ್ಯೆಯ ಪರಿಹಾರಕ್ಕೆ ಹೋರಾಟ ನಡೆಯಬೇಕು.

ಮಹಿಳೆಯು ದುಡಿಮೆಯ ಕ್ಷೇತ್ರದಲ್ಲಿ ಕಾಣಿಸಿಕೊಳ್ಳುತ್ತಿರುವುದು ಇಪ್ಪತ್ತನೆಯ ಶತಮಾನದ ಅದ್ಭುತವೇನಲ್ಲ. ಚರಿತ್ರೆಯ ಆರಂಭದಿಂದಲೂ ಪುರುಷನೊಂದಿಗೇ ಅವಳೂ ದುಡಿಯುತ್ತಿದ್ದಾಳೆ. ಆದರೆ ಇಂದು ಅವಳನ್ನು ವಿವಿಧ ವರ್ಗಗಳಲ್ಲಿ, ವಿವಿಧ ಸ್ತರಗಳಲ್ಲಿ ಗುರುತಿಸಬಹುದು, ಅಷ್ಟೇ. ದುಡಿಯುವ ಮಹಿಳೆ ಎಂದಾಕ್ಷಣ ಆಫೀಸು, ಕಾರ್ಖಾನೆಗಳಿಗೆ ಹೋಗುವ ಮಧ್ಯಮ ವರ್ಗದ ಮಹಿಳೆಯನ್ನು, ಅವಳ ಆಶೋತ್ತರಗಳನ್ನು ಕಣ್ಮುಂದೆ ತಂದುಕೊಳ್ಳುವುದು ಅಪೂರ್ಣ ಚಿತ್ರವಷ್ಟೇ. ಈ ವರ್ಗಕ್ಕೆ ಸೇರಿದ ಮಹಿಳೆಯರು ಸಂಘಟಿತ ಕ್ಷೇತ್ರಗಳಿಗೆ ಸೇರಿದರೂ ಪ್ರಮಾಣದಲ್ಲಿ ಕಡಿಮೆಯೇ. ಇವರಲ್ಲಿ ಬಹಳಷ್ಟು ಮಂದಿಗೆ ತಮಗೆ ಸ್ವಾತಂತ್ರ್ಯವಿಲ್ಲವೆಂದೋ, ಸ್ವಾತಂತ್ರ್ಯ ಬೇಕೆಂದೋ ಅನಿಸದಿರಬಹುದು. ಅವರಲ್ಲಿ ಕೆಲವರು ತಮಗೆ ಸಮಸ್ಯೆಯಿದೆಯೆಂದೂ ಭಾವಿಸುವುದಿಲ್ಲ. ಇಷ್ಟಾದರೂ ವರದಕ್ಷಿಣೆ, ಅತ್ಯಾಚಾರ, ವೇಶ್ಯಾವೃತ್ತಿಗಳು ಜೀವನದ ವಾಸ್ತವ ಸಂಗತಿಗಳಾಗಿ ಮೂರ್ತವಾಗಿ ಕಾಣಿಸುತ್ತಲೇ ಇವೆ. ಹೇಸ್ಕಿಂದರೆ 'ಹೆಣ್ಣು ಜನ್ಮ ಕೆಟ್ಟದ್ದು, ಯಾರಿಗೂ ಬೇಡ' ಎಂದು ಇವರು ಹೇಳಬಹುದಾದರೂ ಯಾರೂ ತಮ್ಮ ಸಮಸ್ಯೆಗೆ ಕಾರಣವಾದ ವ್ಯವಸ್ಥೆಯನ್ನು ಬಯ್ಯುವುದೇ ಇಲ್ಲ.

ಹೆಣ್ಣಿನ ಸಮಸ್ಯೆ ಒಂದು ಸರಳ ರೇಖೆಯಲ್ಲಿ ಹೇಳಿಬಿಡುವಷ್ಟು ಸುಲಭವಲ್ಲ. ನಮ್ಮ ಸಂಕೀರ್ಣ ಸಮಾಜದ ಈ ಎಲ್ಲಾ ಸಮಸ್ಯೆಗಳನ್ನು ಪದರು ಪದರಾಗಿ ಬಿಚ್ಚಿ ವೈಜ್ಞಾನಿಕವಾಗಿ ಅಭ್ಯಸಿಸಬೇಕಾಗಿದೆ. ಅಗತ್ಯವಾಗಿ ಆಗಬೇಕಾದ ಈ ಸಂವಾದದಲ್ಲಿ ಎಲ್ಲರೂ ಪಾಲ್ಗೊಳ್ಳಬೇಕು. ಈ ದಿಸೆಯಲ್ಲಿ ಚರ್ಚೆಗೆ ನೆರವಾಗಬಲ್ಲ ಲೇಖನ, ವಿಮರ್ಶೆ, ಕಥೆ, ಕವನಗಳನ್ನು 'ಸಂಗಾತಿ' ಸ್ವಾಗತಿಸುತ್ತದೆ.

ಅವರಲ್ಲಿ ತಾಯಿಯು ಕುಟುಂಬದ ಒಡತಿ ಮಾತ್ರವೇ ಅಲ್ಲ; ಕುಟುಂಬದ ಎಲ್ಲ ರೀತಿಯ ಸಂಬಂಧಗಳಿಗೂ ಆಕೆಯೇ ಮೂಲ. ಅವಳಿಗೆ ಧಾರ್ಮಿಕ ಮತ್ತು ರಾಜಾಧಿಪತ್ಯದ ಎರಡೂ ಕರ್ತವ್ಯಗಳು ಒಟ್ಟಾಗಿ ಲಭಿಸುತ್ತವೆ. ಡಿ. ಡಿ. ಕೋಸಾಂಬಿಯವರು ವಿಮರ್ಶಿಸಿದಂತೆ, "ದೇಶದ ಯಾವ ಭಾಗಗಳಲ್ಲಿ ನೇಗಿಲಿನಿಂದ ಉಳುವ ಪದ್ಧತಿ ತಡವಾಗಿ ಪ್ರಾರಂಭವಾಯಿತೋ ಅಂತಹ ಕಡೆಗಳಲ್ಲಿ ಇಂದಿಗೂ ಮಾತೃಪ್ರಧಾನ ಸಂಸ್ಥೆಗಳು ಉಳಿದುಕೊಂಡಿವೆ. ತಿರುವಾಂಕೂರ್, ಕೊಚ್ಚಿನ್ ಪ್ರದೇಶ ಹಾಗೂ ಕೆಲವು ಜನಾಂಗಗಳು ಇದಕ್ಕೆ ನಿದರ್ಶನವಾಗಿವೆ."

ಭಾರತದಲ್ಲಿ ಕೃಷಿಯು ಮಹಿಳೆಯರಿಂದ ಕಂಡು ಹಿಡಿಯಲ್ಪಟ್ಟಿತೇ? ಹಾಗಿದ್ದಲ್ಲಿ, ಇದಕ್ಕೂ ಸಮಾಜದಲ್ಲಿ ಮಹಿಳೆಯ ಸ್ಥಾನಮಾನಕ್ಕೂ ಏನಾದರೂ ಸಂಬಂಧವಿದೆಯೇ?

ಭಾರತದಲ್ಲಿ ಕೃಷಿಯು ಮಹಿಳೆಯರಿಂದ ಕಂಡು ಹಿಡಿಯಲ್ಪಟ್ಟಿತೇ? ಹಾಗಿದ್ದಲ್ಲಿ, ಇದಕ್ಕೂ ಸಮಾಜದಲ್ಲಿ ಮಹಿಳೆಯ ಸ್ಥಾನಮಾನಕ್ಕೂ ಏನಾದರೂ ಸಂಬಂಧವಿದೆಯೇ? ಏರೆನ್‌ಫೆಲ್ಸ್ ಎಂಬುವರು ಇದಕ್ಕಾಗಲೇ ಉತ್ತರ ನೀಡಿದ್ದಾರೆ :

"ಇಲ್ಲಿ (ಅಂದರೆ ಭಾರತದಲ್ಲಿ) ಸ್ತ್ರೀಯು ಭೂಮಿಯನ್ನು ವ್ಯವಸ್ಥಿತವಾಗಿ ಉಳುವುದನ್ನು ಕಂಡುಹಿಡಿದದ್ದೇ ಅಲ್ಲದೆ, ಅದನ್ನು ಕಾರ್ಯರೂಪಕ್ಕೆ ತಂದಳು. ಇದೇನೂ ಬಹಳ ಸುಲಭದ ಕೆಲಸವಾಗಿದ್ದಿರಲಾರದು. ಏಕೆಂದರೆ ಅತಿ ಪ್ರಾಚೀನ ಸಮಾಜದಲ್ಲಿ ಸಂಪ್ರದಾಯದ ಕಟ್ಟುಪಾಡುಗಳು ಸಾಕಷ್ಟು ಪ್ರಬಲವಾಗಿದ್ದವು; ವಿಶೇಷತಃ ಆರಂಭದಲ್ಲಿ ಇದು ಕಂಡುಬರುತ್ತದೆ. ಇಂದಿಗೂ ಕೂಡ ಈ ಕೃಷಿಪೂರ್ವ ಗುಂಪುಗಳ ಪದ್ಧತಿಗಳು ಅಲ್ಲಲ್ಲಿ ಉಳಿದುಕೊಂಡಿರುವುದೇ ಇದಕ್ಕೆ ಸಾಕ್ಷಿ. ಭೂಮಿಯನ್ನು ಉಳುವುದರ ಪರಿಣಾಮವಾಗಿ ಈ ಮಾತೃ ಪ್ರಧಾನ ಸಾಂಸ್ಕೃತಿಕ ಬುಡಕಟ್ಟಿಗೆ ಸೇರಿದ ಜನರು ಕಾಡು ಬೀಡುಗಳಲ್ಲಿ ಅಲೆಯುವುದನ್ನು ತೊರೆದು ಪ್ರಪ್ರಥಮವಾಗಿ ಒಂದೆಡೆ ನೆಲೆಸುವಂತಹವರಾದರು."

ಕೃಷಿಯೇ ಪ್ರಧಾನವಾದ ಭಾರತದಂತಹ ದೇಶದಲ್ಲಿ ಮಾತೃ ಹಕ್ಕಿನ ಅವಶೇಷಗಳು ಅಗಾಧವಾಗಿ ಉಳಿದಿರುವುದು ಆಶ್ಚರ್ಯವೇನಲ್ಲ. ಖಾಸಿ ಮತ್ತು ಗಾರೋ ಬುಡಕಟ್ಟಿನವರು ವಾಸಿಸುವ ಭಾರತದ ಈಶಾನ್ಯ ಪ್ರದೇಶದಲ್ಲಿ ಮತ್ತು ಮಲಬಾರ್ ತೀರಪ್ರದೇಶದಲ್ಲಿ ವಾಸಿಸುವ ನಾಯರ್‌ಗಳ ಮಸ್ಯೆ ಮಾತೃ ಹಕ್ಕಿನ ಉಳಿಕೆಯು ಹೆಚ್ಚು ಕಾಣಸಿಗುತ್ತದೆ. ಸ್ತ್ರೀಯ ದೇಹದಿಂದ ಗಿಡಗಳು ಹುಟ್ಟುತ್ತವೆ ಎಂಬ ಪುರಾತನ ನಂಬಿಕೆಯನ್ನು ಪುಷ್ಟೀಕರಿಸುವಂತಹ ಆಧಾರವೊಂದನ್ನು ಹರಪ್ಪಾದಲ್ಲಿ ಹೊರತೆಗೆದಿದ್ದಾರೆ. ಅಲ್ಲಿ ಸಿಕ್ಕಿರುವ ಫಲಕವೊಂದರಲ್ಲಿ ತಲೆಕೆಳಗಾಗಿರುವ ಯೋನಿಯಿಂದ ಗಿಡವೊಂದು ಹೊರಬರುತ್ತಿರುವಂತೆ ಚಿತ್ರಿಸಿದ್ದಾರೆ. ಇಂತಹ ಅನೇಕ ಉದಾಹರಣೆಗಳು ಭಾರತದಲ್ಲಿ ಹೇರಳವಾಗಿ ಕಂಡುಬರುತ್ತವೆ.

○

ಕೃಷಿ ಮಹಿಳೆಯ ಶೋಧನೆಯೆ?

ಮಾನವಜನಾಂಗವು ನಡೆದು ಬಂದ ಹಾದಿಯನ್ನು ಗಮನಿಸಿದರೆ ಆರಂಭದ ದೆಸೆಯಲ್ಲಿ ಕಾಳು–ಕಡ್ಡಿ ಹಾಗೂ ಹಣ್ಣು–ಹಂಪಲನ್ನು ಸಂಗ್ರಹಿಸುವ ಕೆಲಸ ಮಹಿಳೆಯರದ್ದಾಗಿತ್ತೆಂಬುದು ತಿಳಿಯುತ್ತದೆ. ಕೃಷಿಯು ಅವಳ ಶೋಧನೆಯಾಗಿದ್ದಿರಬೇಕೆಂದು ಇದರಿಂದ ಊಹಿಸಬಹುದು. ಎತ್ತುಗಳ ಬಳಕೆ ಮತ್ತು ನೇಗಿಲಿನ ಪ್ರಯೋಗ ಆರಂಭವಾದ ಮೇಲೆ ಅದು ಅವರಿಂದ ಪುರುಷರಿಗೆ ವರ್ಗಾವಣೆಯಾಯಿತು. ಪ್ರಾಚೀನ ಶಿಲಾ ಯುಗದಲ್ಲಿ ಸ್ತ್ರೀಯು ಕೃಷಿಯನ್ನು ಆರಂಭಿಸಿದ್ದು ಕಲ್ಲಿನ ಚೂರುಗಳಿಂದ. ಹೊರಗೆ ಬೇಟೆಯಾಡಲು ಪುರುಷನು ಇನ್ನೂ ಪ್ರಬಲವಾದ ಕಲ್ಲಿನ ಆಯುಧಗಳನ್ನು ಬಳಸುತ್ತಿದ್ದಿರಬೇಕು. ಆದರೆ ಬೇಟೆಗಿಂತಲೂ ಕೃಷಿಯ ಆಧಾರ

ದೇವಿಪ್ರಸಾದ್ ಚಟ್ಟೋಪಾಧ್ಯಾಯ
ಸಂಗ್ರಹಾನುವಾದ : ಗಾಯತ್ರಿ

ಹೆಚ್ಚಿದ್ದ ಆರ್ಥಿಕ ವ್ಯವಸ್ಥೆಯಲ್ಲಿ ಮೊದಲಿಗೆ ಹೆಣ್ಣಿನ ಸ್ಥಾನಮಾನ ಮೇಲ್ಮಟ್ಟದ್ದಾಗಿತ್ತು. ಸಂತತಿಯನ್ನು ಪಿತೃಮೂಲದಿಂದ ಗುರುತಿಸುವ ಹಿಂದಿನ ಪದ್ಧತಿ ಅಳಿಸಿ ಹೋಗಿ ಅದನ್ನು ಮಾತೃಮೂಲದಿಂದ ಗುರುತಿಸುವ ಪದ್ಧತಿ ಇದರಿಂದ ಜಾರಿಗೆ ಬಂತು. ಪಶುಸಂಗೋಪನೆ ಮುಖ್ಯ ಕಸುಬಾಗಿ ಬೆಳೆದ ಬುಡಕಟ್ಟುಗಳಲ್ಲಿ ಇದು ಮತ್ತೆ ಪಿತೃಮೂಲ ಸಂಸ್ಕೃತಿಯತ್ತ ವಾಲುವ ಪ್ರವೃತ್ತಿ ಕಂಡು ಬಂತು. ವಿಶ್ವದ ಅತಿ ಪ್ರಾಚೀನ ಸಾಹಿತ್ಯಗಳಲ್ಲಿ ಇದಕ್ಕೆ ಪುರಾವೆಗಳು ಹೇರಳವಾಗಿವೆ.

ಯಾವ ಪ್ರಾಚೀನ ಸಮಾಜದಲ್ಲೂ ಕೃಷಿಯು ಒಟ್ಟಾರೆ ಪುರುಷರ ಕೈಯಲ್ಲಿರಲಿಲ್ಲ. ಜೆ.ಡಿ. ಬರ್ನಾಲ್ ಇದನ್ನು ಸವಿಸ್ತಾರವಾಗಿ ನಿದರ್ಶನಗಳಿಂದ ಸಾಬೀತು ಮಾಡಿ ತೋರಿಸಿದ್ದಾರೆ. ಬ್ರೆಜಿಲ್‌ನ ಮಧ್ಯಭಾಗದ ಬಕೈರಿ ಜನಾಂಗವನ್ನು ಅಭ್ಯಸಿಸಿದ ವಾನ್ ಡೆನ್ ಸ್ಟೈನನ್ ಸಹ ಇದೇ ತೀರ್ಮಾನಕ್ಕೆ ಬರಬೇಕಾಯಿತು. ತಾನು ವಾಸಿಸುತ್ತಿದ್ದ ಗುಡಿಸಿಲಿನ ಸುತ್ತಮುತ್ತ ಕೋಲು–ಕಲ್ಲುಗುದ್ದಲಿಗಳಿಂದ ನೆಲವನ್ನು ಹೆಕ್ಕುತ್ತಾ ಸಣ್ಣ ಪ್ರಮಾಣದಲ್ಲಿ ಬೇಸಾಯದತ್ತ ಕ್ರಮೇಣ ಮುನ್ನಡೆದಳು. ಪುರುಷನಿಗೆ ಬೇಟೆ, ಇತರ ಬುಡಕಟ್ಟುಗಳೊಡನೆ ನಿರಂತರವಾದ ಘರ್ಷಣೆ, ಮತ್ತು ಕಾಡುಮೃಗಗಳಿಂದ ರಕ್ಷಣೆ ಕೊಡುವುದು, ಇತ್ಯಾದಿ ಕರ್ತವ್ಯಗಳಾದರೆ, ಕೃಷಿಯ ಮೂಲಕ ಆಹಾರವನ್ನು ವ್ಯವಸ್ಥೆಗೊಳಿಸುವುದು ಮಹಿಳೆಯ ಪಾಲಿಗೆ ಬಂತು. ವಿವಿಧ ಉಪಕರಣಗಳ ಉಪಯೋಗದಿಂದ ಕೃಷಿ ಮೇಲ್ಮಟ್ಟಕ್ಕೇರಿದಾಗ ಮಾತ್ರವೇ ಕೃಷಿಯಲ್ಲಿ ಅವಳ ಪಾತ್ರ ಸ್ವಲ್ಪ ಕಡಿಮೆಯಾಗಿದ್ದು. ಪಶುಸಂಗೋಪನೆಯನ್ನು ವೃತ್ತಿಯಾಗಿಟ್ಟುಕೊಂಡಿದ್ದ ಬುಡಕಟ್ಟುಗಳು ಕೃಷಿಯನ್ನು ಕೈಗೂಡಿಸಿಕೊಂಡಾಗ ಸಹಜವಾಗಿಯೇ ಮಹಿಳೆಯು ಕೃಷಿಗಾಗಿ ಪಶುಗಳ ಬಳಕೆಯನ್ನು ವಿರೋಧಿಸಿದ್ದಿರಬೇಕು.

ಇದನ್ನು ವಿವರಿಸುತ್ತಾ ಬ್ರಿಫಾಲ್ಟ್ ಆಸ್ಟ್ರೇಲಿಯಾದ ಮೂಲನಿವಾಸಿಗಳಲ್ಲಿ ಆಯುಧಗಳು ಪುರುಷರಿಗಿದ್ದಂತೆ ಮಹಿಳೆಯರಿಗೆ ಗೆಡ್ಡೆಗೆಣಸುಗಳನ್ನು ಅಗೆಯುವ ಕೋಲು ಪವಿತ್ರವಾದ ಆಸ್ತಿಯಾಗಿತ್ತೆಂದು ನಮೂದಿಸಿದ್ದಾರೆ. ಬುಡಕಟ್ಟು ಜನಾಂಗಗಳ ಐತಿಹ್ಯಗಳಲ್ಲೂ ಮಹಿಳೆಯು ಕೃಷಿ ಶೋಧಕಳೆಂಬ ಸೂಚನೆಗಳನ್ನು ಅವರು ಗುರುತಿಸಿದ್ದಾರೆ.

ಮಾತೃಪ್ರಧಾನ ಸಾಮಾಜಿಕ ಸಂಸ್ಥೆಗಳು ನಶಿಸಿ ಹೋಗದೆ ಉಳಿದಿರುವ ಖಾಸಿ ಬುಡಕಟ್ಟು ಜನಾಂಗದವರು ಇದಕ್ಕೆ ಒಂದು ಕುತೂಹಲಕಾರಿ ನಿದರ್ಶನ.

ോനാ3/6

ಕಾವ್ಯ

ದೇವರೇ, ನಾನಿನ್ನೂ ಎಳೆಯ ಹುಡುಗಿ

ಮೊಲೆ ಮೊಗ್ಗುಗಳು
ಗುಬುಕರಿಸ ತೊಡಗಿದಾಗ
ಹದಿನೈದೂ ತುಂಬಿರಲಿಲ್ಲ ನನಗೆ

ಪ್ರೀತಿ–ಪ್ರೇಮದ ಬೆಣ್ಣೆ
ಗನಸಿನ ಹೂಹಸೆಯ ನಡೆ
ತುಳುಕುಬೇಕಾದಾಗ ನನ್ನ ಜೈಲಿನಲ್ಲಿಟ್ಟರು.

ಜೈಲಿನಲ್ಲಿಟ್ಟರು ನನ್ನ
ಜೈಲಿಗೆ ದೂಡಿದ ಅವರಿಗೆ
ಕಿಡಿಕಿಡಿ ದೇವರ ಹಿಡಿಹಿಡಿ ಶಾಪ ತಟ್ಟಲಿ.

ಮುಚ್ಚಿದ್ದರೂ ಬಿಚ್ಚಿಕೊಂಡಿರುವ
ನನ್ನ ಕಣ್ಣುಗಳಿಗೆ ಪ್ರಪಂಚವನ್ನೇ
ನುಂಗಿ ನೊಣೆಯುವ ಸಂಭ್ರಮ.

ಮತದ ಹೆಸರು ಹೇಳಿ
ಹಸಿಬಿಸಿ ಚೆಲುವೆಯ
ಮಠಕ್ಕೆ ತಳ್ಳಿಸಿದ
ನೀಚ ನಂಬಿಕೆಯೇ ಛೀ !

ಮಠದ ಇಂಥಾ ಬದುಕೇ
ನನ್ನ ಸಾವಾಗಲಿದೆ.
ದೇವರೇ, ನಾನಿನ್ನೂ ಎಳೆಯ ಹುಡುಗಿ.



ಸೊಂಟದ ಕೆಳಗಿನ ನಾಡಿತುಡಿತ
ಬೆಚ್ಚಗಿನ ಸೊಚ್ಚನೆ ನೋವು ತರುತ್ತಿದೆ
ನನ್ನನ್ನು ಸಂನ್ಯಾಸಿನಿ ಮಾಡಿದ
ಅವರಿಗೆ ದೇವರ ಶಾಪ ತಟ್ಟಲಿ.

ಮೂಲ : ಕ್ರಿ. ಶ. 13ನೇ ಶತಮಾನದ ಫ್ರಾನ್ಸಿನ ಅಜ್ಞಾತ ಕವಯಿತ್ರಿಯ ಫ್ರೆಂಚ್ ಪದ್ಯ

ಪುನರ್ರಚನೆ : **ಸುಚೇತನ ಸ್ವರೂಪ್**

ವ್ಯಕ್ತಿ ವಿಶೇಷ...

ಶ್ರೀಮತಿ ಗಂಗೋತ್ರಿ

ಮಾನಸ ಸರೋವರ–ಕೈಲಾಸ ಪರ್ವತಗಳಿಗೆ ಹೋಗಬೇಕಾದರೆ ಭಾರತದಿಂದ ಟಿಬೆಟ್ ಗಡಿಯತ್ತ ಸಾಗಿ ನಡೆಯಬೇಕು. ಪಿಥೋರಾಗಢ್ ಜಿಲ್ಲೆಯ ಧಾರ್ಚುಲಾ ಎಂಬಲ್ಲಿಂದ ತವಾಘಾಟ್ ಸುಮಾರು ಹತ್ತು ಕಿಲೋಮೀಟರ್ ದೂರದಲ್ಲಿದೆ. ಅಲ್ಲಿಯವರೆಗೆ ವಾಹನ ಸೌಕರ್ಯ ಉಂಟು. ಅಲ್ಲಿಂದಾಚೆಗೆ ರಸ್ತೆಯ ನಿರ್ಮಾಣವಾಗಿಲ್ಲದಿರುವುದರಿಂದ ಬೆಟ್ಟಗಳನ್ನು ಹತ್ತಿ–ಇಳಿದು ನಡೆಯುತ್ತಾ ಮುಂದೆ ಹೋಗಬೇಕು. ಮೊದಲನೆಯ ದಿನ ಪಾಂಗು ಎಂಬ ಗ್ರಾಮ ಸಿಕ್ಕುತ್ತದೆ. ಅಲ್ಲಿಂದ ಸಿರ್ಖಾ ಎಂಬಲ್ಲಿಗೆ ಹೋಗುವಾಗ ನೇರದ ಬೆಟ್ಟದ ರಸ್ತೆ ಬಿಟ್ಟು ಸುಮಾರು ಮೂರು ಕಿಲೋಮೀಟರ್ ದೂರದಷ್ಟು ಬಳಸಿ ಹೋಗಲು ತಯಾರಿದ್ದರೆ ಯಾರಾದರೂ ಆ ದಾರಿಯಲ್ಲಿ ನಾರಾಯಣ ಆಶ್ರಮ ಎಂಬ ಸುಂದರವಾದ ಜಾಗವನ್ನು ನೋಡಿ ತೆರಳಬಹುದು. ಹಿಮಾಲಯದಲ್ಲಿ ದಟ್ಟವಾಗಿ ಬೆಳೆದಿರುವ ವೃಕ್ಷಗಳ ಮಧ್ಯೆ, ಹಲವು ಬಗೆಯ ಹೂವು–ಹಕ್ಕಿಗಳಿಂದ ತುಂಬಿರುವ ಒಂದು ಎತ್ತರದ ಪ್ರದೇಶದಲ್ಲಿ ಝರಿ–ವನರಾಜಿಗಳಿಂದ ಕಂಗೊಳಿಸುವ ರಮ್ಯವಾದ ಜಾಗ ಈ ನಾರಾಯಣ ಆಶ್ರಮ.

ಇದಕ್ಕೆ ಈ ಹೆಸರು ಬಂದದ್ದೇ ಒಂದು ಮೋಜು. ಹಲವು ವರ್ಷಗಳ ಹಿಂದೆ ದಕ್ಷಿಣ ಭಾರತದ ಯಾತ್ರಿಯೊಬ್ಬ ಕೈಲಾಸ ಪರ್ವತಕ್ಕೆ ಹೋಗಿದ್ದವನು ಹಿಂದಿರುಗುತ್ತಿದ್ದ. ಹಿಮಾಲಯದ ಗುಡ್ಡಗಾಡಿನ ಜನ ಅಲ್ಲಿಯ ಕೊಂಪೆಗಳಲ್ಲಿ ಹೆಚ್ಚು ಉದ್ಯೋಗಾವಕಾಶವಿಲ್ಲದೆ ಮತ್ತು ಯಾವ ವೈದ್ಯಕೀಯ ಸೌಲಭ್ಯಗಳೂ ಇಲ್ಲದೆ ಬಡತನದಲ್ಲಿ ಸೊರಗುತ್ತಿದ್ದುದನ್ನು ಕಂಡು ಮರುಗಿದ. ಅವರ ಸೇವೆಗಾಗಿ ಅಲ್ಲೇ ನಿಂತ.

ಆತನ ವಯಸ್ಸು ಮೂವತ್ತಕ್ಕೆ ಮೀರಿರಲಿಲ್ಲ. ಅವನು ಯಾವೂರವನೋ, ಅವನ ಹೆಸರೇನೋ ಯಾರಿಗೂ ತಿಳಿಯದು. ಕಂಡವರ ಶುಶ್ರೂಷೆಯಲ್ಲಿ ತೊಡಗುತ್ತಿದ್ದ ಅವನು ಎಲ್ಲರನ್ನೂ "ನಾರಾಯಣ" ಎಂದೇ ಕರೆಯುತ್ತಿದ್ದ. ಅದರಿಂದಾಗಿ ಎಲ್ಲರಿಗೂ ಅವನು ನಾರಾಯಣನಾದ. ಕೈಲಾಸಕ್ಕೆ ಹೋಗಿ ಬಂದು ಶಿವ ಎನ್ನದೆ ನಾರಾಯಣ ಎನ್ನುತ್ತಿದ್ದುದು ಅವನ ವೈಶಿಷ್ಟ್ಯವಾಗಿದ್ದಿರಬೇಕು! ಆತ ಸ್ಥಾಪಿಸಿದ ಆಶ್ರಮ ನಾರಾಯಣ ಆಶ್ರಮ.

ಡಾ|| ಜಿ. ರಾಮಕೃಷ್ಣ

ಸೇಬಿನ ತೋಟ, ಗೋಶಾಲೆ, ಚಿಕ್ಕ ಆಸ್ಪತ್ರೆ, ಒಂದು ಪ್ರಾಥಮಿಕ ಪಾಠಶಾಲೆ, ಇತ್ಯಾದಿ, ಬಗೆಬಗೆಯ ದಿಕ್ಕುಗಳಲ್ಲಿ ಆತನ ಕ್ರಿಯಾತ್ಮಕತೆ ಹಬ್ಬಿತು. ಈ ಎಲ್ಲ ಚಟುವಟಿಕೆಗಳಿಂದಾಗಿ ಆ ಆಸುಪಾಸಿನ ಸುಮಾರು ನಾನ್ನೂರು ಮಂದಿಗೆ ಹೊಸ ಉದ್ಯೋಗಾವಕಾಶದ ಕಲ್ಪನೆಯಾಯಿತು. ಒಂದೆರಡು ಗೃಹ ಕೈಗಾರಿಕೆಗಳಿಗೂ ಆತ ಗಮನಕೊಟ್ಟು ದೂರದ ಪಿಥೋರಾಗಢ್‌ನ ಆಸ್ಪತ್ರೆಗೆ ಎಕ್ಸ್–ರೇ ಯೂನಿಟ್ ಒಂದು ಸ್ಥಾಪನೆಗಾಗಿ ಹಣ ಕೂಡಿಸಿಕೊಟ್ಟ. ಆತ ಗತಿಸಿದಾಗ ಅವನ ವಯಸ್ಸು ನಲವತ್ತೈದಕ್ಕೂ ಕಡಿಮೆ. ಅವನ ನಂತರ ಆಶ್ರಮದ ಗತಿಯೇನು, ಅವನು ಕಲ್ಪಿಸಿದ್ದ ಉದ್ಯೋಗಾವಕಾಶಗಳೆಲ್ಲಾ ನಶಿಸಿಹೋಗುತ್ತವೆಯೆ, ಆರೋಗ್ಯ-ವಿದ್ಯಾಭ್ಯಾಸಗಳು ಮತ್ತೆ ಯಥಾಸ್ಥಿತಿಗೆ ಹೋಗಿಬಿಡುತ್ತವೆಯೆ? ಈ ಪ್ರಶ್ನೆಗಳು ಆಶ್ರಮದ ಸುತ್ತಮುತ್ತಣ ಜನರನ್ನು ಬಾಧಿಸುತ್ತಿದ್ದುವು. ಅವರಿಗೆ ಉತ್ತರ ದೊರಕಿಸಿಕೊಟ್ಟ ಮಹಾತಾಯಿ ಶ್ರೀಮತಿ ಗಂಗೋತ್ರಿ ಗರ್ಬ್ಯಾಲ್.

ಹಿಂದೆ ತಿಳಿಸಿದ ತವಾಘಾಟ್ ಎಂಬಲ್ಲಿಂದ ಕೈಲಾಸ ಯಾತ್ರಿಗಳು ಟಿಬೆಟ್ಟಿನ ಗಡಿಯತ್ತ ನಡೆದು ಹೋಗುವಾಗ ಐದನೆಯ ದಿನದಂದು ಗರ್ಬ್ಯಾಂಗ್ ಎಂಬ ಗ್ರಾಮವನ್ನು ಹಾದುಹೋಗುತ್ತಾರೆ. ಹಲವು ಶತಮಾನಗಳಿಂದ ಈ ಚಿಕ್ಕಗ್ರಾಮವು ಭಾರತ–ಟಿಬೆಟ್–ನೇಪಾಲಗಳ ಮೂರು ಕಟ್ಟೆಯ ಸಂಧಿ ಸ್ಥಾನವಾಗಿತ್ತು. ಹಳ್ಳಿಯ

"ಕಾನೂನುಗಳ ಸ್ವರೂಪ ಹಾಗೂ ಪ್ರಭುತ್ವದ ಸ್ವಭಾವ ಏನೆಂದು ತಿಳಿಯಬೇಕಾದರೆ ಅವುಗಳಷ್ಟನ್ನೇ ಅಭ್ಯಾಸ ಮಾಡಿದರೆ ಸಾಲದು; ಅವು ಮನುಷ್ಯನ ಮಾನಸಿಕ ಬೆಳವಣಿಗೆಯ ಫಲಗಳಲ್ಲ. ಅವು ಜೀವನದ ಭೌತಿಕ ಪರಿಸ್ಥಿತಿಗಳಿಂದ ಉದ್ಭವಿಸುತ್ತವೆ; ಅವು ಸಮಾಜದೊಳಗಿನ ವ್ಯಕ್ತಿಗಳ ಅಥವಾ ವಿಭಾಗಗಳ ನಿಜವಾದ ಪರಸ್ಪರ ಸಂಬಂಧಗಳ ಪರಿಣಾಮವಾಗಿ ಉದ್ಭವಿಸುತ್ತವೆ." ಈ ಮುಂದಿನ ಲೇಖನಗಳಲ್ಲಿ ಇದನ್ನು ಕಾಣಬಹುದು.

ಕಾನೂನಿನ ಚೌಕಟ್ಟು- ವಿಸ್ತರಣೆಯ ಅಗತ್ಯ

● ಎಚ್. ಎನ್. ನಾಗಮೋಹನದಾಸ್

ಸಾಮಾಜಿಕ ಅನ್ಯಾಯದ ಹಲವು ಮುಖಗಳನ್ನು ನಮ್ಮ ಸಮಾಜದಲ್ಲಿ ನಾವು ಕಾಣುತ್ತಿದ್ದರೂ, ಅದಕ್ಕೆ ವಿಶೇಷವಾಗಿ ಬಲಿಪಶುಗಳಾಗಿರುವವರು ಮಹಿಳೆಯರೇ. ಜನರನ್ನು ಮಾನವೀಯ ಮೌಲ್ಯಗಳಿಂದ ನೋಡದೆ ಕೇವಲ ಅಮೂರ್ತ ಸಂಕೇತಗಳನ್ನಾಗಿ ಮಾರ್ಪಡಿಸಿ ಆಳಿಯುವ ನಮ್ಮ ಕಾನೂನು ಕಟ್ಟಲೆಯ ಕಾರ್ಯ ವಿಧಾನದಿಂದಾಗಿ ಕಾನೂನಿನಿಂದ ನಾವೇನನ್ನು ಅಪೇಕ್ಷಿಸುತ್ತೇವೋ ಅದು ನಿರರ್ಥಕವಾಗಿದೆ. ನ್ಯಾಯದೇಗುಲಗಳಲ್ಲಿ ಇಂದಿಗೂ ಒಂದು ಪ್ರತಿಮೆ ಕಾಣಬರುತ್ತದೆ. ಕಣ್ಣಿಗೆ ಬಟ್ಟೆ ಕಟ್ಟಿಕೊಂಡಿರುವ ನ್ಯಾಯದೇವತೆ ನ್ಯಾಯದ ತಕ್ಕಡಿಯನ್ನು ತನ್ನ ಕೈಯಲ್ಲಿ ಹಿಡಿದುಕೊಂಡಿರುವ ಪ್ರತಿಮೆ ಅದು. ಹದಿನೆಂಟನೆಯ ಶತಮಾನಕ್ಕೆ ಸೇರುವ ಈ ಪ್ರತಿಮೆಯ ಅರ್ಥ ನಮ್ಮ ಇಂದಿನ ಪರಿಸ್ಥಿತಿಯಲ್ಲಿ ಒಂದು ರೀತಿಯಲ್ಲಿ ಅನ್ವರ್ಥತೆಯಿಂದ ಕೂಡಿದೆ ಎನ್ನಬಹುದು; ನ್ಯಾಯದೇವತೆಯು ಸತ್ಯವನ್ನು ಕಾಣದೆ ಕುರುಡಿಯಾಗಿದ್ದು ನ್ಯಾಯಪೀಠದಿಂದ ನ್ಯಾಯದ ಹೆಸರಿನಲ್ಲಿ ಎಂತೆಂಥದೋ ತೀರ್ಪನ್ನು ಕೊಡಿಸುತ್ತಿದ್ದಾಳೆ, ಎಂದು! ಕಾನೂನಿನ ವಿದ್ಯಾರ್ಥಿಯೂ ಸಹ ತನ್ನ ಅಧ್ಯಯನ ಕಾಲದಲ್ಲಿ ಕಾನೂನಿನ ಚೌಕಟ್ಟಿನಲ್ಲಿ ಬರುವ ನಿಬಂಧನೆಗಳನ್ನು ತಾಂತ್ರಿಕವಾಗಿ ತಿಳಿದುಕೊಳ್ಳುತ್ತಾನೆಯೇ ವಿನಾ ಆ ನಿಬಂಧನೆಗಳಿಂದ ಜೀವಂತವಿರುವ ಜನರ ಮೇಲಿನ ಸಾಮಾಜಿಕ ಸಾಂಸ್ಕೃತಿಕ ಪ್ರಭಾವವೇನು ಎಂಬುದರ ಗೋಜಿಗೆ ಹೋಗುವುದಿಲ್ಲ–ನ್ಯಾಯದೇವತೆಯು ತನ್ನ ಕಣ್ಣಿಗೆ ಕಟ್ಟಿಕೊಂಡಿರುವ ಬಟ್ಟೆಯನ್ನು ಕಿತ್ತೊಗೆಯುವಂತೆ ಮಾಡಬೇಕಾದರೆ ಕಾನೂನಿನ ಅಭ್ಯಾಸವು ಜೀವಂತ ಜನರ ಹಿನ್ನೆಲೆಯಲ್ಲಿ ಆಗಿಬರುವ ಅರ್ಥವತ್ತಾದ ಕ್ರಿಯೆಯಾಗಬೇಕು.

ಬ್ರಿಟಿಷರು ನಮ್ಮ ರಾಷ್ಟ್ರದಿಂದ ಹೊರದೂಡಲ್ಪಟ್ಟು ಸುಮಾರು ನಾಲ್ಕು ದಶಕಗಳು ಕಳೆದಿವೆಯಾದರೂ ಅವರ ಏರುಪೇರಿನ ಕಾನೂನಿನ ಬುಡ ಇನ್ನೂ ಭದ್ರವಾಗಿಯೇ ಉಳಿದಿರುವುದು ನಾಚಿಕೆಯ ಪ್ರಸಂಗ. ವಿಜ್ಞಾನ ಹಾಗೂ ತಾಂತ್ರಿಕ ಕುಶಲತೆ ಹೆಚ್ಚುತ್ತಿರುವ ಇಂದಿನ ಸಂದರ್ಭದಲ್ಲಿ ಇನ್ನೂ ಕುರುಡು ಕಾನೂನಿನ ಬಳಕೆಯೇ ಆಗುತ್ತದೆಂದರೆ ಇನ್ನೇನೆನ್ನಲು ಸಾಧ್ಯ! ನ್ಯಾಯದ ನಿರೀಕ್ಷೆಯಲ್ಲಿರುವವರು ನಿರಂತರವಾಗಿ ಕುರುಡಾಗಿ ಉಳಿಯಲಾರರಲ್ಲವೆ? ಬ್ರಿಟನ್ನಿನ ಸಾಮಾಜಿಕ–ಆರ್ಥಿಕ

ಗ್ಲೇಸಿಯರ್‌ನ ಮೇಲೆ ನಿಂತಿರುವುದರಿಂದ ಅದು ಕ್ರಮೇಣ ಕುಸಿಯುತ್ತಿರುವ ಹಳ್ಳಿಯಾಗಿದೆ.

1934ರ ಸುಮಾರಿನಲ್ಲಿ ಆ ಗ್ರಾಮದಿಂದ ಪುಟ್ಟ ಹೆಣ್ಣುಮಗಳೊಬ್ಬಳು ದೂರದ ಅಲ್ಮೋರಾಕ್ಕೆ ಪ್ರಯಾಣ ಬೆಳೆಸಿದ್ದಳು. ಅವಳ ವಯಸ್ಸು ಸುಮಾರು ಹತ್ತು ವರ್ಷ. ಸಾರ್ವಜನಿಕರ ಸಂಚಾರಕ್ಕೆ ಆಗ್ಗೆ ಹೇಳಿಕೊಳ್ಳಬಹುದಾದಂತಹ ಸಾರಿಗೆ ಸೌಲಭ್ಯವಾಗಲಿ ರಸ್ತೆಗಳಾಗಲಿ ಆ ಪ್ರದೇಶದಲ್ಲಿ ಇಲ್ಲವೇ ಇರಲಿಲ್ಲವೆನ್ನಬಹುದು. ಮನೆಯಲ್ಲೇ ಅಕ್ಷರಾಭ್ಯಾಸ ಮಾಡಿಕೊಂಡಿದ್ದ ಈ ಹೆಣ್ಣುಮಗು ಯಾರಿಂದಲೋ ಕೇಳಿ ತಿಳಿದಿದ್ದಳಂತೆ: ಅಲ್ಮೋರಾ ಎಂಬ ಊರಿದೆ, ಅಲ್ಲಿ ಕ್ರಿಶ್ಚಿಯನ್ ಪಾದ್ರಿಗಳು ನಡೆಸುವ ಶಾಲೆಯೊಂದಿದೆ, ಅಲ್ಲಿ ಮಕ್ಕಳಿಗೆ ಪುಕ್ಕಟೆ ವಿದ್ಯಾಭ್ಯಾಸ ನೀಡಲಾಗುತ್ತದೆ, ಎಂದು. ಹತ್ತು ದಿನಗಳ ಕಾಲ ಕಾಲ್ನಡಿಗೆ: ಬೆಟ್ಟ ಹತ್ತುವುದು, ಇಳಿಯುವುದು; ಕಣಿವೆಗಳನ್ನು ಹಾದು ಹೋಗುವುದು; ಚಿಕ್ಕಪುಟ್ಟ ನದಿಗಳನ್ನೂ, ಹೊಳ್ಳೆಗಳನ್ನೂ ಹಾಯುವುದು. ಒಬ್ಬಂಟಿ ಈ ಹುಡುಗಿ ಕಡೆಗೂ ಅಲ್ಮೋರಾ ತಲುಪಿ ಶಾಲೆಗೆ ಸೇರಿದಳು. ಆ ಮಗು ಗಂಗೋತ್ರಿ ಗರ್ಬ್ಯಾಲ್.

> ಗಂಗೋತ್ರಿಯ ಶಿಕ್ಷಣವು ಆ ಪ್ರದೇಶದ ಎಲ್ಲ ಮಹಿಳೆಯರ ಆಸೆ ಆಕಾಂಕ್ಷೆಗಳಿಗೆ ಪ್ರತೀಕ, ಅದಮ್ಯ ಉತ್ಸಾಹದ ನಂದಾದೀಪ. ಗರ್ಬ್ಯಾಂಗ್ ಮತ್ತು ಸುತ್ತಮುತ್ತಲ ಗ್ರಾಮಗಳ ಮಹಿಳೆಯರ ಪೈಕಿ ಪ್ರಪ್ರಥಮ ಪದವೀಧರೆ ಗಂಗೋತ್ರಿ.

ನಮ್ಮ ರಾಜ್ಯದ ಪ್ರತಿಷ್ಠಿತ ವ್ಯಕ್ತಿಯೊಬ್ಬರು ಬೆಂಗಳೂರಿನ ಒಂದು ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡಲು 52 ಮೈಲಿ ನಡೆದು ಬಂದಿದ್ದರಂತೆ. ಕುಮಾರಿ ಗಂಗೋತ್ರಿಯ ಸಾಹಸವು ಇದರ ಹತ್ತಿಪ್ಪತ್ತು ಪಟ್ಟು ಹೆಚ್ಚಿನದು. ಗುಡ್ಡಗಾಡಿನ ಹೆಣ್ಣು ಮಗುವೊಂದು ಶಿಕ್ಷಣ ಪಡೆಯಲು ಹಾತೊರೆಯುವುದು ಇಂದಿಗೂ ಸಹ ಸಾಮಾಜಿಕವಾಗಿ ಅಷ್ಟೇನೂ ಗಣನೀಯವಾಗಿ ಪ್ರಶಂಸೆಗೆ ಗುರಿಯಾಗುತ್ತಿಲ್ಲ. ಅಲ್ಲಿಯ ಜನ ಅದಕ್ಕೆ ಹೆಚ್ಚು ಬೆಂಬಲವನ್ನೂ ನೀಡುತ್ತಿಲ್ಲ. ಈಗಲೂ ಪಾಂಗುವಿನಲ್ಲಿರುವ ಇಂಟರ್ ಕಾಲೇಜಿಗೆ ಮಕ್ಕಳು ಹತ್ತಾರು ಕಿಲೋಮೀಟರ್ ದೂರದ ಬೆಟ್ಟಗಳಿಂದ ಬರುತ್ತಾರೆ. ಹೀಗಿರುವಾಗ ಈಗ್ಗೆ 50 ವರ್ಷಗಳ ಹಿಂದೆ ಅಲ್ಲಿನ ಪರಿಸ್ಥಿತಿ ಹೇಗಿದ್ದಿರಬೇಕು! ಗಂಗೋತ್ರಿಯ ಶಿಕ್ಷಣವು ಆ ಪ್ರದೇಶದ ಎಲ್ಲ ಮಹಿಳೆಯರ ಆಸೆ–ಆಕಾಂಕ್ಷೆಗಳಿಗೆ ಪ್ರತೀಕ, ಅದಮ್ಯ ಉತ್ಸಾಹದ ನಂದಾದೀಪ. ಗರ್ಬ್ಯಾಂಗ್ ಮತ್ತು ಸುತ್ತಮುತ್ತಣ ಗ್ರಾಮಗಳ ಮಹಿಳೆಯರ ಪೈಕಿ ಪ್ರಪ್ರಥಮ ಪದವೀಧರೆ ಗಂಗೋತ್ರಿ.

ಅಲ್ಮೋರಾದಲ್ಲಿ ವ್ಯಾಸಂಗ ಮುಗಿಸಿ ಅಲಹಾಬಾದ್‌ಗೆ ತೆರಳಿದ ಈ ಯುವತಿ ಎಂ. ಎ. ಮತ್ತು ಎಲ್. ಟಿ. ಪದವಿಗಳನ್ನು ಪಡೆದು ಸ್ವತಃ ಕೆಲವು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಅದರ ಮುಖ್ಯಸ್ಥೆಯಾಗಿ ದುಡಿದು ಇತ್ತೀಚೆಗೆ ನಿವೃತ್ತಿ ಹೊಂದಿದ್ದಾರೆ. ನಾರಾಯಣ ಆಶ್ರಮವನ್ನು ಸ್ಥಾಪಿಸಿದ ನಾರಾಯಣ ಎಂಬ ವ್ಯಕ್ತಿಯು ಕೈಗೊಂಡಿದ್ದ ಕಾರ್ಯಕ್ರಮಗಳನ್ನು ಮೆಚ್ಚಿಕೊಂಡಿದ್ದ ಗಂಗೋತ್ರಿ ಮೊದಲಿನಿಂದಲೂ ಆತನಿಗೆ ನೆರವು ನೀಡುವುದರಲ್ಲಿ ಮುಂದಾಗಿದ್ದರು. ಗುಡ್ಡಗಾಡಿನ ಜನರ ವಿದ್ಯಾಭ್ಯಾಸ ಮತ್ತು ಆರೋಗ್ಯದ ಕಡೆಗೆ ವಿಶೇಷ ಗಮನ ನೀಡುವುದರಲ್ಲಿ ಗಂಗೋತ್ರಿ ಆಶ್ರಮ ಬೇರೆಲ್ಲರಿಗಿಂತಲೂ ಒಂದು ಹೆಜ್ಜೆ ಮುಂದೆ. ತಮ್ಮದೇ ವಿದ್ಯಾಸಂಸ್ಥೆಗಳನ್ನು ನಡೆಸುತ್ತಿದ್ದಾಗಲೂ ಈಕೆ ಆಶ್ರಮದ ಕಾರ್ಯಕ್ರಮಗಳಲ್ಲಿ ಆಸಕ್ತಿ ತೋರಿ ಸಹಕಾರ ನೀಡುತ್ತಿದ್ದರು. ಅವಿವಾಹಿತರಾಗಿಯೇ ಉಳಿದಿರುವ ಗಂಗೋತ್ರಿ ಈಗ ನಾರಾಯಣ ಆಶ್ರಮದ ಟ್ರಸ್ಟಿಗಳಲ್ಲೊಬ್ಬರು ಹಾಗೂ ಅಲ್ಲೇ ವಾಸಮಾಡುತ್ತಿದ್ದು ಎಲ್ಲ ಕಾರ್ಯಕ್ರಮಗಳನ್ನೂ ಸುಸೂತ್ರವಾಗಿ ನಡೆಸಿಕೊಂಡು ಹೋಗುವ ಮುಖ್ಯಾಧಿಕಾರಿಣಿ. ಅವರ ಶಕ್ತಿ ಮತ್ತು ನಿಷ್ಠೆ ಅವರನ್ನು ಆ ಪ್ರದೇಶದ ಪ್ರಗತಿಯ ಚಿಲುಮೆಯನ್ನಾಗಿಸಿದೆ. ನಗರದಲ್ಲೆಲ್ಲಾದರೂ ನೆಲೆಸಿ ಅಥವಾ ರಾಜಕೀಯ ರಂಗಕ್ಕಿಳಿದು ಆಕೆ ಪ್ರತಿಷ್ಠೆ ಹಾಗೂ ಅಧಿಕಾರಗಳನ್ನು ಪಡೆದುಕೊಳ್ಳುವುದು ಕಷ್ಟವೇನಲ್ಲ. ಆದರೆ ಗುಡ್ಡಗಾಡಿನ ಜನರ ನಡುವೆ ನಿಂತು ಅವರ ಉದ್ಯೋಗ, ವಿದ್ಯಾಭ್ಯಾಸ ಮತ್ತು ಆರೋಗ್ಯಗಳತ್ತ ಸುಧಾರಣಾ ದೃಷ್ಟಿಯಿಂದ ಅವಿರತವಾಗಿ ದುಡಿಯುತ್ತಿರುವ ಧೀಮಂತ ಮಹಿಳೆ ಗಂಗೋತ್ರಿ ಗರ್ಬ್ಯಾಲ್. ○

ಪರಿಸರದಲ್ಲಿ ಹುಟ್ಟಿಕೊಂಡ ಕಾನೂನಿನ ನಿಯಮಗಳನ್ನು ಅದರಿಂದ ತೀರಾ ಭಿನ್ನವಾದ ನಮ್ಮ ಸಾಂಸ್ಕೃತಿಕ ಸನ್ನಿವೇಶದಲ್ಲಿ ಚಾಚೂ ತಪ್ಪದೆ ಅನ್ವಯ ಮಾಡಿಕೊಳ್ಳುವುದು ಹುಚ್ಚುತನವೋ ಮೋಸವೋ ಎಂಬುದು ಯಾರಿಗಾದರೂ ತಿಳಿದೀತು.

ಒಂದು ಸಾಧಾರಣ ನಿದರ್ಶನವನ್ನು ನೋಡೋಣ: ಒಬ್ಬ ಅನ್ಯಾಯಕ್ಕೊಳಗಾದ ಮಹಿಳೆ ನ್ಯಾಯ ಪಡೆಯಲು ಕಾನೂನಿನ ಆಸರೆ ಪಡೆದು ನ್ಯಾಯಾಲಯದ ಮೊರೆ ಹೊಗುತ್ತಾಳೆ. ಅವಳಿಗೆ ಅನ್ಯಾಯವೆಸಗಿರುವ ಅಪರಾಧಿಯೊಬ್ಬನಿದ್ದಾನೆ. ಆದರೆ ಕಾನೂನಿನ ಅಡಿಯಲ್ಲಿ ಅವನ ಮೇಲೆ ಕ್ರಮ ಜರುಗಿಸಬೇಕಾದರೆ ಅವನು ಅಪರಾಧಿಯೆಂಬುದನ್ನು ಸಾಬೀತುಗೊಳಿಸಲು ಸಾಕ್ಷಿಗಳನ್ನು ಹುಡುಕಿ ತರಬೇಕು ಈ ಮಹಿಳೆ! ಅಟ್ಟದಿಂದ ಬಿದ್ದವರನ್ನು ದಡಿಯಿಂದ ಚಚ್ಚುವುದು ಎಂದರೆ ಇದಲ್ಲವೆ!

> **ಅತ್ಯಾಚಾರಕ್ಕೊಳಗಾದ, ವರದಕ್ಷಿಣೆಯ ಪಿಡುಗಿಗೆ ತುತ್ತಾದ, ಅಥವಾ ಅಂಥಹುದೇ ಇನ್ನಾವುದೋ ದುರ್ನಡತೆಗೆ ಬಲಿಯಾದ ಮಹಿಳೆಯೊಬ್ಬಳು ದೂರನ್ನು ಕೊಟ್ಟರೆ ಅದನ್ನು ಅನುಮಾನದಿಂದ ಅಪನಂಬಿಕೆಯಿಂದ ನೋಡುವುದು ಸಹ ಒಂದು ರೀತಿಯ ಅತ್ಯಾಚಾರವೇ.**

ಅತ್ಯಾಚಾರಕ್ಕೊಳಗಾದ, ವರದಕ್ಷಿಣೆಯ ಪಿಡುಗಿಗೆ ತುತ್ತಾದ, ಅಥವಾ ಅಂಥದೇ ಇನ್ನಾವುದೋ ದುರ್ನಡತೆಗೆ ಬಲಿಯಾದ ಮಹಿಳೆಯೊಬ್ಬಳು ದೂರನ್ನು ಕೊಟ್ಟರೆ ಅದನ್ನು ಅನುಮಾನದಿಂದ ಅಥವಾ ಅಪನಂಬಿಕೆಯಿಂದ ನೋಡುವುದು ಸಹ ಒಂದು ರೀತಿಯ ಅತ್ಯಾಚಾರವೇ ಸರಿ. ಕೇವಲ ಖುಷಿಗಾಗಿ ಎಷ್ಟು ಜನ ಮಹಿಳೆಯರು ಹೀಗೆ ಬಹಿರಂಗವಾಗಿ ತಮ್ಮ ಮೇಲಿನ ದೌರ್ಜನ್ಯಗಳನ್ನು ಹೇಳಿಕೊಳ್ಳಲು ಸಾಧ್ಯ? ಅಥವಾ ಒಬ್ಬ ಗಂಡಸು ವೈರಿಯ ವಿರುದ್ಧ ಸೇಡು ತೀರಿಸಿಕೊಳ್ಳಲು ಮಹಿಳೆ ಈ ರೀತಿಯ ಆಪಾದನೆ ಮಾಡಿಯಾಳೆಂಬ ಭೀತಿಯೋ?– ಪುರುಷ ಪ್ರಧಾನ ಸಮಾಜದಲ್ಲಿ ಪುರುಷನ ಪ್ರತಿಷ್ಠೆಯನ್ನು ವೈಭವಿಸುವ ಮತ್ತು ಅವನ ಸುತ್ತ ಭದ್ರಕೋಟೆಯನ್ನು ಕಟ್ಟಿಕೊಳ್ಳುವ ರೀತಿ ಇದು. ನಿಮ್ಮ ವರ್ಗದ ವ್ಯಕ್ತಿಯೊಬ್ಬನನ್ನು ತುಚ್ಛವಾಗಿ ಹೀಯಾಳಿಸಿದರೆ ಕಾನೂನಿನ ಪ್ರಕಾರ ಆ ವ್ಯಕ್ತಿಗೆ ಸ್ವಲ್ಪಮಟ್ಟಿಗೆ ರಕ್ಷಣೆ ಇದೆ. ಅವನು ನ್ಯಾಯಾಲಯದೆದುರು ಹಾಗೆ ಆಪಾದನೆ ಮಾಡಿದರೆ ಸಾಕ್ಷಿಗಳನ್ನೊದಗಿಸಬೇಕಾದ್ದು ಅವನಲ್ಲ; ಬದಲಾಗಿ, ಆಪಾದಿತ ಹಾಗೆ ಮಾಡಬೇಕು. ಹಲವು ಶತಮಾನಗಳ ಕೈಂಕರ್ಯದಿಂದ ಅಶಕ್ತತೆಯಲ್ಲಿ ಬೆಂದಿರುವವನಿಗೆ ಕಾನೂನಿನ ರಕ್ಷೆ ಇಷ್ಟಾದರೂ ಇಲ್ಲವಾದರೆ ಅಂತಹ ಕಾನೂನಿನಿಂದ ಪ್ರಯೋಜನವಾದರೂ ಯಾರಿಗೆ? ಇದನ್ನೇ ಮಹಿಳೆಯರ ಬಗೆಗೂ ಹೇಳಬೇಕಾದ್ದು ನ್ಯಾಯಾಲಯಗಳ ಕರ್ತವ್ಯವಾಗಬೇಕಿತ್ತು. ಹಾಗಾಗದಿರುವುದು ಅವರ ಮೇಲಿನ ದುರಾಚಾರಗಳಿಗೆ ಕಡಿವಾಣವೇ ಇಲ್ಲದಂತೆ ಮಾಡಿದೆ.

ಭಾರತೀಯ ಗೃಹಿಣಿಯರ ಸಂಘಗಳ ಒಕ್ಕೂಟವು ನಡೆಸಿದ ಒಂದು ಸಮೀಕ್ಷೆಯ ಪ್ರಕಾರ ವೇಶ್ಯಾವೃತ್ತಿಗೆ ಇಳಿದವರ ಪೈಕಿ ಶೇಕಡ 80 ರಷ್ಟು ಮಂದಿ ಮೊದಲಿಗೆ ಅತ್ಯಾಚಾರಕ್ಕೆ ಬಲಿಪಶುಗಳಾಗಿದ್ದವರೇ ಆಗಿದ್ದಾರೆ. ಈ ಅಂಶದಿಂದಲೇ ಸಮಸ್ಯೆಯ ಭೀಕರತೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯ. ಅವಿವಾಹಿತಳೊಬ್ಬಳು ಅತ್ಯಾಚಾರಕ್ಕೆ ಗುರಿಯಾದರೆ ಮುಂದೆ ಯಾರೂ ಅವಳನ್ನು ಮದುವೆಯಾಗದಿರುವ ಸಂಭವವಿರುತ್ತದೆ; ಅಂತೆಯೇ ವಿವಾಹಿತಳಾದವಳಿಗೆ ಅಂತಹ ಸಂದರ್ಭದಲ್ಲಿ ಕುಟುಂಬ ಹಾಗೂ ಸಮಾಜದಲ್ಲಿ ಮರ್ಯಾದೆಯಿಂದ ಬಾಳುವುದು ಅಸಾಧ್ಯವಾಗಿ ಬದುಕು ಅಸಹ್ಯವಾಗುತ್ತದೆ. ಹೀಗಾಗಿ, ಅತ್ಯಾಚಾರಕ್ಕೊಳಗಾಗುವ ಬಹಳಷ್ಟು ಮಹಿಳೆಯರು ಮತ್ತು ಅವಳ ಕುಟುಂಬದವರು ನಡೆದ ಘಟನೆಯನ್ನು ಮುಚ್ಚಿಡಲು ಯತ್ನಿಸುತ್ತಾರೆಯೇ ವಿನಾ ಅಪರಾಧಿಗಳನ್ನು ಶಿಕ್ಷಿಸಲು ಮಾಡಬೇಕಾದ ಪ್ರಯತ್ನಕ್ಕೆ ಕೈಹಾಕುವುದಿಲ್ಲ. ಆದ್ದರಿಂದಲೇ ಅತ್ಯಾಚಾರವನ್ನು ಕುರಿತ ಅಂಕಿ–ಅಂಶಗಳು ನಿಖರವಾಗಿ ದೊರೆಯುವುದು ದೂರದ ಮಾತಾಗಿ ಉಳಿಯುತ್ತದೆ. ಕೆಲವೊಮ್ಮೆಯಂತೂ ಈ ನೀಚ ಅತ್ಯಾಚಾರಗಳನ್ನೆಸಗುವವರು ಸ್ವತಃ ಆ ಮಹಿಳೆಯ ಕುಟುಂಬದವರೇ ಆಗಿದ್ದು ಮಲತಂದೆಯೋ, ಚಿಕ್ಕಪ್ಪ, ಮಾವ ಅಥವಾ ಸೋದರ ಸಂಬಂಧಿಗಳೇ ಆಗಿರುವ ಸಾಧ್ಯತೆ ಇರುತ್ತದೆ. ಹೀಗಿರುವಾಗ ಅಂಕಿ–

(22ನೇ ಪುಟ ನೋಡಿ)

ಸಂಹಿತೆಯನ್ನು ತರುವ ಧೈರ್ಯವಾಗಲೀ, ಮನಸ್ಸಾಗಲೀ ಯಾವ ಸರ್ಕಾರಕ್ಕೂ ಬಂದಿಲ್ಲ. ಆ ಬಗ್ಗೆ ಸರ್ಕಾರದ ಮೇಲೆ ಒತ್ತಾಯ ತರುವ ಪ್ರಯತ್ನವೂ ನಡೆದಿಲ್ಲ. ಅಲ್ಪ ಸಂಖ್ಯಾತರ ಮತೀಯ ವಿಷಯದಲ್ಲಿ ಕೈಹಾಕಲು ಸರ್ಕಾರ ಹಿಂಜರಿದರೆ, ಧರ್ಮವನ್ನು ಲೌಕಿಕ ವಿಷಯಗಳಿಂದ ಬೇರ್ಪಡಿಸಲು ಆಯಾಯ ಧರ್ಮಗಳ ಧಾರ್ಮಿಕ ಗುರುಗಳು, ಧರ್ಮಭೀರುಗಳೂ ಇಷ್ಟಪಡುತ್ತಿಲ್ಲ. ಜನಸಾಮಾನ್ಯರ ಧರ್ಮಭೀರುತ್ವವನ್ನು ಉಪಯೋಗಿಸಿಕೊಂಡು ಧಾರ್ಮಿಕ ಗುರುಗಳು ಅವರು ಸದಾ ತಮ್ಮ ಅಂಕೆಯಲ್ಲಿದ್ದು, ತಮ್ಮ ಸ್ಥಾನ–ಮಾನಕ್ಕೆ ಚ್ಯುತಿ ತರದಂತೆ ಜಾಗರೂಕರಾಗಿ ನೋಡಿಕೊಳ್ಳುತ್ತಿದ್ದಾರೆ.

ಮತೀಯ ಶಾಸನ

ವಿವಾಹ, ವಿಚ್ಛೇದನ, ಜೀವನಾಂಶ, ಮಕ್ಕಳ ಪಾಲನೆ, ದತ್ತುಸ್ವೀಕಾರ, ಆಸ್ತಿಹಕ್ಕು ಈ ಮೊದಲಾದ ವಿಷಯಗಳಲ್ಲಿ ನಮ್ಮ ದೇಶದಲ್ಲಿ ಮುಸಲ್ಮಾನರು, ಹಿಂದೂಗಳು, ಕ್ರಿಶ್ಚಿಯನ್ನರು, ಪಾರ್ಸಿಗಳು ತಮ್ಮ–ತಮ್ಮ ಮತೀಯ ಶಾಸನಗಳ ವ್ಯಾಪ್ತಿಗೆ ಒಳಪಡುತ್ತಾರೆ. ಇಸ್ಲಾಮಿ ಕಾನೂನು ಕುರಾನಿನ ಮೇಲೆ ಆಧಾರಿತವಾಗಿದ್ದರೆ, ಹಿಂದೂ ಧರ್ಮಗ್ರಂಥಗಳ, ವ್ಯಾಖ್ಯಾನಗಳ ಮೇಲೆ ಹಿಂದೂ ಶಾಸನ ರೂಪಿತವಾಗಿತ್ತು. ಬ್ರಿಟಿಷರ ಕಾಲದ ಶಾಸನಗಳು ಕ್ರಿಶ್ಚಿಯನ್ನರಿಗೆ, ಪಾರ್ಸಿಗಳಿಗೆ ಅನ್ವಯಿಸುತ್ತವೆ. ಇವುಗಳೆಲ್ಲಾ ನೂರಾರು ವರ್ಷಗಳ ಹಿಂದಿನ ಸಮಾಜವನ್ನು ವ್ಯವಸ್ಥೆಯನ್ನು, ಜೀವನ ಮೌಲ್ಯವನ್ನು ಪ್ರತಿನಿಧಿಸುತ್ತಿದ್ದು ನಾವು ಅಲ್ಲಿಂದ ಸಾಕಷ್ಟು ದಾರಿಯನ್ನು ಕ್ರಮಿಸಿದ್ದೇವೆ. ಸಮಾಜಗಳು ನಾಗರೀಕವಾಗಿವೆ, ಮೌಲ್ಯಗಳು ಬದಲಾಗಿವೆ. ಆದ್ದರಿಂದ, ಈ ಶಾಸನಗಳು ಪ್ರತಿಪಾದಿಸುವ ವ್ಯವಸ್ಥೆಯಲ್ಲಿ, ಮೌಲ್ಯಗಳಲ್ಲಿ ಬದಲಾವಣೆ ತರುವುದು ಅತ್ಯಾವಶ್ಯಕವಾಗಿದೆ. ಜನಜೀವನ ಸಹ್ಯವಾಗಲು, ಜೀವನ ಭಾರವಾಗದಿರಲು, ಉತ್ತಮ ಬಾಳನ್ನು ಬಾಳಲು ತುರ್ತು ತಿದ್ದುಪಡಿ ಈ ಶಾಸನಗಳಿಗೆ ಅವಶ್ಯಕವಾಗಿದೆ. ಏಕರೂಪದ ಸಿವಿಲ್ ಸಂಹಿತೆ ಈಗ ಕನಸಿನ ಮಾತಾಗಿ ಉಳಿದಿದ್ದರೂ, ಮತೀಯ ಶಾಸನಗಳಲ್ಲೇ ತಿದ್ದುಪಡಿ ತರುವ ಪ್ರಯತ್ನವನ್ನಾದರೂ ಆರಂಭಿಸಬೇಕಾಗಿದೆ. ಕನಿಷ್ಠ ಆ ದಿಸೆಯಲ್ಲಿ ರಾಷ್ಟ್ರೀಯ ಮಟ್ಟದ ಚರ್ಚೆಯನ್ನಾದರೂ ಆರಂಭಿಸಬಹುದಾಗಿದೆ.

ತಿದ್ದುಪಡಿ

ಈವರೆಗೆ ತಿದ್ದುಪಡಿ ಏನಾದರೂ ಆಗಿದ್ದಲ್ಲಿ ಅದು ಹಿಂದೂ ಮತೀಯ ಶಾಸನದಲ್ಲಿ ಮಾತ್ರ ಆಗಿರುವುದು. ರಾಜಾರಾಮ ಮೋಹನರಾಯ್‌ರಂತಹ ಧೀಮಂತ ವ್ಯಕ್ತಿಗಳ ಚಳವಳಿಯಿಂದಾಗಿ, ಒಲ್ಲದ ಮನಸ್ಸಿನಿಂದ ಬ್ರಿಟಿಷ್ ಸರ್ಕಾರ ಈ ಬಗ್ಗೆ ಒಂದು ಸಮಿತಿಯನ್ನು ನೇಮಿಸಿತು. ಅದರ ಫಲವೇ 1955, 1956 ರ 4 ಮುಖ್ಯ ಅಧಿನಿಯಮಗಳು–ಹಿಂದೂ ವಿವಾಹ ಅಧಿನಿಯಮ, ಹಿಂದೂ ದತ್ತಕ ಮತ್ತು ಜೀವನಾಂಶ ಅಧಿನಿಯಮ, ಹಿಂದೂ ಉತ್ತರಾಧಿಕಾರ ಅಧಿನಿಯಮ ಮತ್ತು ಹಿಂದೂ ಅಪ್ರಾಪ್ತವಯಸ್ಕತೆ ಮತ್ತು ಪಾಲಕತ್ವದ ಅಧಿನಿಯಮ. ಇದಕ್ಕೂ ಮೊದಲು ವಿಧವಾ ವಿವಾಹ, ಸಗೋತ್ರವಿವಾಹ, ಸತೀ ಪದ್ಧತಿ ನಿಷೇಧ, ಬಾಲ್ಯವಿವಾಹ ನಿಷೇಧದ ಕಾನೂನುಗಳು ಜಾರಿಗೆ ಬಂದಿದ್ದು 1955–56 ರಲ್ಲಿ ಅನೇಕ ಮೂಲಭೂತ ತಿದ್ದುಪಡಿಗಳು ತರಲ್ಪಟ್ಟವು. ಪ್ರಥಮ ಬಾರಿಗೆ ಬಹುಪತ್ನಿತ್ವ ಕಾನೂನು ಬಾಹಿರವೆಂದು ಘೋಷಿಸಲ್ಪಟ್ಟಿತು. ಕನ್ಯೆಯರ ವಿವಾಹ ಯೋಗ್ಯವಯಸ್ಸನ್ನು 16 ಎಂದು ಮಾಡಿ ಬಾಲ್ಯವಿವಾಹವನ್ನು ತಡೆಗಟ್ಟಲು ಪ್ರಯತ್ನಿಸಲಾಯಿತು. ಮುಂದೆ 1976 ರಲ್ಲಿ ಇದನ್ನು 18 ವಯಸ್ಸಿಗೆ ಏರಿಸಲಾಯಿತು. ಮಹಿಳೆಯರಿಗೂ ಕೆಲವೊಂದು ಕಾರಣಗಳಿಗಾಗಿ ವಿಚ್ಛೇದನ ಪಡೆಯಲು ಅವಕಾಶ ಕಲ್ಪಿಸಲಾಯಿತು. ಪೂರ್ವಜರ ಆಸ್ತಿಯಲ್ಲಿ, ತಂದೆಯ–ಗಂಡನ ಸ್ವಂತಗಳಿಕೆಯ ಆಸ್ತಿಯಲ್ಲಿ, ಅವರ ಮರಣಾನಂತರ, ಮಹಿಳೆಯರಿಗೂ ಆಸ್ತಿ ಹಕ್ಕು ನೀಡಲಾಯಿತು. ವಿಧವೆಯರು, ವಿಚ್ಛೇದನ ಹೊಂದಿದ ಮಹಿಳೆಯರು, ಅವಿವಾಹಿತ ಸ್ತ್ರೀಯರು ತಮ್ಮ ಹೆಸರಿನಲ್ಲಿಯೇ ಮಕ್ಕಳನ್ನು ದತ್ತು ಪಡೆಯಲು ಅವಕಾಶ ಕೊಡಲಾಯಿತು. ಗಂಡುಮಕ್ಕಳನ್ನಲ್ಲದೇ ಹೆಣ್ಣು ಮಕ್ಕಳನ್ನು ದತ್ತು ಪಡೆಯಲು ಹೊಸದಾಗಿ ಹಕ್ಕು ನೀಡಲಾಯಿತು. 1976 ರಲ್ಲಿ ಪುನಃ ಇವುಗಳಿಗೆ ಕೆಲವೊಂದು ಸೇರ್ಪಡೆಯನ್ನು ಮಾಡಲಾಯಿತು. ಒಟ್ಟ

ಮಹಿಳೆಯ ಅಸ್ತಿತ್ವವನ್ನೇ ಪ್ರಶ್ನಿಸುವ ಮತೀಯ ಶಾಸನಗಳು

● ಹೇಮಲತಾ ಮಹಿಷಿ

ನಮ್ಮ ದೇಶದ ಪ್ರಧಾನಿಯವರು ಈಗ ದೇಶವನ್ನು 21 ನೆಯ ಶತಮಾನಕ್ಕೆ ತೆಗೆದುಕೊಂಡು ಹೋಗುವ ಕಾತುರವನ್ನು, ಆತುರವನ್ನು ತೋರಿಸುತ್ತಿದ್ದಾರೆ. ಹೆಚ್ಚು-ಹೆಚ್ಚು ಕಂಪ್ಯೂಟರ್‌ಗಳು ಇನ್ನು ಮುಂದೆ ಬಳಕೆಯಾಗುತ್ತವೆ. ಎಲೆಕ್ಟ್ರಾನಿಕ್ ಸಾಮಾನುಗಳು ಮಾರುಕಟ್ಟೆಯನ್ನು ತುಂಬುತ್ತವೆ. ವೈಜ್ಞಾನಿಕ ರೀತಿ–ನೀತಿಗೆ ಮನ್ನಣೆ ದೊರೆಯುತ್ತದೆ. ಆದರೆ, ಕೇವಲ ಬಾಹ್ಯಾಕಾಶ ಯಾತ್ರೆ ಮಾಡುವುದರಿಂದ, ಕಂಪ್ಯೂಟರ್‌ನಿಂದ ನಿಖರವಾದ ಅಂಕಿ ಅಂಶಗಳನ್ನು,ಉತ್ತರಗಳನ್ನು ಪಡೆಯುವುದರಿಂದ ನಮ್ಮ ದೇಶವನ್ನು 21 ನೆಯ ಶತಮಾನಕ್ಕೆ ತೆಗೆದುಕೊಂಡು ಹೋಗಲು ಸಾಧ್ಯವೆ ? ಬಹುಶಃ ಪ್ರಧಾನಿಯವರಿಗೆ ಇನ್ನೂ ಭಾರತದ ಜನ–ಜೀವನದ, ಅದರಲ್ಲಿ ಹಾಸು ಹೊಕ್ಕಗಿರುವ ಮೂಢ ನಂಬಿಕೆಗಳ, ಸಂಪ್ರದಾಯಗಳ ತ್ರೇತಾಯುಗದ ಜೀವನ ಮೌಲ್ಯಗಳ ಪರಿಚಯವಾದಂತಿಲ್ಲ. ನಾವಿನ್ನೂ ಕ್ರಿಸ್ತ ಪೂರ್ವದಲ್ಲಿದ್ದೇವೇನೋ ಎನ್ನಿಸುವ ಸಾಮಾಜಿಕ ವ್ಯವಸ್ಥೆಯ, ಜನತೆಯ ಮನೋಭಾವದ ಹಿನ್ನೆಲೆಯಲ್ಲಿ ದೇಶವನ್ನು 21 ನೇ ಶತಮಾನಕ್ಕೆ ತೆಗೆದುಕೊಂಡು ಹೋಗುವ ಕನಸುಗಾರಿಕೆಯನ್ನು ಹೊಂದಿರುವುದು ನಿಜಕ್ಕೂ ಮೆಚ್ಚಬೇಕಾದ ಅಂಶವಾಗಿದ್ದರೂ, ಕೇವಲ ಕನಸುಗಾರಿಕೆಯಷ್ಟೇ ಸಾಲದು. ಯಾವುದೇ ಕನಸು ನನಸಾಗಬೇಕಾದರೆ ಅದರ ಬೇರು ಭೂಮಿಯಲ್ಲಿ ಭದ್ರವಾಗಿ ಇಳಿದಿರಬೇಕಾಗುತ್ತದೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ. ಕಂಪ್ಯೂಟರ್ ಬಗ್ಗೆ, ಗಗನ ಯಾತ್ರೆಯ ಬಗ್ಗೆ ಮಾತನಾಡುವ ನಾವೇ ಅವಿವಾಹಿತ, ವಿಧವಾ, ಬಂಜೆ ಅಥವಾ ವಿವಾಹವಿಚ್ಛೇದನಪಡೆದ ಮಹಿಳೆಯ ಬಗ್ಗೆ ತುಚ್ಛೀಕಾರದಿಂದ ನೋಡುತ್ತೇವೆ. ಪರದಾ, ತಲಾಖ್, ಬಹುಪತ್ನಿತ್ವವನ್ನು ಮಾನ್ಯಮಾಡುವುದಷ್ಟೇ ಅಲ್ಲ ಆದರಲ್ಲಿ ಯಾವುದೇ ಬದಲಾವಣೆಯನ್ನು ವಿರೋಧಿಸುತ್ತೇವೆ. ಧರ್ಮದ ಹೆಸರಿನಲ್ಲಿ ವಿಚ್ಛೇದನವನ್ನು, ಸಂತತಿ ನಿಯಂತ್ರಣವನ್ನು ಪ್ರತಿಭಟಿಸುತ್ತೇವೆ. ಮನುವಿನ, ಕ್ರಿಸ್ತನ, ಮಹಮ್ಮದ್ ಪೈಗಂಬರರ ಕಾಲದ ಸಾಮಾಜಿಕ ಜೀವನ ವ್ಯವಸ್ಥೆಯನ್ನೇ, ಏನು ಬೆಲೆ ತೆತ್ತಾದರೂ, ಉಳಿಸಿಕೊಂಡು ಬರಲು ಪ್ರಯತ್ನಿಸುತ್ತೇವೆ ಎನ್ನುವುದನ್ನು ಕಂಡಾಗ ಕನಸುಗಾರಿಕೆಯ ಹಿಂದೆ ನಿರಾಶೆಯ ನಿಟ್ಟುಸಿರು ಸಹಜವಾಗಿಯೇ ಹೊರಬರುತ್ತದೆ.

> ಮನುವಿನ, ಕ್ರಿಸ್ತನ, ಮಹಮದ್ ಪೈಗಂಬರರ ಕಾಲದ ಸಾಮಾಜಿಕ ಜೀವನ ವ್ಯವಸ್ಥೆಯನ್ನೇ, ಏನು ಬೆಲೆ ತೆತ್ತಾದರೂ, ಉಳಿಸಿಕೊಂಡು ಬರಲು ಪ್ರಯತ್ನಿಸುತ್ತೇವೆ ಎನ್ನುವುದನ್ನು ಕಂಡಾಗ ಕನಸುಗಾರಿಕೆಯ ಹಿಂದೆ ನಿರಾಸೆಯ ನಿಟ್ಟುಸಿರು ಸಹಜವಾಗಿಯೇ ಹೊರಬರುತ್ತದೆ.

ನಮ್ಮ ದೇಶದಲ್ಲಿ ಇಂದಿಗೂ ಕೆಲವೊಂದು ವಿಷಯಗಳಲ್ಲಿ ಪ್ರತಿಯೊಂದು ಧರ್ಮದ ಜನರು ತಮ್ಮದೇ ಆದ ಮತೀಯ ಶಾಸನದ(ವೈಯಕ್ತಿಕ ಶಾಸನದ) ವ್ಯಾಪ್ತಿಗೆ ಒಳಪಡುತ್ತಾರೆನ್ನುವುದೇ 20 ನೇ ಶತಮಾನದ ಒಂದು ಆಶ್ಚರ್ಯಕರ ವಿಷಯವಾಗಿದೆ. ಇದುವರೆಗೆ, ಈ ಮತೀಯ ಶಾಸನಗಳನ್ನು ತೆಗೆದುಹಾಕಿ, ಅದರ ಜಾಗದಲ್ಲಿ ಕಾಲಕ್ಕೆ ಸರಿಹೊಂದುವ ಏಕ ರೂಪದ ಸಿವಿಲ್

ನಲ್ಲಿ ಬದಲಾದ ಕಾಲಕ್ಕೆ, ಮನೋಭಾವಕ್ಕೆ ತಕ್ಕಂತೆ, ಸಮಾಜದ ನಿರೀಕ್ಷೆಗೆ ಅನುಗುಣವಾಗಿ ಶಾಸನವನ್ನು ಮಾರ್ಪಡಿಸಲಾಯಿತು. ಇನ್ನೂ ಕುಟುಂಬದ ಆಸ್ತಿಯಲ್ಲಿನ ಸ್ತ್ರೀಯರ ಹಕ್ಕಿನ ಸಂಬಂಧವಾಗಿ ಕೆಲವೊಂದು ತಿದ್ದುಪಡಿಗಳು ಅವಶ್ಯಕವಿದ್ದು ಈಗಾಗಲೇ ಕೆಲವೊಂದು ರಾಜ್ಯಸರ್ಕಾರಗಳು ಈ ದಿಸೆಯಲ್ಲಿ ಹೆಜ್ಜೆ ಇಟ್ಟಿವೆ ಆದರೆ, ಈ ಬಗ್ಗೆ ಕೇಂದ್ರ ಅಧಿನಿಯಮದಲ್ಲಿ ತಿದ್ದುಪಡಿ ತರುವುದು ಯೋಗ್ಯವಾಗಿದ್ದು ಆ ಬಗ್ಗೆ ಆದಷ್ಟು ಶೀಘ್ರವಾಗಿ ಕ್ರಮ ಕೈಗೊಳ್ಳಬೇಕಿದೆ.

ಕ್ರಮ ಇಲ್ಲ

ಆದರೆ, ಇದೇ ಮಾತನ್ನು ಇಸ್ಲಾಮಿ ಶಾಸನ ಹಾಗೂ ಕ್ರಿಶ್ಚಿಯನ್, ಪಾರ್ಸಿ ಶಾಸನದ ಬಗ್ಗೆ ಹೇಳುವಂತಿಲ್ಲ. 1939 ರ ಮುಸ್ಲಿಂ ವಿವಾಹ ವಿಚ್ಛೇದನ ಅಧಿನಿಯಮ ಬಿಟ್ಟರೆ ಬೇರುವುದೇ ಶಾಸನಾತ್ಮಕ ಕ್ರಮವನ್ನು ಕೈಗೊಂಡಿಲ್ಲ. ಮುಸ್ಲಿಂ ಪುರುಷರು ಇಂದಿಗೂ 4 ಪತಿಯರನ್ನು ಹೊಂದಲು ಸಾಧ್ಯ. ನ್ಯಾಯಾಲಯಕ್ಕೆ ಹೋಗದೇ ಏನೂ ಕಾರಣಕೊಡದೇ, 'ತಲಾಕ್' ಪದ್ಧತಿಯ ಮೂಲಕ ಸುಲಭವಾಗಿ ವಿಚ್ಛೇದನ ಹೊಂದಲು ಸಾಧ್ಯ. ಆದರೆ, ಮುಸ್ಲಿಂ ಮಹಿಳೆ ಮಾತ್ರ ನ್ಯಾಯಾಲಯಕ್ಕೆ ಹೋಗಿ ಕೆಲವೊಂದು ಕಾರಣಗಳನ್ನು ಸಾಬೀತುಗೊಳಿಸಿದ ನಂತರವೇ ವಿಚ್ಛೇದನ ಪಡೆಯಬಲ್ಲಳು. ಆಸ್ತಿಹಕ್ಕು ಇದ್ದರೂ ಪುರುಷನೊಂದಿಗೆ ಸಮಪಾಲಿಲ್ಲ. ಪುರುಷನಿಗೆ ಮೂರನೆ ಎರಡು ಭಾಗ ಬಂದರೆ ಮಹಿಳೆಗೆ ಮೂರನೆ ಒಂದು ಭಾಗ ಮಾತ್ರ.

ಕ್ರಿಶ್ಚಿಯನರ ವಿಷಯಕ್ಕೆ ಬಂದರೆ, 1872 ರ ಭಾರತ ಕ್ರಿಶ್ಚಿಯನ್ ವಿವಾಹ ಅಧಿನಿಯಮ ಮತ್ತು 1869 ರ ಭಾರತ ವಿವಾಹ ವಿಚ್ಛೇದನ ಅಧಿನಿಯಮವಷ್ಟೇ ನಮಗೆ ಕಂಡು ಬರುವುದು. ಇವು ಹೋದ ಶತಮಾನದ ಅಧಿನಿಯಮಗಳಾಗಿದ್ದು, ಬ್ರಿಟಿಶ್ ಆಳರಸರ ಧೋರಣೆ ನೀತಿಯನ್ನು ಮಾತ್ರ ಪ್ರತಿಬಿಂಬಿಸುತ್ತವೆ. ಇಂದಿಗೂ ಕ್ರಿಶ್ಚಿಯನ್ ಧರ್ಮದಲ್ಲಿ ವಿವಾಹ ವಿಚ್ಛೇದನಕ್ಕೆ ಮನ್ನಣೆ ಇಲ್ಲವೆಂಬುದನ್ನು ಕಂಡಾಗ ಆಶ್ಚರ್ಯವಾಗುತ್ತದೆ. ಕ್ರಿಶ್ಚಿಯನ್ ಪುರುಷನಿಗೆ ವಿಚ್ಛೇದನ ಪಡೆಯಲು ಹೆಂಡತಿಯ ವ್ಯಭಿಚಾರ ಒಂದೇ ಕಾರಣವಾದರೆ, ಮಹಿಳೆಗೆ ವಿಚ್ಛೇದನ ಪಡೆಯಲು ಕೇವಲ ಪತಿಯ ವ್ಯಭಿಚಾರವಲ್ಲದೇ ಅದರೊಂದಿಗೆ ಕ್ರೌರ್ಯವನ್ನೋ, ತ್ಯಜಿಸುವಿಕೆಯನ್ನೋ, ಮತ್ತೇನನ್ನೋ ಸಾಬೀತುಪಡಿಸಬೇಕಾಗುತ್ತದೆ. ಪತಿಯ ವ್ಯಭಿಚಾರವಲ್ಲದೇ, ಅಸ್ವಾಭಾವಿಕ ಲೈಂಗಿಕಕ್ರಿಯೆ, ಬೇರೆ ಧರ್ಮಕ್ಕೆ ಪರಿವರ್ತಿತವಾಗಿ ಪತಿಯು ಬೇರೆ ವಿವಾಹವಾಗಿರುವುದು ಇವು ಮಾತ್ರ ಪತ್ನಿಗೆ ವಿವಾಹ ವಿಚ್ಛೇದನ ದೊರಕಿಸಿಕೊಡಬಲ್ಲವು. ಮತ್ತಾವ ಕಾರಣವೂ ಎಷ್ಟೇ ಬಲವತ್ತರವಾಗಿದ್ದರೂ, ವಿವಾಹವಿಚ್ಛೇದನಕ್ಕೆ ಕಾರಣವಾಗಲಾರವು. ಜೀವಮಾನ ಪರ್ಯಂತ ಪತಿ–ಪತ್ನಿ ಬೇರೆ ಬೇರೆಯಾಗಿದ್ದರೂ ವಿವಾಹ ವಿಚ್ಛೇದನ ಹೊಂದಿ ಅವರು ಹೊಸಜೀವನ ನಡೆಸಲಾರರು. ಪತಿಯ ಎಂತಹ ಮೃಗೀಯ ಮಟ್ಟದ ಕ್ರೌರ್ಯವೂ ಪತ್ನಿಗೆ ವಿವಾಹ ಬಂಧನದಿಂದ ಮುಕ್ತಿ ದೊರಕಿಸಿಕೊಡಲಾರದು. ವಿವಾಹವು ಒಮ್ಮೆಯಾದರೆ ಮುಗಿಯಿತು ಇಹದಲ್ಲಲ್ಲದೇ ಸ್ವರ್ಗದಲ್ಲೂ ಅವರು ಜೊತೆಗಾರರುಎಂಬ ನಂಬಿಕೆಯೇ ಇದರ ಹಿಂದಿರುವ ತತ್ವ. ಇಹದಲ್ಲಿ ಪತಿಯಿಂದ ನರಕಯಾತನೆಯನ್ನು ಅನುಭವಿಸಿದ ಯಾವ ಪತ್ನಿಯು ತಾನೇ ಸ್ವರ್ಗದಲ್ಲೂ ಅವನೊಂದಿಗೆ ಇರಲು ಬಯಸಿಯಾಳು ?

ಧರ್ಮದ ಈ ಬಿಗಿಮುಷ್ಟಿಯಿಂದ ಲೌಕಿಕ ವಿಷಯಗಳನ್ನು ಬಿಡಿಸಿದ ಹೊರತು ಜನಸಾಮಾನ್ಯರ ಜೀವನ ಸಹ್ಯವಾಗುವುದಿಲ್ಲ. ಆದರಲ್ಲೂ ಈ ಎಲ್ಲಾ ಮತೀಯ ಶಾಸನಗಳಲ್ಲಿ ಅನ್ಯಾಯವಾಗಿರುವುದು ಮಹಿಳೆಗೇ. ಇದರಲ್ಲಿ ಒಳಗೊಂಡಿರುವ ತತ್ವಗಳು ಅವಳ ಅಸ್ತಿತ್ವವನ್ನೇ ತೊಡೆದು ಹಾಕುತ್ತವೆ; ಅವಳನ್ನು ಒಂದು ಸರಕನ್ನಾಗಿ, ಪ್ರಾಣಿಯನ್ನಾಗಿಯೂ ಭಾವಿಸುತ್ತವೆ. ಈ ಅನ್ಯಾಯಗಳ, ತಾರತಮ್ಯ ಧೋರಣೆಯ ವಿರುದ್ಧ ಸಿಡಿದೇಳುವುದು ಮಹಿಳೆಯ ತಕ್ಷಣದ ಕಾರ್ಯಕ್ರಮವಾಗಬೇಕಾಗಿದೆ. ಬದಲಾವಣೆಯ ಬಗ್ಗೆ ದಿಟ್ಟ ಅಭಿಪ್ರಾಯ ವ್ಯಕ್ತಪಡಿಸುತ್ತಿರುವ ಸಾರಾ ಅಬೂಬಕರರಂತಹ ವಿಚಾರವಂತ ಮಹಿಳೆಯರನ್ನು ಹತ್ತಿಕ್ಕಲು ಪ್ರಯತ್ನಿಸಲಾಗುತ್ತಿದೆ. ಪ್ರವಾಹದ ವಿರುದ್ಧ ಹೋರಾಡಬೇಕಾದ ಮಹಿಳೆ ಧೈರ್ಯಗೆಡದೇ ಮುನ್ನಡೆಯಬೇಕಾಗಿದೆ. ಮುಖ್ಯವಾಗಿ, ಮಹಿಳೆಯರ ವಿಚಾರದಲ್ಲಿ, ಧ್ಯೇಯ ಧೋರಣೆಯಲ್ಲಿ ಬದಲಾವಣೆ ತರಬೇಕಾಗಿದೆ. ○

ಮಹಿಳಾ ವಿಮೋಚನೆಗೆ ಜಿಹಾದ್

● ಭಾರತಿ

ಗೃಹ ಸಚಿವರಿಗೆ ಸಲ್ಲಿಸಿರುವ ತನ್ನ ವರದಿಯಲ್ಲಿ ಅಲ್ಪ ಸಂಖ್ಯಾತರ ಆಯೋಗವು ಮುಸ್ಲಿಂ ವೈಯಕ್ತಿಕ ಕಾನೂನಿನಲ್ಲಿ ಯಾವುದೇ ಬದಲಾವಣೆಯನ್ನು ವಿರೋಧಿಸಿದೆ.

ಭಾರತದ ಮೂಲಭೂತವಾದ ಜಾತ್ಯಾತೀತ ತತ್ವಕ್ಕೆ ಧಕ್ಕೆ ಬಾರದಿರುವವರೆಗೆ ಧರ್ಮವನ್ನು ಹಾಗೆ ಬಿಡುವುದು ಉಚಿತ ಎಂದು ಆಯೋಗ ಹೇಳಿಕೊಂಡಿದೆ.

ಮುಸ್ಲಿಂ ವೈಯಕ್ತಿಕ ಕಾನೂನು ವಿಶ್ವದಲ್ಲೇ ವಿವಾದ ಎಬ್ಬಿಸಿದೆ. ಅನೇಕ ಧಾರ್ಮಿಕ ಮುಖಂಡರು ಸೂಕ್ಷ್ಮ ವಿಷಯಗಳಾದ ಆಸ್ತಿಹಕ್ಕು, ವಿವಾಹ ವಿಚ್ಛೇದನ, ಬಡ್ಡಿ ವ್ಯವಹಾರ ಮತ್ತು ಕುಟುಂಬಯೋಜನೆ ವಿಚಾರಗಳನ್ನು

ಸುಪ್ರಿಂ ಕೋರ್ಟಿನಲ್ಲಿ ಷಹ್‌ನಾಜ್‌ಶೇಖ್ ತಮ್ಮ ಅರ್ಜಿಯಲ್ಲಿ ಮಂಡಿಸಿರುವ ವಾದದ ಸಂಗ್ರಹಾನುವಾದ.

ಇಜ್‌ತೇಹಾದ್ (ಒಟ್ಟಭಿಪ್ರಾಯ)ಗೆ ಬಿಡಬೇಕೆಂದು ಹೇಳುತ್ತಿರುವ ಸಮಯದಲ್ಲಿಯೇ ಅದರ ವಿರುದ್ಧ ಅಲ್ಲಲ್ಲೇ ಹೋರಾಟದ ಧ್ವನಿಗಳು ಏಳುತ್ತಿವೆ. ಅನೇಕ ಮಹಿಳಾ ಸಂಘಟನೆಗಳಲ್ಲದೆ ವೈಯಕ್ತಿಕವಾಗಿ ಕೂಡ ಪ್ರತಿರೋಧ ಮೂಡಿ ಬಂದಿದೆ.

ಮಾನಸಿಕ, ದೈಹಿಕ ಹಿಂಸೆಯಾಗಿರುವ ಕ್ರೂರ ಸಂಪ್ರದಾಯ, ಪದ್ಧತಿಯಿಂದ ಮುಕ್ತಿಬೇಕು. ಕ್ರೂರ ಕಾನೂನು ಬದಲಾಗಬೇಕೆಂದು ಮುಸ್ಲಿ ಮಹಿಳೆಯರೇ ಈಗ ಪ್ರತ್ಯಕ್ಷವಾಗಿ ಆಂದೋಲನ ನಡೆಸುತ್ತಿದ್ದಾರೆ. ನ್ಯಾಯಾಂಗದ ಮೊರೆ ಹೋಗುತ್ತಿದ್ದಾರೆ. ಮುಸ್ಲಿಂ ಮಹಿಳೆಯರ ವಿಮೋಚನೆಗಾಗಿ ಷಹ್‌ನಾಜ್‌ಶೇಖ್ ಎಂಬ ಮಹಿಳೆ ಇದೀಗ ಜಿಹಾದ್ ನಡೆಸುತ್ತಿದ್ದಾರೆ; ಸುಪ್ರಿಂಕೋರ್ಟ್ ಹೊಕ್ಕಿದ್ದಾರೆ.

ಷಹ್‌ನಾಜ್‌ಶೇಖ್ 14–12–1980ರಂದು ಸುಪ್ರೀಂ ಕೋರ್ಟಿನಲ್ಲಿ ರಿಟ್ ಹಾಕಿದರು. ಕೇಂದ್ರ (ಭಾರತ) ಸರ್ಕಾರವನ್ನು ಪ್ರಥಮ ಪ್ರತಿವಾದಿ ಎಂದೂ ಅಬ್ದುಲ್ ರಾಜ್‌ರವೀಶ್ ಅವರನ್ನು ಎರಡನೆ ಪ್ರತಿವಾದಿ ಎಂದೂ ಅರ್ಜಿಯಲ್ಲಿ ಕರೆಯಲಾಗಿದೆ.

ನಾಲ್ಕು ಅಂಶ

ಷಹ್‌ನಾಜ್ ತಮ್ಮ ಅರ್ಜಿಯಲ್ಲಿ 1) ಬಹು ಪತ್ನಿತ್ವ 2) ತಲಾಖ್ (ವಿವಾಹ ವಿಚ್ಛೇದನ ಸಮಯದಲ್ಲಿ ಬಳಸುವ ಪದ) 3) ಮೊಹರ್ (ವಿಚ್ಛೇದನದ ಸಮಯದಲ್ಲಿ ಗಂಡ ನೀಡುವ ಮೊತ್ತ) 4) ಪೂರ್ವಾಜಿತ ಆಸ್ತಿಹಕ್ಕು ಇವೆಲ್ಲವೂ ತಮ್ಮ ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟು ಮಾಡಿದೆ ಮತ್ತು ಅಸಮಾನತೆಯನ್ನು ರೂಪಿಸಿದೆ ಎಂದು ಹೇಳಿದ್ದಾರೆ. ಅಲ್ಲದೆ ಇದನ್ನೂ ಧರ್ಮದ ಹೆಸರಿನಲ್ಲಿ ಮಾಡಿ ಅದಕ್ಕೆ ಸಂಕುಚಿತವಾದ ವ್ಯಾಖ್ಯಾನ ಕೊಡಲಾಗಿದೆ ಎಂದು ವಾದಿಸಿ ಇಂಥ ಅಮಾನವೀಯ ಸ್ಥಿತಿಯಿಂದ ಮುಕ್ತಿ (ಪರಿಹಾರ) ಬೇಕೆಂದು ಕೋರಿದ್ದಾರೆ.

ಷಹ್‌ನಾಜ್ ತಮ್ಮ ಅರ್ಜಿಯಲ್ಲಿ ಈ ರೀತಿ ವಾದ ಮಂಡಿಸಿದ್ದಾರೆ: "ಪವಿತ್ರ ಕುರಾನ್ ಷಿಯಾಸ್, ಮತ್ತು ಸುನ್ನೀಸ್, ಮತೀಯವಾದಿಗಳು ಮತ್ತು ಸುಧಾರಕರು, ಸಂಪ್ರದಾಯವಾದಿ ಮತ್ತುಆಧುನಿಕರ ಮಧ್ಯೆ ಯಾವುದೇ ಭೇದಭಾವ ಇಲ್ಲದಂತೆ ಇಸ್ಲಾಂನ ಅನುಯಾಯಿಗಳಿಗೆ ನೀತಿ ಸಂಹಿತೆ ರೂಪಿಸಿದೆ. ಬದಲಾಗುತ್ತಿರುವ ಪರಿಸರ ಮತ್ತು ಕಾಲಕ್ಕೆ ತಕ್ಕಂತೆ ಅದರ ವ್ಯಾಖ್ಯಾನ ಮಾಡಲು ಕುರಾನ್ ಸ್ವಾತಂತ್ರ್ಯ ಕೊಟ್ಟಿದೆ.

ಭಾರತದ ದಂಡ ಸಂಹಿತೆ (ಪೀನಲ್ ಕೋಡ್) ಮತ್ತು ಕುರಾನ್‌ನಲ್ಲಿ ವ್ಯತ್ಯಾಸಗಳಿವೆ. ವಿಗ್ರಹ ಆರಾಧಕರು ಮತ್ತು ಅಲ್ಲಾನಲ್ಲಿ ನಂಬಿಕೆ ಇಲ್ಲದವರನ್ನು ಧ್ವಂಸ ಮಾಡುವ ಹಕ್ಕನ್ನು ಮುಸ್ಲಿಂಮರಿಗೆ ಕುರಾನ್ ನೀಡುತ್ತದೆ. ಇಸ್ಲಾಂ ಪ್ರಕಾರ ಅತ್ಯಾಚಾರ, ಕಳವು, ಅನೈತಿಕ ಸಂಬಂಧ ಇಂಥ ಅಪರಾಧಿಗಳ ತೋಳು ಕತ್ತರಿಸಬೇಕು ಅಥವಾ ಅಪರಾಧಿಯನ್ನು ಕಲ್ಲಿನಿಂದ ಹೊಡೆದು ಸಾಯಿಸಬೇಕು. ಆದರೆ ಈ ಶಿಕ್ಷೆ ಭಾರತದಲ್ಲಿ ಇಲ್ಲ. ಹಾಗೆಂದು ಭಾರತ ಸಂವಿಧಾನವನ್ನು 'ಇಸ್ಲಾಂ ಮೇಲಿನ ಹಲ್ಲೆ' ಎಂದು ಯಾರೂ ಪರಿಗಣಿಸುವುದಿಲ್ಲ ಅಲ್ಲವೆ?

ಒಪ್ಪಂದ

ಇಸ್ಲಾಂ ಪ್ರಕಾರ ವಿವಾಹ ಪವಿತ್ರ ಬಂಧನ ವಲ್ಲ. ಸ್ತ್ರೀ–ಪುರುಷರ ನಡುವಣ ದೈಹಿಕ ಸಂಪರ್ಕಕ್ಕೆ ಒಪ್ಪಂದವದು. ಮುಸ್ಲಿಮರು (ಕಾಂಟ್ರ್ಯಾಕ್ಟ್ ಲಾ) ಸಾಮಾನ್ಯ ಒಡಂಬಡಿಕೆ ಕಾನೂನಿಗೆ ಒಪ್ಪುವರೇ ಹೊರತು ಅದನ್ನು ವಿವಾಹಕ್ಕೆ ಬಳಸುವುದನ್ನು ವಿರೋಧಿಸುತ್ತಾರೆ. ವಿಶ್ವದ ಅತಿ ಪುರಾತನ ಧರ್ಮಗಳಲ್ಲಿ ಒಂದು ಎಂಬ ಹೆಗ್ಗಳಿಕೆಯ ಬದಲು ನನ್ನ ಧರ್ಮ ಸಾಕಷ್ಟು ಅಪಹಾಸ್ಯ ಮತ್ತು ದುರ್ಬಳಕೆಗೆ ಈಡಾಗಿದೆ. ಎರಡನೆ ಹೆಂಡತಿಯನ್ನು ಪಡೆಯಲೆಂದೇ ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡಿರುವ ಉದಾಹರಣೆಗಳಿವೆ. ಇವರು ಮತ್ತೆ ತಮ್ಮ ಧರ್ಮಕ್ಕೆ ಹೋಗುವುದೂ ಉಂಟು. ವಿದೇಶಗಳಿಂದ ಬರುವ ಮುಸ್ಲಿಂ ಪುರುಷರು ಇಲ್ಲಿಗೆ ಬಂದು ವಿವಾಹವಾಗುತ್ತಾರೆ. ಹೋಗುವಾಗ ತಲಾಖ್ ಹೇಳಿ, ಮೊಹರ್ ನೀಡಿ ಹೊರಟು ಬರುತ್ತಾರೆ. ಇಲ್ಲಿ ಅಂಥ ಮಹಿಳೆ ಪಾಪ ಕೂಪಕ್ಕೆ ಬೀಳುತ್ತಾಳೆ; ಅನೇಕರು ವೇಶ್ಯಾವೃತ್ತಿ ಅವಲಂಬಿಸಬೇಕಾಗುತ್ತದೆ.

ಸಂವಿಧಾನದ 37ನೇ ವಿಧಿಯು ಭಾರತದ ಎಲ್ಲ ಪ್ರಜೆಗೂ ಅನ್ವಯವಾಗುವಂಥ ಕಾನೂನು ರೂಪಿಸುವ ಹೊಣೆಯನ್ನು ಕೇಂದ್ರ ಸರ್ಕಾರಕ್ಕೆ ನೀಡಿದೆ. ದುರ್ಬಲರ ಹಿತಾಸಕ್ತಿಗಳನ್ನು ಮುಖ್ಯವಾಗಿ ಸಾಮಾಜಿಕ ಅನ್ಯಾಯ ಮತ್ತು ದಮನಕಾರಿ ನೀತಿಯಿಂದ ರಕ್ಷಿಸಬೇಕೆಂದು 37ನೇ ವಿಧಿ ಹೇಳುತ್ತದೆ. ಮೇಲೆ ಹೇಳಿರುವ ವಿಧಿಯ ಅನ್ವಯ, ಮುಸ್ಲಿಂ ಮಹಿಳೆಯರ ರಕ್ಷಣೆ ಕಾಪಾಡುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ. ಅವರ ನೆರವಿಗೆ ಅಗತ್ಯವಾದ ಕಾನೂನುಗಳನ್ನು ರೂಪಿಸಿಲ್ಲ. ಕೇವಲ ಹಿಂದೂ, ಕ್ರಿಶ್ಚಿಯನ್ನರು, ಪರಿಶಿಷ್ಟ ಜಾತಿ–ವರ್ಗಗಳವರಿಗೆ ಸಂಬಂಧಿಸಿದ ಕಾನೂನು ರೂಪಿಸುವುದರಲ್ಲಿ ಕೇಂದ್ರಕ್ಕೆ ಆಸಕ್ತಿ ಇರುವಂತಿದೆ.

ಭಾರತದಲ್ಲಿ 4 ಕೋಟಿ ಮುಸ್ಲಿಂ ಮಹಿಳೆಯರು ಇದ್ದಾರೆಂಬ ಅಂಶವನ್ನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಮುಸ್ಲಿಂ ಕಾನೂನು ಜಾರಿಯಲ್ಲಿರುವ ಕಾರಣ ಈ ಮಹಿಳೆಯರ ಸ್ಥಿತಿಗತಿ ಬಗ್ಗೆ ನಿಷ್ಪಕ್ಷಪಾತವಾದ ಅಧ್ಯಯನ ಅಗತ್ಯ. ಆಗ ನಾವು ಬದಲಾವಣೆಗಳ

ಅವರೇ ಹೇಳಿದಂತೆ............

ಷೆಹ್‌ನಾಜ್‌ಶೇಖ್ ನೀಡಿರುವ ಸಂದರ್ಶನಗಳಲ್ಲಿ ತಾವು ಬೆಳೆದ, ಬದುಕಿದ ಮತ್ತು ಹಿಂಸೆ ಅನುಭವಿಸಿದ ಪರಿಸರದ ಬಗ್ಗೆ ಅಪಾರವಾಗಿ ಹೇಳಿಕೊಂಡಿದ್ದಾರೆ. ಆಕೆ ಒಬ್ಬ ಸಾಮಾನ್ಯ ಮುಸ್ಲಿಂ ಮಹಿಳೆ. ಪದವಿ ಶಿಕ್ಷಣ ಪೂರ್ಣಗೊಳ್ಳುವ ಮುನ್ನವೇ ತಮಗಿಂತ ಎರಡು ಪಟ್ಟು ಹೆಚ್ಚು ವಯಸ್ಸಿನ ಪ್ರಾಧ್ಯಾಪಕರೊಂದಿಗೆ ವಿವಾಹ. ಹಲವಾರು ತಿಂಗಳ ಮಾನಸಿಕ, ದೈಹಿಕ ಹಿಂಸೆ ಮತ್ತು ಆತ್ಮಹತ್ಯೆ ಪ್ರಯತ್ನಗಳ ನಂತರ ಅವರು ಹೋರಾಡಲು ನಿರ್ಧರಿಸಿದರು. ಇದಕ್ಕೆ ಗಂಡನಿಂದ ಬಂದ ಪ್ರತಿಕ್ರಿಯೆ: "ತಲಾಖ್. ತಲಾಖ್, ತಲಾಖ್". ಷೆಹ್‌ನಾಜ್ ಅವರ ಮಾತಿನಲ್ಲೇ ಹೇಳುವುದಾದರೆ "ಆತ (ಗಂಡ) ತನ್ನ ಪತಿತನದ ಅಧಿಕಾರ ಚಲಾಯಿಸುವವರೆಗೂ, ನಾನು ನನ್ನ ಪತ್ನಿತನದ ಹೊಣೆ ನಿರ್ವಹಿಸಿದವರೆಗೂ ಎಲ್ಲವೂ ಸರಿಯಾಗೇ ಇತ್ತು. ನನ್ನ ಬದಲಾದ ಮನೋಭಾವ ಅವರಿಗೆ ಸರಿಹೊಂದಲ್ಲ." "ಎಲ್ಲವನ್ನೂ ನಿನ್ನ ವಿಧಿ ಎಂದು ಒಪ್ಪಿಕೊಲ್ಲಿಲ್ಲ. ಇಲ್ಲವಾದರೆ ನನ್ನ ಮನೆಯಿಂದ ಹೊರಟು ಹೋಗು. ಮೊದ ಮೊದಲು ನಾನು ಇದನ್ನ ಹಾಸ್ಯ ಎಂದೆಣಿಸಿದ್ದೆ. ನಂತರ ತಿಳಿಯಿತು ಇದು ನನ್ನನ್ನ ಬೆದರಿಸುವ ಮಾರ್ಗ ಎಂದು."

ಬಗ್ಗೆ ಯೋಚಿಸಬಹುದು. ಆದರೆ ಅಧಿಕಾರದಲ್ಲಿ ಇರುವ ಮತ್ತು ವಿರೋಧ ಪಕ್ಷಗಳೆರಡರ ನಾಯಕರಿಗೆ ಈ ವಿಚಾರದಲ್ಲಿ ಆಸಕ್ತಿ ಇರುವಂತಿಲ್ಲ. ಮುಸ್ಲಿಂಮರ ಕಾನೂನಿನಲ್ಲಿ ಯಾವುದೇ ಬದಲಾವಣೆ ವಿಚಾರ ಇಸ್ಲಾಮಿಕ್ ಧಾರ್ಮಿಕ ಸಂಸ್ಥೆಗಳಿಂದಲೇ ಬರಬೇಕೆಂದು ಅವರು ಹೇಳುತ್ತಾರೆ.

ಸಂಸತ್ ಮತ್ತು ರಾಜ್ಯಗಳ ಶಾಸನ ಸಭೆಗಳಿಗೆ ಧಾರ್ಮಿಕ ವಿಷಯಗಳನ್ನು ಕುರಿತ ಕಾನೂನು ರೂಪಿಸುವ ಅಧಿಕಾರವಿದೆ. ಆದರೆ ಅನುಭವದ ಮಾತು ಹೇಳುವುದಾದರೆ ಮುಸ್ಲಿಂ ಮಹಿಳೆಯರ ವಿಚಾರದಲ್ಲಿ ಮಾತ್ರ ಮತೀಯ ಮತ್ತು ಸಂಪ್ರದಾಯವಾದಿಗಳ ಮಾತೇ ಕೊನೆ. ಆದರೆ ಧರ್ಮವನ್ನು ಬಳಸಿಕೊಳ್ಳುವ ರಾಜಕಾರಣಿಗಳು ಮಾತ್ರ ತತ್ವವನ್ನು ಗಾಳಿಗೆ ಬಿಟ್ಟು ಬಿಡುತ್ತಾರೆ. ಬದಲಾವಣೆ ವಿಚಾರ ಎಂದರೆ ಮೌನಿಯಾಗುತ್ತಾರೆ.

ಬುರ್ಖಾ ಬವಣೆ

ಮೊದಲನೆ ಪ್ರತಿವಾದಿಯು ನನ್ನ ಮತ್ತು ನನ್ನ ಅಸಂಖ್ಯ ಮುಸ್ಲಿಂ ಸೋದರಿಯರ ವಿಚಾರದಲ್ಲಿ ನಡೆಯುತ್ತಿರುವ ಅನ್ಯಾಯಗಳನ್ನು ಕಂಡೂ ಕಾಣದಂತೆ ಇದೆ. ಸಂವಿಧಾನ ಜಾರಿಗೆ ಬಂದ ಮೇಲೆ ಮುಸ್ಲಿಂ ಕಾನೂನಿಗೆ ಒಂದೇ ಒಂದು ತಿದ್ದುಪಡಿ ತಂದಿಲ್ಲ. ಆದರೆ ಹಿಂದೂ-ಕ್ರಿಶ್ಚಿಯನ್ನರ ಕಾನೂನಿಗೆ ಅನೇಕ ತಿದ್ದುಪಡಿಗಳನ್ನು ತರಲಾಗಿದೆ. ಬುರ್ಖಾ ಮತ್ತು ಪರದಾ ಪದ್ಧತಿಯನ್ನು ಮಹಿಳೆಯರ ಮನೋಭಿಪ್ರಾಯಕ್ಕೆ ವಿರುದ್ಧವಾಗಿ ಜಾರಿಗೆ ತರಲಾಗಿದೆ. ಅಂಥ ಪದ್ಧತಿ ಮುಂದುವರೆಸಲು ಜಾತ್ಯಾತೀತ ರಾಷ್ಟ್ರವಾದ ಭಾರತಕ್ಕೆ ಯಾವ ಹಕ್ಕೂ ಇಲ್ಲ. ಕೆಲವೊಂದು ಇಸ್ಲಾಮಿಕ್ ರಾಷ್ಟ್ರಗಳಲ್ಲಿ ಅಂಥ ಪದ್ಧತಿ ಜಾರಿಯಲ್ಲಿರಬಹುದು. ಆದರೆ ಈ ಪದ್ಧತಿ ಎಷ್ಟು ಅನಾರೋಗ್ಯಕರವೆಂದು ಗೊತ್ತೆ? ಅದರಿಂದ ಶ್ವಾಸಕೋಶ, ಚರ್ಮರೋಗ ಬರುತ್ತದೆ. ಸದಾ ಬುರ್ಖಾ ಹಾಕಿಕೊಳ್ಳುವುದು ಮಾನಸಿಕ ಹಿಂಸೆ ಕೂಡ. ಅಸ್ಪೃಶ್ಯತೆಯನ್ನು ಕಾನೂನು ವಿರೋಧ ಎನ್ನುತ್ತೀರ. ಬುರ್ಖಾ ಕೂಡ ಕಾನೂನು ವಿರೋಧ ಎಂದು ಏಕೆ ಹೇಳಬಾರದು ?

ಬಹು ಪತ್ನಿತ್ವ ಕಾನೂನು ವಿರೋಧ. ಮುಸ್ಲಿಂ ಮಹಿಳೆಯರು ಇದರಿಂದ ನರಳುತ್ತಿದ್ದಾರೆ. ಇನ್ನಾವ ಧರ್ಮದಲ್ಲಿಯೂ ಇದು ಇಲ್ಲ, ಪಾಕಿಸ್ತಾನದಲ್ಲಿ ಕೂಡ ಬಹು ಪತ್ನಿತ್ವವನ್ನು ನಿಷೇಧಿಸಲಾಗಿದೆ. ಭಾರತ ಸರಕಾರವೇಕೆ ಅಂಥ ಕಾನೂನು ರೂಪಿಸಿಲ್ಲ? ಇದರಿಂದ ಇಸ್ಲಾಂ ಧರ್ಮಕ್ಕೆ ಕುಂದೇನೂ ಇಲ್ಲ. 26ನೇ ವಿಧಿಯಂತೆ ಬಹು ಪತ್ನಿತ್ವಕ್ಕೆ ಅವಕಾಶ ಇಲ್ಲ ಎಂದು ಘೋಷಿಸಲು ಕೋರುತ್ತೇನೆ.

ವಿವಾಹ ವಿಚ್ಛೇದನಕ್ಕೆ ಗಂಡ ತನ್ನ ಪತ್ನಿ ಅಥವಾ ಬಂಧುಗಳ ಮುಂದೆ ಮೂರು ಬಾರಿ 'ತಲಾಖ್' ಎಂದರೆ ಸಾಕು. ಇದೆಂಥ ಕ್ರೂರ, ಸರ್ವಾಧಿಕಾರಿ ನೀತಿ ಎಂಬುದನ್ನು ವಿವರಿಸಿ ಹೇಳಬೇಕಾಗಿಲ್ಲ. ಇದರ ಬೆದರಿಕೆಯಲ್ಲಿ ಮುಸ್ಲಿಂ ಮಹಿಳೆ ಬದುಕಬೇಕಾಗಿದೆ; ಗುಲಾಮಳಾಗಬೇಕಾಗಿದೆ.

ಪೂರ್ವಾರ್ಜಿತ ಆಸ್ತಿ ಕಾಯ್ದೆ ಪ್ರಕಾರ ತಂದೆಯ ಆಸ್ತಿಯಲ್ಲಿ ಮಗಳಿಗೂ ಸಮಾನ ಹಕ್ಕು ಇದೆ ಎಂದು ಹಿಂದೂ ಕಾನೂನು ಹೇಳುತ್ತದೆ. ಆದರೆ ಮುಸ್ಲಿಮರಲ್ಲಿ ಮಗಳಿಗೆ ಮಗನದಕ್ಕಿಂತ ಅರ್ಧ ಕಡಿಮೆ. ಇದು ಸಂವಿಧಾನ ಉಲ್ಲಂಘನೆಯಾಗಿದ್ದು ಇದನ್ನು ಅನೂರ್ಜಿತಗೊಳಿಸಬೇಕೆಂದು ನನ್ನ ಪ್ರಾರ್ಥನೆ.

ಅಡೆತಡೆ

ಮತೀಯವಾದಿಗಳು, ಅದೇ ಧೋರಣೆವುಳ್ಳ ಮುಸ್ಲಿಂ ಮಹಿಳೆಯರು ನನ್ನ ಪ್ರಯತ್ನವನ್ನು ವಿರೋಧಿಸಿ ತಡೆಯಲೆತ್ನಿಸುತ್ತಾರೆ. ಅಂಥ ರಾಜಕೀಯ, ಆರ್ಥಿಕ ಪ್ರಭಾವಿತ ವ್ಯಕ್ತಿಗಳ ಜತೆ ವೈಯಕ್ತಿಕ ಹೋರಾಟ ನನ್ನಿಂದ ಸಾಧ್ಯವಿಲ್ಲ. ಈ ಸಾಮಾಜಿಕ ಪಿಡುಗಿನ ವಿರುದ್ಧ ಹೋರಾಡಲು ನಾನು ದೃಢಮನಸ್ಕಳಾಗಿ ರಾಷ್ಟ್ರದ ಸರ್ವೋಚ್ಛ ನ್ಯಾಯಾಲಯದ ಮುಂದೆ ಅರ್ಜಿ ಸಲ್ಲಿಸಿದ್ದೇನೆ. ಇದಕ್ಕೆ ಪ್ರತಿಯಾಗಿ ತಡೆ ಒಡ್ಡಲು ಅನೇಕರು ಒತ್ತಡ ಹೇರಬಹುದು. ಆದರೆ ಬಂಧನದ ಬೇಡಿಯಲ್ಲಿರುವ ಮುಸ್ಲಿಂ ಮಹಿಳೆಯರ ವಿಮೋಚನೆಗಾಗಿ ನ್ಯಾಯಾಲಯವು ರಿಟ್ ಅನ್ನು ಸ್ವೀಕರಿಸಿ ವಿಚಾರಣೆಗೆ ಅನುವು ಮಾಡಿಕೊಡಬೇಕು. ನನ್ನ ಅರ್ಜಿ ನೋಡಿಯೇ ಮತಾಂಧರು ನನ್ನನ್ನು ಶೋಧಿಸಲು ನನ್ನ ಜನರನ್ನು ಕೊಂದರು. ಈ ಅರ್ಜಿ ಮೂಲಕ ನಾನು ಪ್ರಾರ್ಥಿಸುವುದೇನೆಂದರೆ ಅಂಥ ಸಾಮಾಜಿಕ ಪಿಡುಗಿನಿಂದ ಮುಕ್ತಿ ದೊರಕಿಸಿ ಕೊಡಿ." ○

(ಸಂಗ್ರಹ)

ತ್ತಿರುವ ಜಾತಿ ಕಲಹಗಳು, ಅಸ್ಪೃಶ್ಯತೆ, ಮತ್ತು ವರ ದಕ್ಷಿಣೆಯ ಸಾವು–ಇಂತಹ ವಿಷಯಗಳಿಗೆ ಮುಸ್ಲಿಂರು ತಲೆಕೆಡಿಸಿಕೊಳ್ಳಬೇಕಾಗುವುದಿಲ್ಲ. ಏಕೆಂದರೆ, ಇವು ಅವರಿಗೆ ಸಂಬಂಧಪಟ್ಟ ವಿಷಯವಲ್ಲ. ತಮ್ಮ ಖಾಸಗಿ ಕಾನೂನನ್ನು ನಿರ್ಧರಿಸುವವರೂ ಮುಸ್ಲಿಂರೇ ಎನ್ನುವುದನ್ನು ಪ್ರತಿಪಾದಿಸುವ ಪ್ರಖ್ಯಾತ ಮುಸ್ಲಿಂರು ಕೂಡ ಈ ವಿಷಯಗಳ ಬಗ್ಗೆ ತಮ್ಮ ನಿರಾಸಕ್ತಿ ತೋರಿಸುತ್ತಿರುತ್ತಾರೆಂದು ನಾನು ಸುಲಭವಾಗಿ ನಂಬುವುದಿಲ್ಲ.

ಇತ್ತೀಚೆಗೆ ಸಿಖ್ಖರು ತಮಗೇ ಬೇರೊಂದು ಖಾಸಗಿ ಕಾನೂನು ಬೇಕೆಂದು ಕೇಳುತ್ತಿರುವ ಬೇಡಿಕೆ ಮತ್ತೂ ಭಯಂಕರ ಸಾಧ್ಯತೆಯನ್ನು ಸೂಚಿಸುತ್ತದೆ. ಸಿಖ್ಖರ ಗುರುಪೀಠವಾದ ಖಾಲ್ಸಾಗೆ ಸಾಂಪ್ರದಾಯಿಕ ಆಚರಣೆಗಳನ್ನು ಒಂದು ಖಾಸಗಿ ಕಾನೂನಾಗಿ ಸೂತ್ರೀಕರಿಸಲು ಧಾರ್ಮಿಕ ಅಧಿಕಾರ ಇದೆ. ಅದರ ಹೆಸರಿನಲ್ಲಿ ಕೆಲಸ ಮಾಡುತ್ತಿರುವ ಶಿರೋಮಣಿ ಗುರುದ್ವಾರ ಪ್ರಬಂಧಕ ಸಮಿತಿಯು ರಾಹಿತ್ ನಾಮುಗಳನ್ನು ಬದಲಾಯಿಸಿ 'ರಾಹಿತ್ ಮರ್ಯಾದಾ' (ಸಿಖ್ಖರ ಧಾರ್ಮಿಕ ಆಚರಣೆಗಳು) ರೂಪಿಸಿ ಸಿಖ್ಖರ ಖಾಸಗಿ ಕಾನೂನನ್ನು ತಯಾರಿಸಬಹುದು. ಆದರೆ ಸಿಖ್ಖರ ಖಾಸಗಿ ಕಾನೂನನ್ನು ಧರ್ಮದ ಚೌಕಟ್ಟಿನೊಳಗೆ ಒಪ್ಪಿಕೊಳ್ಳಲು ಸಾಧ್ಯವೇ ? ಅಂದರೆ, ಸಿಖ್ಖರಿಗೆ ಖಾಸಗಿ ಕಾನೂನು ರಚನೆಯಾಗಬೇಕಾದರೆ, ಅದು ಸಿಖ್ ಧರ್ಮದ ಅತಿ ಅಗತ್ಯ ಆಚರಣೆಗಳಿಂದ ಕೂಡಿರಬೇಕು. ಖಾಸಗಿ ಕಾನೂನಿಗೆ ಸಂವಿಧಾನದ 372 (1)ರ ವಿಧಿಯ ಪ್ರಕಾರ ರಕ್ಷಣೆ ಕೊಡಲಾಗಿದೆ. ಶಾಸನಗಳ ರಚನೆಗೆ ಈಗ ಇರುವ ವಿಧಾನವಾದರೂ ಏನು? ಯಾವುದೇ ಧಾರ್ಮಿಕ ಸಂಪ್ರದಾಯದವರಿಗೆ ಅನ್ವಯವಾಗುವ ಶಾಸನವನ್ನು ರಚಿಸುವುದು ಪಾರ್ಲಿಮೆಂಟಿನಲ್ಲಿರುವ ಜನರ ಪ್ರತಿನಿಧಿಗಳೇ ಹೊರತು ಕೇವಲ ಆಯಾ ಧಾರ್ಮಿಕ ಸಂಪ್ರದಾಯದ ಜನರಲ್ಲ. ಮೂಲಭೂತ ಹಕ್ಕುಗಳು ಹೇಗೆ ಇಡೀ ಜನಕೋಟಿಗೆ ಅನ್ವಯವಾಗುತ್ತವೆಯೋ ಹಾಗೆ ಬೇರೆ ನಿಯಮಗಳೂ ಅನ್ವಯವಾಗುವಂತಿದ್ದು, ಒಂದೊಂದು ಮತೀಯ ಗುಂಪಿಗೂ ಒಂದೊಂದು ರೀತಿಯ ಖಾಸಗಿ ಕಾನೂನು ಜಾರಿಗೆ ಬಂದರೆ ಆಗ ಮೂಲಭೂತ ಹಕ್ಕುಗಳಿಗೇ ಚ್ಯುತಿ ಬಂದಂತಾಗುತ್ತದೆ.

ಧರ್ಮನಿರಪೇಕ್ಷತೆಯು ರಾಷ್ಟ್ರದ ಮಾರ್ಗದರ್ಶಿ ಸೂತ್ರವಾಗಿರಬೇಕಾದರೆ ವಿವಿಧ ಮತೀಯ ಗುಂಪುಗಳಿಗೆ ವಿಭಿನ್ನವಾದ ಶಾಸನಗಳು ಜಾರಿಗೆ ಬರಲು ಸಾಧ್ಯವಿಲ್ಲ. ಆದರಿಂದ ಮೂಲಭೂತ ಹಕ್ಕುಗಳು ಸಹ ಧರ್ಮದ ನೆರಳಿನಲ್ಲೇ ಬೆಳೆಯಬೇಕೆಂದು ವಿಧಿಸಿದಂತಾಗುತ್ತದೆ. ರಾಷ್ಟ್ರವು ಐಕ್ಯತೆಯಿಂದ ಕೂಡಿದ ಜನಸಮುದಾಯವಾಗಿ ಮಾರ್ಪಡಲು ಇದರಿಂದ ಅಡ್ಡಿಯುಂಟಾಗುವ ಸಂಭವ ಕೂಡ ಇರುತ್ತದೆ. ○

ಸಂಗ್ರಹಾನುವಾದ : ಆಶಾ

ಆಧಾರ : Secular Values for Secular India by P. C. Chatterji, Pub : Lola Chatterji, F2D, Saket, New Delhi–17. Distributor : Manohar Book Service, 1, Ansari Road, New Delhi–2]

ಗ್ರೀಕ್ ನಾಟಕಕಾರ ಯೂರಿಪಿಡಿಸ್ ತನ್ನ ಓರಿಸ್ಟಿಸ್‌ನಲ್ಲಿ ಪತ್ನಿಯನ್ನು "ಓಯಿಕುರೆಮಾ" ಎಂದು ಬಣ್ಣಿಸುತ್ತಾನೆ. (ಅದು ನಪುಂಸಕ ಲಿಂಗದ ಪದ). ಹಾಗೆಂದರೆ ಮನೆಯಲ್ಲಿ ಚಾಕರಿ ಮಾಡುವವಳು ಎಂದರ್ಥ. ಮಕ್ಕಳನ್ನು ಹೆರುವುದನ್ನು ಬಿಟ್ಟು ಅಥೆನ್ಸಿನ ಗಂಡಸಿಗೆ ಅವಳು ಏನೂ ಅಲ್ಲ; ಪ್ರಮುಖ ಮನೆಕೆಲಸದವಳು ಎಂಬುದನ್ನುಳಿದು.

ನಮ್ಮ ದೇಶದ ಆರ್ಥಿಕ ಉತ್ಪಾದನೆಯಲ್ಲಿ ಮಹಿಳೆಯರೂ ಪುರುಷರಷ್ಟೇ ಪ್ರಮುಖ ಪಾತ್ರ ವಹಿಸಿದ್ದರೂ, ಹಲವಾರು ವಿಷಯಗಳಲ್ಲಿ ಪುರುಷರಿಗೆ ದೊರಕುತ್ತಿರುವ ನ್ಯಾಯವಾಗಲೀ, ಅವಕಾಶವಾಗಲೀ ಮಹಿಳೆಯರಿಗೆ ದೊರೆಯುತ್ತಿಲ್ಲ. ಮಹಿಳೆಯರ ಹಿತದೃಷ್ಟಿಯಿಂದ ರಚಿಸಿರುವ ಕಾನೂನುಗಳು ಕೆಲವು ಮಾತ್ರ. ಬಹಳಷ್ಟು ವೇಳೆ ಈ ಕಾನೂನುಗಳೂ ಕಾಗದದ ಮೇಲಷ್ಟೇ ಉಳಿದು ತಲುಪಬೇಕಾದವರನ್ನು ತಲುಪಿಲ್ಲ. ಎಂತಹುದೇ ಕಲ್ಯಾಣಕಾರಿ ಕಾನೂನನ್ನು ಮಾಡಿದರೂ ಕಾನೂನಿನ ಕಣ್ಣಿಗೆ ಮಣ್ಣೆರಚುವ ಖದೀಮರೇ ತುಂಬಿರುವ ಈ ಸಮಾಜದಲ್ಲಿ ಕಾಯ್ದೆಗಳು ಮಹಿಳೆಯನ್ನು ಎಷ್ಟು ಕಾದಿವೆ ?

ಕಾನೂನಿನ ನಿಷ್ಪ್ರಯೋಜಕತೆಯಿಂದಾಗಿ ದುಡಿಯುವ ಮಹಿಳೆಯರಿಗೆ ಒಂದೊಂದು ಹಂತದಲ್ಲಿ ಒಂದೊಂದು ರೀತಿಯ ಅವಮಾನ,ಅವಹೇಳನ, ವಂಚನೆ ನಡೆದೇ ಇದೆ. ಕೋಟ್ಯಾಂತರ ಮಹಿಳೆಯರ ಶ್ರಮಕ್ಕೆ ಬೆಲೆಯೇ ಇಲ್ಲದೆ, ಹಗಲು ರಾತ್ರಿಗಳು ಕಳೆದು ಹೋಗುತ್ತಿರುವಾಗ, ದಿನದ

> ಕಾನೂನಿನ ಪ್ರಯೋಜನವನ್ನೇ ಪಡೆಯಲಾಗದ ಬೀಡಿ, ಅಗರಬತ್ತಿ, ಮನೆ ಕಟ್ಟುವ ಮುಂತಾದ ಕಡೆಗಳಲ್ಲಿ ಕೆಲಸ ಮಾಡುವ ಕೂಲಿ ಹೆಣ್ಣುಗಳ ಕಥೆ ಒಂದಾದರೆ, ಕಾನೂನಿನ ತಾರತಮ್ಯ ನೀತಿಯಿಂದ ಮಾನಸಿಕ ಹಿಂಸೆಗೆ ಮತ್ತು ಅನಾನುಕೂಲತೆಗೆ ಈಡಾಗುವ ಪ್ರತಿಷ್ಠಿತ ಸ್ಥಾನದ ದುಡಿವ ಮಹಿಳೆಯರದು ಮತ್ತೊಂದು ಕಥೆ.

ಕೂಳು ಗಿಟ್ಟಿದರೆ ಸಾಕು ಎಂದು ದುಡಿಯುತ್ತಿರುವ ಕೂಲಿ ಹೆಣ್ಣುಗಳಿಗೆ ತಮ್ಮ ಹಕ್ಕು ಬಾಧ್ಯತೆಗಳಿಗೆ ಹೋರಾಟ ಮಾಡಬೇಕೆನ್ನುವ ಅರಿವು ಹೇಗಿರಲು ಸಾಧ್ಯ? ಕಾನೂನಿನ ಕಣ್ಣಿಗೆ ಮಣ್ಣೆರಚುವ ಖದೀಮರಿಗೆ ಈ ಮುಗ್ಧ ಹೆಣ್ಣುಗಳನ್ನು ವಂಚಿಸುವುದು ನೀರು ಕುಡಿದಷ್ಟು ಸುಲಭ. ಹಾಗೆಯೇ ಓದಿ ವಿದ್ಯಾವಂತರಾಗಿ, ತಮ್ಮ ಕಾಲ ಮೇಲೆ ನಿಂತು ಗಂಡಸಿಗೆ ಸಮನಾಗಿ ಪ್ರತಿಷ್ಠಿತ

ಬಿಳಿ ಹಾಳೆ ಕಾನೂನು

● ಎಲ್. ಎನ್. ಶ್ಯಾಮಲಾದೇವಿ

ಹುದ್ದೆಗಳಿಗೆ ಲಗ್ಗೆಯಿಟ್ಟಿರುವ ನಮ್ಮ ಮಹಿಳೆಯರಿಗೂ ಕಾನೂನು ವರಪ್ರದವಾಗೇನೂ ಇಲ್ಲ. ಸಮಾಜದಲ್ಲಿ ಕಂಡುಬರುವ ಗಂಡು ಹೆಣ್ಣಿನ ನಡುವಿನ ತಾರತಮ್ಯದ ತುಣುಕು ಇಲ್ಲಿಯೂ ವ್ಯವಸ್ಥಿತವಾದ ಇಣುಕು ಹಾಕಿದೆ. ಕಾನೂನಿನ ಪ್ರಯೋಜನವನ್ನೇ ಪಡೆಯಲಾಗದ ಬೀಡಿ, ಅಗರಬತ್ತಿ, ಮನೆ ಕಟ್ಟುವ—ಮುಂತಾದವುಗಳಲ್ಲಿ ಕೆಲಸ ಮಾಡುವ ಕೂಲಿ ಹೆಣ್ಣುಗಳ ಕಥೆ ಒಂದಾದರೆ, ಕಾನೂನಿನ ತಾರತಮ್ಯ ನೀತಿಯಿಂದ ಮಾನಸಿಕ ಹಿಂಸೆಗೆ ಮತ್ತು ಅನಾನುಕೂಲತೆಗೆ ಈಡಾಗುವ ಪ್ರತಿಷ್ಠಿತ ಸ್ಥಾನದ ಅಧಿಕಾರಿಗಳು, ಗಗನ ಸಖಿಯರು—ಮುಂತಾದ ವರದು ಇನ್ನೊಂದು ಕಥೆ.

ಒಂದೆರಡು ಉದಾಹರಣೆಗಳ ಮೂಲಕ ಈ ಅಂಶವನ್ನು ಹೆಚ್ಚು ಸ್ಪಷ್ಟ ಪಡಿಸಬಹುದು. ಉದಾಹರಣೆಗೆ, ಬೀಡಿ ಕಾರ್ಖಾನೆಯಲ್ಲಿ ಮಹಿಳೆಯರದೇ ಸಿಂಹಪಾಲು. ಸುಮಾರು ಶೇಕಡ 90 ಭಾಗ ಮಹಿಳೆಯರು ಇದ್ದಾರೆ. ಇವರಲ್ಲಿ ಸುಮಾರು ಶೇಕಡ 60 ಭಾಗ ಮುಸ್ಲಿಂ ಮಹಿಳೆಯರು. ಈ ಕಾರ್ಮಿಕರದೇ ವಿಶಿಷ್ಟ ಸಮಸ್ಯೆಯಾದ್ದರಿಂದ ಸರ್ಕಾರವು ಪ್ರತ್ಯೇಕವಾಗಿ ಬೀಡಿ ಮತ್ತು ಸಿಗರೇಟ್ ಶಾಸನವನ್ನು (1966) ಜಾರಿಗೆ ತಂದಿದೆ. ಅದರ ಪ್ರಕಾರ ವಾರಕ್ಕೆ 48 ಗಂಟೆಗಳ ಕಾಲ ಕೆಲಸ. ವಾರದಲ್ಲೊಂದು ರಜಾದಿನ, 20 ದಿನಗಳಿಗೊಮ್ಮೆ ಕ್ಯಾಶುಯಲ್ ರಜೆ. ರಜಾ ದಿನಗಳಲ್ಲೂ ಕೂಲಿ ಕೊಡಬೇಕು. ಮಹಿಳಾ ಕಾರ್ಮಿಕರಿಗೆ ಮೂರು ತಿಂಗಳ ಹೆರಿಗೆ ರಜಾ, ಹೆರಿಗೆ ಭತ್ಯೆ ನೀಡಬೇಕು. ಈ ಶಾಸನ ಎಂದೋ ಕಸದ ಬುಟ್ಟಿ ಸೇರಿದೆ. ಈ ಶಾಸನದಡಿ ಹೇಳುವುದನ್ನು ಜಾರಿಗೆ ತರಲು ಸಾಧ್ಯವಾಗಿಲ್ಲ. ಕಾರಣ, ಬೀಡಿ ಕಾರ್ಖಾನೆಯ ಸ್ವರೂಪ, ಕಾರ್ಮಿಕರ ಅಜ್ಞಾನ,

ಸಮಾನತೆಗಾಗಿ ಸಮಾನ ಸಿವಿಲ್ ಕೋಡ್

ಪಿ. ಸಿ. ಚಟರ್ಜಿ

ನಮ್ಮ ಸಂವಿಧಾನದ ನಲವತ್ತನಾಲ್ಕನೇ ವಿಧಿಯ ಪ್ರಕಾರ ಭಾರತ ಸರ್ಕಾರವು ತನ್ನ ಪ್ರಜೆಗಳಿಗಾಗಿ ಎಲ್ಲೆಡೆಯಲ್ಲೂ ಸಮಾನ ಕಾನೂನು ಸಂಹಿತೆಯನ್ನು ಜಾರಿಗೆ ತರುವಲ್ಲಿ ಶ್ರಮಿಸುತ್ತದೆ. ಡಾ|| ಬಿ. ಸೀತಾ ರಾಮಯ್ಯನವರು ಹೇಳಿರುವಂತೆ ಸಂವಿಧಾನದ ಗ್ಯಾರಂಟಿಗಳು ಏನೆಲ್ಲ ಇದ್ದರೂ 'ಲೈಂಗಿಕ ಆಧಾರದ ಮೇಲೆ ಅಸಮಾನತೆಯೆನ್ನುವುದು ಇದ್ದೇ ಇರುತ್ತದೆ. ಈ ಅಸಮಾನತೆಗೆ ಮುಖ್ಯ ಕಾರಣ ಧರ್ಮ. ಭಾರತದಲ್ಲಿ ಮದುವೆ, ವಿವಾಹ ವಿಚ್ಛೇದನ, ಉತ್ತರಾಧಿಕಾರ—ಈ ವಿಷಯಗಳಿಗೆಲ್ಲಾ ಮತೀಯಶಾಸನಗಳೇ ಆಧಾರವಾಗಿರುವುದರಿಂದ ಅಸಮಾನತೆಗೆ ಕಾರಣವಾಗಿದೆ.'

ಬ್ರಿಟಿಷರು ಭಾರತವನ್ನು ತಮ್ಮ ಸ್ವಾಧೀನ ಪಡಿಸಿಕೊಳ್ಳುವ ಮೊದಲು ಹಿಂದೂ ಮತ್ತುಮುಸ್ಲಿಂರಿಗೆ ಅವರ ವರದೇ ಆದ ಸಿವಿಲ್ ಮತ್ತು ಕ್ರಿಮಿನಲ್ ಕಾನೂನು ಕಟ್ಟಲೆಗಳು ಇದ್ದವು. ಆದರೆ ಬ್ರಿಟಿಷರ ಆಳ್ವಿಕೆಯ ನಂತರ 1861ರಲ್ಲಿ ಸಿವಿಲ್‌ಕೋಡ್ ಪ್ರೊಸೀಜರ್ ಜಾರಿಗೆ ಬಂತು. ಆದಾದ ತಕ್ಷಣದಲ್ಲೇ 1865ರಲ್ಲಿ ಇಂಡಿಯನ್ ಸಕ್‌ಸೆಸನ್ ಆ್ಯಕ್ಟ್ ಮತ್ತು 1872 ರಲ್ಲಿ ಇಂಡಿಯನ್ ಕಾಂಟ್ರಾಕ್ಟ್ ಆ್ಯಕ್ಟ್ ಮತ್ತು ಇಂಡಿಯನ್ ಎವಿಡೆನ್ಸ್ ಆ್ಯಕ್ಟ್ ಜಾರಿಗೆ ಬಂದವು. ಇದರ ಫಲವಾಗಿ ಮೊಟ್ಟಮೊದಲಿಗೆ ಭಾರತದ ಹಲವಾರು ಭಾಗಗಳಲ್ಲಿ ಒಂದು ಸಮಾನ ಕಾನೂನು ಜಾರಿಗೆ ಬರಲು ಸಾಧ್ಯವಾಯಿತು. "ಯಾವ ದೇಶದಲ್ಲಿ ಹಿಂದೂ ಧರ್ಮದಡಿ ಶೂದ್ರನ ಸಾಕ್ಷಿಯಿಂದಾಗಿ ಬ್ರಾಹ್ಮಣನ ಶಿಕ್ಷೆ ಸಾಧ್ಯವಾಗುತ್ತಿರಲಿಲ್ಲವೋ ಮುಸ್ಲಿಂ ಕಾನೂನಿನಡಿ ನಂಬಿಕೆಗೆ ಅನರ್ಹನಾದವನ ಸಾಕ್ಷಿಯು ಮುಸ್ಲಿಂನ ವಿರುದ್ಧ ಒಪ್ಪಿತವಾಗುತ್ತಿರಲಿಲ್ಲವೋ ಅಂತಹ ದೇಶದ ಕಾನೂನಿನ ಎದುರಿನಲ್ಲಿ ಎಲ್ಲರೂ ಸಮಾನರು ಎಂಬ ಶ್ರೇಷ್ಠ ತತ್ವವನ್ನು ಸಾರುವ ಈ ಕಾನೂನು ಕ್ರಾಂತಿಯನ್ನೆಸಗಿದಂತೆ" ಎಂದಿರುವ ಕೆ. ಎಮ್. ಫಣಿಕ್ಕರ್‌ರವರ ಮಾತುಗಳು ಗಮನಾರ್ಹ.

ಇಷ್ಟಾದರೂ ಕಾನೂನಿನ ಮುಖ್ಯ ಕ್ಷೇತ್ರವಾದ ಖಾಸಗಿ ಕಾನೂನು ಯಾವುದೇ ಬದಲಾವಣೆಯಿಲ್ಲದೆ ಹಾಗೆಯೇ ಉಳಿದುಕೊಂಡಿದೆ. ಉತ್ತರಾಧಿಕಾರ, ವಿವಾಹ, ಜಾತಿ ಮತ್ತು ಉಳಿದ ಧಾರ್ಮಿಕ ವಿಧಿಗಳು ಹಾಗೂ ಸಂಪ್ರದಾಯಗಳು ಸುಮಾರು ನೂರು ವರ್ಷಗಳಿಂದಲೂ ಯಾವುದೇ ಬದಲಾವಣೆಯಿಲ್ಲದೆ ಸ್ಥಗಿತವಾಗಿಯೇ ಉಳಿದಿದೆ. ಸಂವಿಧಾನದ ಸಭೆಗಳಲ್ಲೆಲ್ಲಾ ಖಾಸಗಿ ಕಾನೂನನ್ನು ಪವಿತ್ರನೆಂದು ಪರಿಗಣಿಸುವುದನ್ನು ಡಾ|| ಅಂಬೇಡ್ಕರ್ ಅತ್ಯಂತ ಶಕ್ತಿಯುತವಾಗಿ ವಿರೋಧಿಸುತ್ತಿದ್ದುದನ್ನು ನಾವು ಕಂಡಿದ್ದೇವೆ.

> ಖಾಸಗಿ ಕಾನೂನು ಯಾವುದೇ ಬದಲಾವಣೆ ಇಲ್ಲದೆ ಹಾಗೆಯೇ ಉಳಿದುಕೊಂಡಿದೆ. ಉತ್ತರಾಧಿಕಾರ, ವಿವಾಹ, ಜಾತಿ ಮತ್ತು ಉಳಿದ ಧಾರ್ಮಿಕ ವಿಧಿಗಳು ಹಾಗೂ ಸಂಪ್ರದಾಯಗಳು ಸುಮಾರು ನೂರು ವರ್ಷಗಳಿಂದಲೂ ಯಾವುದೇ ಬದಲಾವಣೆ ಇಲ್ಲದೆ ಸ್ಥಗಿತವಾಗಿದೆ.

ಮುಸ್ಲಿಂ ಕಾನೂನಿನಲ್ಲಿ ಆಗಬೇಕಾದ ಯಾವುದೇ ಬದಲಾವಣೆಗೂ ಮುಸ್ಲಿಂರೇ ಹೊಣೆಗಾರರು ಮತ್ತು ಬೇರೆ ಜಾತಿ, ಪಂಗಡಗಳಿಗೆ ಸೇರಿದವರು ಯಾವುದೇ ಅಭಿಪ್ರಾಯ ವ್ಯಕ್ತ ಪಡಿಸಬೇಕಿಲ್ಲವೆಂಬ ಮಾತು ಆಗಾಗ್ಗೆ ಕೇಳಿಬರುತ್ತಿದೆ. ಭಾರತದ ಉಳಿದ ಪ್ರಜೆಗಳು ಇದರ ಬಗ್ಗೆ ಯಾವುದೇ ಕಾಳಜಿ ತೋರಿಸಬೇಕಿಲ್ಲ, ಎನ್ನುವುದು ಸರಿಯೇ ? ಸಂಪ್ರದಾಯಸ್ಥ ಮುಸ್ಲಿಂರ ಈ ಅಭಿಪ್ರಾಯವನ್ನು ಒಪ್ಪಿಕೊಂಡರೆ, ದೇಶದಲ್ಲಿ ನಡೆಯು

ಈ ಆಜ್ಞೆ ಜಾರಿಗೊಳ್ಳುವುದು ಹತ್ತು ಮತ್ತು ಅದಕ್ಕಿಂತ ಹೆಚ್ಚು ಮಂದಿ ಕೆಲಸ ಮಾಡುವ ಕ್ಷೇತ್ರಗಳಲ್ಲಿ. ನಲವತ್ತು ಮಂದಿ ಕೆಲಸ ಮಾಡುವಂಥ ಜಾಗದಲ್ಲೂ ಆ ಕಾರ್ಖಾನೆಯನ್ನು ಐದು ವಿಭಾಗವಾಗಿ ವಿಭಜಿಸಿ ಈ ಆರ್ಡಿನೆನ್ಸ್‌ನಿಂದ ತಪ್ಪಿಸಿಕೊಳ್ಳುವ ಖದೀಮರಿದ್ದಾರೆ. 'ಸಮಾನ ಕೆಲಸ' ಎನ್ನುವುದನ್ನು ತಮ್ಮ ಮೂಗಿನ ನೇರಕ್ಕೆ ಅರ್ಥೈಸಿಕೊಳ್ಳುವ ಚಾಣಾಕ್ಷ ಮಾಲೀಕರಿಗೆ ಸ್ತ್ರೀ ಪುರುಷರು ಮಾಡುವ ಕೆಲಸ ಸಮಾನವಾದುದಲ್ಲ–ಎಂದು ಅರ್ಥೈಸುವುದು ಹೆಚ್ಚು ಕಷ್ಟವಲ್ಲ. ಮನೆ ಕಟ್ಟುವ, ಹೊಲ-ಗದ್ದೆಗಳಲ್ಲಿ ಕೆಲಸ ಮಾಡುವ ಕೆಲಸಗಾರರನ್ನು ಅವರ ಕೆಲಸಗಳಿಗಿಂತ ಹೆಚ್ಚಾಗಿ ಹೆಣ್ಣಾಳು, ಗಂಡಾಳು ಎಂದೇ ನಿರ್ದೇಶಿಸುವ ನಮ್ಮ ಸಂಸ್ಕೃತಿಯ ಪದ್ಧತಿಯು ನಾಚಿಕೆಗೇಡಿನದು.

ರಕ್ಷಣೆ ಇಲ್ಲ

ಈ ಆಜ್ಞೆಯನ್ನು ಜಾರಿಗೆ ತರುವ ಸಂದರ್ಭದಲ್ಲಿ ಮಹಿಳಾ ಕಾರ್ಮಿಕರು ಕೆಲಸ ಕಳೆದುಕೊಳ್ಳದಂತೆ ಅವರನ್ನು ರಕ್ಷಿಸುವುದಕ್ಕೆ ಈ ಆಜ್ಞೆಯಲ್ಲಿ ಅವಕಾಶಗಳಿಲ್ಲ. 1968ರಲ್ಲಿ ಕಲ್ಲಿದ್ದಲು ಗಣಿಯ ಕಾರ್ಖಾನೆಯ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿದ ತಂಡವು ನೀಡಿರುವ ವರದಿಯಲ್ಲಿ ಮಹಿಳಾ ಕಾರ್ಮಿಕರ ಸಂಖ್ಯೆ ಇಳಿಮುಖವಾಗುವುದಕ್ಕೆ 'ಸಮಾನ ದುಡಿಮೆಗೆ ಸಮಾನ ವೇತನ, ಹೆರಿಗೆ ಭತ್ಯೆ ಮತ್ತು ಬಾಲವಾಡಿಗಳ ಸೌಕರ್ಯ ನೀಡಬೇಕೆಂಬ ಬೇಡಿಕೆಗಳೇ ಕಾರಣ' ಎಂದು ತಿಳಿಸಿದೆ. ಈ ಆರ್ಡಿನೆನ್ಸ್‌ನ್ನು ಜಾರಿಗೊಳಿಸದಿರುವ ಮಾಲೀಕರಿಗೆ ಶಿಕ್ಷೆಯಾದ ಸಂಗತಿಗಳೇ ಇಲ್ಲ. ಆದರೆ, ಇದರಿಂದ ವಂಚಿತರಾದ, ಅನ್ಯಾಯಕ್ಕೊಳಗಾದ ಮಹಿಳೆಯರ ದೃಷ್ಟಾಂತಗಳು ಹೇರಳವಾಗಿ ಸಿಕ್ಕುತ್ತವೆ. ಮಹಿಳಾ ರಕ್ಷಣಾ ಶಾಸನಗಳು ಜಾರಿಯಾದಾಗಲೆಲ್ಲಾ ಅದರಿಂದ ಮಹಿಳಾ ಕಾರ್ಮಿಕರ ಸಂಖ್ಯೆ ಇಳಿಮುಖವಾಗುತ್ತಲೇ ಇರುವುದು ಮತ್ತೊಂದು ದುರಂತ.

ಆಕಾಶದಲ್ಲೇ ಹಾರಾಡುವ ನಮ್ಮ ಸಮಾಜದ ದೊಡ್ಡ ದೊಡ್ಡ ಶ್ರೀಮಂತರ ಮನಸ್ಸಿಗೆ ಉಲ್ಲಾಸದ ಪ್ರಯಾಣವನ್ನು, ಆತಿಥ್ಯವನ್ನು ಒದಗಿಸಲೆಂದೇ ಇರುವ 'ಪ್ರತಿಷ್ಠಿತ ಪರಿಚಾರಿಕೆ'ಯರಾದ ಗಗನ ಸಖಿಯರು ಯಾವಾಗ ಮದುವೆಯಾಗಬೇಕು, ಯಾವಾಗ ಮಕ್ಕಳನ್ನು ಹೆರಬೇಕು ಎಂದು ಅವರ ಮಾಲೀಕರು ನಿರ್ಧರಿಸುವುದು ನಾಚಿಕೆಗೇಡಿನ ವಿಷಯ. ಗಗನ ಸಖಿಯರು ಮದುವೆ ಮಾಡಿಕೊಂಡು ಮಕ್ಕಳನ್ನು ಹೆತ್ತು ತಮ್ಮ ಮೈ ಮಾಟವನ್ನು, ಸೌಂದರ್ಯವನ್ನು ಕೆಡಿಸಿಕೊಂಡರೆ ಹೇಗೆ? ಎಂಬ ಚಿಂತೆ ಸರ್ಕಾರ ಮತ್ತು ನ್ಯಾಯಾಲಯಕ್ಕೆ. "ಗಗನ ಸಖಿಯರು ಎರಡು ಮಕ್ಕಳನ್ನು ಹೊಂದಬಹುದು ಮತ್ತು ಇಪ್ಪತ್ತುಮೂರು ವರ್ಷಗಳ ನಂತರ ಮದುವೆಯಾಗಬಹುದು" ಎಂದು ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ನ್ಯಾಯಾಧೀಶ ಫಜಲ್ ಅಲಿ ನೀಡಿರುವ ತೀರ್ಪು ಇದಕ್ಕೆ ಸಾಕ್ಷಿ.

ವೃತ್ತಿ–ಕುಟುಂಬ

ಅನೇಕ ಎಡರು ತೊಡರುಗಳನ್ನು ದಾಟಿ, ಪುರುಷನಿಗೆ ಸವಾಲಾಗಿ ಐ.ಎ.ಎಸ್., ಐ.ಎಫ್.ಎಸ್. ಮುಂತಾದ ಹುದ್ದೆಗಳಲ್ಲಿರುವ ನಮ್ಮ ಪ್ರತಿಭಾವಂತ ಮಹಿಳೆಯರ ದಾರುಣ ಅನುಭವ ಇನ್ನೊಂದು ರೀತಿಯದು. ಹೆಣ್ಣು ಕೇವಲ ಕೌಟುಂಬಿಕ ಜೀವನಕ್ಕೆ ಲಾಯಕ್ಕು ಎನ್ನುವ

> ಹೆಣ್ಣು ಕೇವಲ ಕೌಟುಂಬಿಕ ಜೀವನಕ್ಕೆ ಲಾಯಕ್ಕು ಎನ್ನುವ ಸೇವಾ ನಿಯಮಗಳು ಮತ್ತು ಅವುಗಳ ವಿರುದ್ಧ ಧ್ವನಿ ಎತ್ತಲಾಗದ ನ್ಯಾಯಾಲಯ ನಮ್ಮ ಸಂಸ್ಕೃತಿಯ ದುರಂತಗಳಲ್ಲೊಂದು

ಸೇವಾನಿಯಮಗಳು ಮತ್ತು ಅವುಗಳ ವಿರುದ್ಧ ದನಿಯೆತ್ತಲಾಗದ ನ್ಯಾಯಾಲಯ ನಮ್ಮ ಸಂಸ್ಕೃತಿಯ ದುರಂತಗಳಲ್ಲೊಂದು. ನ್ಯಾಯಾಂಗ ಮತ್ತು ಆಡಳಿತ ಯಂತ್ರಕ್ಕೆ ಶುದ್ಧೀಕರಣದ ಅಗತ್ಯ ಎಷ್ಟಿದೆ ಎಂಬುದಕ್ಕೆ ಇದೊಂದು ನಿದರ್ಶನ.

ಭಾರತದ ವಿದೇಶ ಸೇವೆಯಲ್ಲಿ (ಐ.ಎಫ್.ಎಸ್.) ಕೆಲಸ ಮಾಡುತ್ತಿರುವ ಹಿರಿಯ ಅಧಿಕಾರಿ ಶ್ರೀಮತಿ ಮುತ್ತಮ್ಮ 1979ರಲ್ಲಿ ಮಹಿಳೆಯೆಂಬ ಕಾರಣಕ್ಕೇ ತಮಗೆ ಮುಂಬಡ್ತಿ ಸಿಕ್ಕಿಲ್ಲವೆಂದು ಸುಪ್ರೀಂಕೋರ್ಟಿನಲ್ಲಿ ಅಪೀಲು ಹೋಗಿದ್ದರು. ವಿದೇಶ ಸೇವೆಗೆ ಸೇರುವ ಸಂದರ್ಭದಲ್ಲಿ ಮದುವೆಯಾದಲ್ಲಿ ಕೆಲಸಕ್ಕೆ ರಾಜೀನಾಮೆ

ಅನಕ್ಷರತೆ, ಸಂಘಟನೆಯಿಲ್ಲದಿರುವುದು, ಶಾಸನವನ್ನು ಶಕ್ತವಾಗಿ ಅನುಷ್ಠಾನಕ್ಕೆ ತರುವಲ್ಲಿ ಸರ್ಕಾರಕ್ಕಿರುವ ನಿರಾಸಕ್ತಿ.

ಕಂಟ್ರಾಕ್ಟರ್ ಹಿಡಿತದಲ್ಲಿ

ಬೀಡಿ ಕಾರ್ಖಾನೆಯನ್ನು ಒಟ್ಟಾಗಿ ನಿಯಂತ್ರಿಸುವವರು ಕಂಟ್ರಾಕ್ಟರ್‌ಗಳು. ಇವರು ಪುರುಷರೇ ಆಗಿರುತ್ತಾರೆ. ಮೇಲಿನ ಶಾಸನವನ್ನು ಅನುಷ್ಠಾನಕ್ಕೆ ತರುವವನು, ಹಾಗೆ ತರದಿದ್ದಲ್ಲಿ ಶಿಕ್ಷೆಗೊಳಗಾಗಬೇಕಾದವನು ಕಂಟ್ರಾಕ್ಟರಲ್ಲ; ಮ್ಯಾನೇಜರ್. ಆದರೆ ಮ್ಯಾನೇಜರ್‌ನಿಗೂ ಬೀಡಿ ಕಾರ್ಮಿಕರಿಗೂ ಯಾವುದೇ ರೀತಿಯ ಪ್ರತ್ಯಕ್ಷ ಸಂಬಂಧವಿಲ್ಲ. ಬೀಡಿ ಕಾರ್ಮಿಕರಿಗೆ ಕೆಲಸ ಕೊಡುವವನು, ಕೂಲಿ ನೀಡುವವನು, ಕೆಲಸದಿಂದ ವಜಾ ಮಾಡುವವನು, ಒಂದರ್ಥದಲ್ಲಿ ಮಾಲೀಕನೆಂದರೆ ಕಂಟ್ರಾಕ್ಟರ್. ಅವನು ತನಗೆ ಸಿಕ್ಕಿರುವ ಪರಮಾಧಿಕಾರವನ್ನು ಸೂಕ್ತ ರೀತಿಯಲ್ಲಿ ಚಲಾಯಿಸದೇ ಇರಲಾರ.

1966ರ ಬೀಡಿ ಮತ್ತು ಸಿಗರೇಟ್ ಕಾಯಿದೆಯ ಪ್ರಕಾರ ಮಾಲೀಕರು ಪ್ರತಿಯೊಬ್ಬ ನೌಕರನಿಗೂ ಒಂದು ಪಾಸ್ ಪುಸ್ತಕ ಕೊಡಬೇಕು. ಅದರಲ್ಲಿ ಪ್ರತಿಯೊಬ್ಬ ನೌಕರನ ಹೆಸರು, ವಿಳಾಸ, ಕೆಲಸ ಮಾಡಿದ ದಿನಗಳು, ತಯಾರಿಸಿದ ಬೀಡಿಗಳು, ಪ್ರಾವಿಡೆಂಟ್ ಫಂಡ್, ಬೋನಸ್-ಎಲ್ಲವನ್ನೂ ದಾಖಲು ಮಾಡಬೇಕು. ಅವರ ಫೋಟೋ ಅಂಟಿಸಬೇಕು. ಅನಕ್ಷರಸ್ಥರಾದ ಸುಮಾರು ಎಲ್ಲಾ ಮಹಿಳೆಯರೂ ಕೆಲಸದ ದಿನಚರಿಯ ಈ 'ಲಾಗ್ ಬುಕ್'ನ್ನು ತುಂಬಲು ಮತ್ತೆ ಕಂಟ್ರಾಕ್ಟರ್ ಬಳಿಯೇ ಹೋಗಬೇಕು. ಈ ಸದವಕಾಶವನ್ನು ದುರುಪಯೋಗಪಡಿಸಿಕೊಳ್ಳುವ ಎಲ್ಲಾ ಕಂಟ್ರಾಕ್ಟರುಗಳು ಈ 'ಲಾಗ್' ಪುಸ್ತಕದಲ್ಲಿ ಸರಿಯಾದ ಮಾಹಿತಿಯನ್ನು ತುಂಬುವುದಿಲ್ಲ. ಇದರಿಂದಾಗಿ ಬೀಡಿ ಕಾರ್ಮಿಕರಿಗೆ ಆರ್ಥಿಕ ಭದ್ರತೆಯಾಗಲೀ, ಸಿಗಬೇಕಾದ ಸವಲತ್ತುಗಳಾಗಲೀ ಲಭಿಸುವುದಿಲ್ಲ. ಮಹಿಳಾ ಕಾರ್ಮಿಕರ 'ಲಾಗ್‌ಬುಕ್'ನಲ್ಲಿ ಅಂಟಿಸಲಾಗಿರುವ ಫೋಟೋಗಳು ಸಾಮಾನ್ಯವಾಗಿ ಅವರ ಗಂಡು ಮಕ್ಕಳದೋ ಅಥವಾ ಗಂಡನದೋ ಆಗಿರಬೇಕಾಗುತ್ತವೆ. ಮತ್ತು ಆ ಪುಸ್ತಕಗಳಿಗೂ ಅವರ ಹೆಸರಿನಲ್ಲೇ ಇರಬೇಕಾಗುತ್ತದೆ. ಅವರಿಗೆ ನೀಡಲೇಬೇಕಾಗಿರುವ ಹೆರಿಗೆ ರಜಾ ಮತ್ತು ಹೆರಿಗೆ ಭತ್ಯವನ್ನು ಖೋತಾ ಮಾಡಲಿಕ್ಕೆ ಈ ಸಂಚು! ಇದಕ್ಕೆ ಕಲಶವಿಟ್ಟಂತೆ ಅನ್ಯಾಯಕ್ಕೆ ಪ್ರತಿಭಟಿಸುವ ಮಹಿಳೆಯರಿಗೆ ಕಂಟ್ರಾಕ್ಟರುಗಳ ಅವಿನಯ ಹಾಗೂ ಅಮಾನವೀಯ ವರ್ತನೆ ಸಿದ್ಧವಾಗಿರುತ್ತದೆ.

ಅಂತರರಾಷ್ಟ್ರೀಯ ಮಹಿಳಾ ವರ್ಷದಂದು ನಮ್ಮ ಭಾರತದ ಮಹಿಳಾ ಸಮುದಾಯ ಪಡೆದ ಕೊಡುಗೆ 'ಸಮಾನ ದುಡಿಮೆಗೆ ಸಮಾನ ವೇತನ'ದ ಕಾಯಿದೆ. ರಾಷ್ಟ್ರಪತಿಯವರು 1975ರ ಸೆಪ್ಟೆಂಬರ್ 26 ರಂದು ಈ ಕುರಿತು ಸುಗ್ರೀವಾಜ್ಞೆ ಹೊರಡಿಸಿದರು. ಅಂತೂ ಸ್ವಾತಂತ್ರ್ಯ ಬಂದ ಇಪ್ಪತ್ತೇಳು ವರ್ಷಗಳ ನಂತರ, ಐ. ಎಲ್. ಓ ಈ ನಿರ್ಣಯವನ್ನು ಒಪ್ಪಿಕೊಂಡ ಹದಿನೇಳು ವರ್ಷಗಳ ನಂತರ, ಕಾಗದದ ಮೇಲಾದರೂ ಈ ಕಾಯಿದೆಗೆ ಸಹಿ ಬಿತ್ತು.

> 'ಸಮಾನ ಕೆಲಸ' ಎನ್ನುವುದನ್ನು ತಮ್ಮ ಮೂಗಿನ ನೇರಕ್ಕೆ ಅರ್ಥೈಸಿಕೊಳ್ಳುವ ಚಾಣಾಕ್ಷ ಮಾಲೀಕರಿಗೆ ಸ್ತ್ರೀ-ಪುರುಷರು ಮಾಡುವ ಕೆಲಸ ಸಮಾನವಾದುದಲ್ಲ ಎಂದು ಅರ್ಥೈಸುವುದು ಹೆಚ್ಚು ಕಷ್ಟವಲ್ಲ. ಮನೆಕಟ್ಟುವ ಕೆಲಸಗಾರರನ್ನು ಅವರ ಕೆಲಸಗಳಿಗಿಂತ ಹೆಚ್ಚಾಗಿ ಹೆಣ್ಣಾಳು, ಗಂಡಾಳು ಎಂದು ನಿರ್ದೇಶಿಸುವ ನಮ್ಮ ಸಂಸ್ಕೃತಿಯ ಪದ್ಧತಿಯು ನಾಚಿಕೆಗೇಡಿನದು.

'ಸಮಾನ ದುಡಿಮೆಗೆ ಸಮಾನ ವೇತನ'ದ ಕಾಯಿದೆಯ ಪ್ರಕಾರ ಪ್ರತಿಯೊಬ್ಬ ಸ್ತ್ರೀ ಪುರುಷರು ಒಂದೇ ಕೆಲಸವನ್ನು ಮಾಡುತ್ತಿದ್ದರೆ ಮತ್ತು ಒಂದೇ ರೀತಿಯ ಕೆಲಸವನ್ನು ಮಾಡುತ್ತಿದ್ದರೆ ಸಮಾನ ವೇತನ ಪಡೆಯಬೇಕು. ಕೆಲಸಕ್ಕೆ ನೇಮಕಾತಿ ಮಾಡಿಕೊಳ್ಳುವ ಸಂದರ್ಭದಲ್ಲೂ ಸ್ತ್ರೀ ಪುರುಷರ ನಡುವೆ ಬೇಧವಿರಕೂಡದು. ಈ ರೀತಿ ತಾರತಮ್ಯ ತೋರಿಸಿದ ಮಾಲೀಕನಿಗೆ ಶಿಕ್ಷೆಯಾಗಿ ಸುಮಾರು 5000 ರೂ.ಗಳವರೆಗೆ ದಂಡ ವಿಧಿಸಬಹುದು. ಅವನನ್ನು ಬಂಧಿಸುವುದರ ಬಗ್ಗೆ ಆರ್ಡಿನೆನ್ಸ್‌ನಲ್ಲಿ ಎಲ್ಲೂ ಸೊಲ್ಲಿಲ್ಲ!

ಮಾನಸಿ

ಕಥೆ

● ರಮಜಾನ್ ದರ್ಗಾ

ಹಾ ! ನನಗಂತೂ ಸಾಕಾಗಿ ಹೋಗಿದೆ. ಈ ಪರಿಸರವೇ ನನ್ನನ್ನಿಲ್ಲಿಗೆ ತಂದಿದೆ. ಚಿಕ್ಕವಳಿದ್ದಾಗ ಜೀವನ ಎಷ್ಟೊಂದು ಹಾಯಾಗಿತ್ತು. ಇಂದು ತುಂಬ ಬೆಳೆದಿದ್ದೇನೆ. ಬದುಕು ಅಣುವಿನಂತಾಗಿದೆ. ಹೌದು ಅಣು. ಎಲೆಕ್ಟ್ರಾನ್ ತಿರುಗುತ್ತಿವೆ ನ್ಯೂಕ್ಲಿಯಸ್ ಸುತ್ತ, ನ್ಯೂಕ್ಲಿಯಸ್‌ನ ಪ್ರೊಟಾನ್ಸ್ ಇವನ್ನು ಆಕರ್ಷಿಸುತ್ತಿವೆ. ಆದರಲ್ಲಿ ಚಾರ್ಜ್ ಆಗದ ನ್ಯೂಟ್ರಾನ್ಸ್ ಇವೆ ನನ್ನಲ್ಲಿರುವ 'ಸಂಸ್ಕೃತಿ'ಯಂತೆ. ನಾನು ಎಲೆಕ್ಟ್ರಾನ್ ಆಗಿ ತಿರುಗುತ್ತಿದ್ದೇನೆ ಈ ಸಂಸ್ಕೃತಿಯ ಸುತ್ತ, ಪ್ರೊಟಾನ್ಸ್‌ದಂತೆ ಆಕರ್ಷಿಸುವ ಪ್ರಕೃತಿಯ ಸುತ್ತ.

ಸಂಸ್ಕೃತಿ ಎಂಬುದು ಪ್ರಕೃತಿಯ ಮೇಲೆ ಜೀವಿಸುವ ಪರಾವಲಂಬಿ ಎಂದು ಹೇಳುವವರನ್ನು ಮೆಚ್ಚುತ್ತೇನೆ. ಈ ರೀತಿ ಚಿಂತಿಸುವವರನ್ನು 'ಮಾನವನನ್ನು ಯಾಂತ್ರೀಕರಿಸುವವರು'ಎಂದು ಟೀಕಿಸುತ್ತಾರೆ. ನಾನು ಈ ಟೀಕೆಗೆ ಬೆಲೆ ಕೊಡುವವಳಲ್ಲ. ಆದರೂ ನನ್ನಲ್ಲಿಯೇ ಇಬ್ಬಂದಿತನವಿದೆ. ವಿಚಾರ ಮಾಡುವುದೇ ಬೇರೆ. ಸಹಸ್ರಾರು ವರ್ಷಗಳ ಸಂಸ್ಕಾರವನ್ನುಂಡು ಕೊಬ್ಬಿದ ಪರಿಸರ ನನ್ನ ಸುತ್ತಿದೆ. ಮನುಷ್ಯರ ರಕ್ತದಿಂದ ಹುಟ್ಟಿದ್ದೇನೆ ಅದನ್ನೇ ಬಯಸುತ್ತೇನೆ ಎಂಬರಿವು ನನಗಿದ್ದರೂ ಇದರಿಂದ ಪಾರಾಗಲು ಸಾಧ್ಯವಿಲ್ಲ. ಒಂದಿಷ್ಟು ಕೈ ಇಟ್ಟು ಕೊಂಡರೂ ಆದಿರಲಿ ತಲೆದಿಂಬನ್ನು ಎದೆಗವಚಿ ಮಲಗಿದರೂ ನಿದ್ರೆ ಬರದೆ ಅವರಿವರ ನೆನಪು ಬಂದರೂ ಇಲ್ಲವೆ ಹಗಲಲ್ಲಿ ಆ ಅವನೊಡನೆ ಈ ಇವನೊಡನೆ ನಿಂತು ಏನೇನೋ ಮಾತಾಡಿ ಮನಸ್ಸನ್ನು ಹಗುರಾಗಿಸಿಕೊಳ್ಳಬೇಕೆಂದರೂ ಇದು ಬಿಡುತ್ತಿಲ್ಲ.

ಬೇಡ ಈ ರೀತಿ ಕಥೆ ಬರೆಯುವುದಕ್ಕಿಂತಲೂ ಕವನ ಬರೆಯುವುದೇ ಒಳ್ಳೆಯದು.

ಅಯ್ಯೋ !
ನೆನಪುಗಳು
ಬರುತಿವೆ
ಹಾಡುತಿವೆ
ಕಾಡುತಿವೆ
ಹೇಳುತಿವೆ
ಏನೇನೊ
ಕೇಳುತಿವೆ
ಹೆದರಿಸಿ
ಬಳಲಿಸಿ
ನಗುತಿವೆ.

ಇದೂ ಕವಿತೆಯೆ? ಥೂ ಒಂದನ್ನೂ ಬರೆಯಲಿಕ್ಕಾಗುತ್ತಿಲ್ಲ. ಏನೆಲ್ಲ ಬರೆಯಬೇಕೆನ್ನುತ್ತೇನೆ. ಕಥೆ, ಕಾದಂಬರಿ, ನಾಟಕ ಹೋಗಲಿ ಕವನ ಬರೆಯಲಿಕ್ಕಾದರೂ ಬರಬಾರದೆ. ನನ್ನನ್ನು ನಾನೇ ಚಿತ್ರಿಸಬೇಕೆಂದರೆ ಯಾವ ಮಾಧ್ಯಮವೂ ಸಹಾಯಕ್ಕೆ ಬರುತ್ತಿಲ್ಲ. "ಏನಾದರೂ ಬರೆ" ಎಂದು ಮೇಷ್ಟ್ರು ಸತಾಯಿಸುತ್ತಲೇ ಇರ್ತಾರೆ. ಅವರ ಮತ್ತು ನನ್ನ ಕಥೆ ಬರೆದರೆ ಒಳ್ಳೆಯ ಕಾದಂಬರಿಯಾಗುತ್ತದಲ್ಲಾ ! ಇಲ್ಲವೆ ಅವರ ಕಥೆಯನ್ನೇ ಬರೆದರೆ; ಆದೆಷ್ಟೋ ದುರಂತ ಸನ್ನಿವೇಶಗಳಿಗೆ ಸೂತ್ರಧಾರಿಯಾಗಿ ನಿಲ್ಲುವ ಅವರ ಪಾತ್ರ ವೈವಿಧ್ಯಮಯವಾಗಿ ಮೂಡಿ ಬರುತ್ತದೆ. ಆದರೆ ನನ್ನದರ ಕೊನೆಯನ್ನು ಅವುಗಳಲ್ಲಿ ನೋಡಿ ನಮ್ಮಿಬ್ಬರ ಕಥೆ ಬರೆಯುವುದೇ ಒಳ್ಳೆಯದು. ಸರಿ ಎಲ್ಲಿಂದ ಪ್ರಾರಂಭಿಸಲಿ. ಅವರು ನನ್ನನ್ನು ಮನೆಗೆ ಕರೆದುಕೊಂಡು ಹೋದಾಗಿನಿಂದ....ಛೆ ಹಾಗೆ ಬರೆದರೆ ಆತ್ಮಚರಿತ್ರೆಯಾಗುತ್ತದೆ. ಹೇಗೆನ್ನುವುದಕ್ಕಿಂತ ಚರಿತ್ರೆ ಎನ್ನುವುದು ಲೇಸು. ಈ ಚರಿತ್ರೆಯಲ್ಲಿ ಹೊಡಿ, ಬಡಿ, ಕಡಿಗಳಿಲ್ಲ; ಇವೆಲ್ಲವುಗಳಿಗಿಂತ ಹೆಚ್ಚಿನದು ಕಲಾತ್ಮಕವಾದುದು, ಕಲೆ ಅಳಿಸಲಾರದ್ದು.

ಢಣ್....ಢಣ್....ಢಣ್. ಬೇಡ ಬೇಡ ಈ ಢಣ್ ಎನ್ನುವುದರಿಂದಲೇ ಏಕೆ ಪ್ರಾರಂಭಿಸಬೇಕು ? ಈ ಢಣ್

ಕೊಡುವುದಾಗಿ ಬರವಣಿಗೆಯಲ್ಲಿ ಬರೆದು ಕೊಡಬೇಕೆಂಬ ಸೇವಾ ನಿಯಮವನ್ನು ಅವರು ಪ್ರಶ್ನಿಸಿದ್ದರು. 1961ರ ಭಾರತೀಯ ವಿದೇಶ ಸೇವಾನಿಯಮ 18ರ ಪ್ರಕಾರ 'ಯಾವ ವಿವಾಹಿತ ಸ್ತ್ರೀಯನ್ನೂ ಈ ವಿದೇಶ ಸೇವೆಯಲ್ಲಿ ನೇಮಕಾತಿ ಮಾಡಿಕೊಳ್ಳಕೂಡದು, ಮುಂದುವರಿದು ಭಾರತದ ವಿದೇಶ ಸೇವೆಯ ನಿಯಮ 1961, ನಿಯಮ 8 (2)ರ ಪ್ರಕಾರ ವಿದೇಶ ಸೇವೆಯಲ್ಲಿರುವ ಮಹಿಳೆ ಮದುವೆಯಾಗಬೇಕಾದರೆ ಸರ್ಕಾರದ ಅನುಮತಿ ಪಡೆಯಬೇಕು. ಅವಳ ಗೃಹಿಣಿಯ ಕರ್ತವ್ಯವು ವಿದೇಶ ಸೇವೆಯ ಕರ್ತವ್ಯಕ್ಕೆ ಅಡ್ಡ ಬಂದರೆ ಸರ್ಕಾರ ಅವಳನ್ನು ರಾಜೀನಾಮೆ ಕೊಡಲು ಒತ್ತಾಯಿಸಬಹುದು. ಈ ನಿಯಮ ವಿವಾಹಿತ ಪುರುಷನಿಗೆ ಅನ್ವಯಿಸುವುದಿಲ್ಲ. ಹಾಗಾದರೆ ವಿವಾಹಿತ ಪುರುಷನಿಗೆ ಕುಟುಂಬದ ಜವಾಬ್ದಾರಿಯೇನೂ ಇರಬೇಕಾಗಿಲ್ಲವೆಂದು ಪುರುಷ ಪ್ರಧಾನ ಶಾಸನವೇ ಆಜ್ಞೆ ಮಾಡಿದೆಯೇ ?

ಈ ಅಂಶಗಳನ್ನು ಸವಿವರವಾಗಿ ಗುರುತಿಸಿದ ಜಸ್ಟೀಸ್ ವಿ. ಆರ್. ಕೃಷ್ಣಯ್ಯರ್‌ರವರು ಹೆಣ್ಣಿನ ಸ್ವಾಭಿಮಾನಕ್ಕೆ ಬರೆಯೆಳೆವ, ಸ್ತ್ರೀತ್ವವನ್ನು ಅಪಮಾನಗೊಳಿಸುವ ಈ ಸೇವಾನಿಯಮಗಳಿಂದ ಉದ್ಭವಿಸಿರುವ ಸಮಸ್ಯೆಯನ್ನು ಒಪ್ಪಿಕೊಂಡರು; ಆದರೆ ಸೇವಾನಿಯಮಗಳ ವಿರುದ್ಧ ತೀರ್ಪು ಕೊಡುವುದು ಅವರ ಪರಿಧಿಗೆ ಒಳಪಡುವುದಿಲ್ಲವಾದ್ದರಿಂದ ಫಿರ್ಯಾದಿಯ ಅಪೀಲನ್ನು ತಿರಸ್ಕರಿಸಿದರು. ಅಷ್ಟೇ ಅಲ್ಲದೆ, ಸರ್ಕಾರದ ಸೇವಾನಿಯಮಗಳಲ್ಲಿರುವ ಲಿಂಗಭೇದವನ್ನು ತೊಡೆದು ಹಾಕಬೇಕೆಂದು ಸರ್ಕಾರಕ್ಕೆ ಒತ್ತಾಯಿಸಿದರು.

ಮಹಿಳಾ ಕಾರ್ಮಿಕರ ಸಮಸ್ಯೆಗಳನ್ನು, ಅವರಿರುವ ಹತಾಶ ಸ್ಥಿತಿಯನ್ನು ಅಧ್ಯಯನ ಮಾಡದೆ ಎಷ್ಟು ರಕ್ಷಣಾ ಕಾಯ್ದೆಗಳನ್ನು ಜಾರಿಗೆ ತಂದರೂ ಸರ್ಕಾರ ಏನೂ ಸಾಧಿಸಿದಂತಾಗುವುದಿಲ್ಲ. ಅಸಂಘಟಿತರಾದ ಮಹಿಳಾ ಕಾರ್ಮಿಕರಿಗೆ ಅವರ ಹಕ್ಕುಗಳ ಬಗ್ಗೆ ಎಚ್ಚರ ಮೂಡಿಸಿ, ರಕ್ಷಣಾ ಕಾಯಿದೆಗಳ ಲಾಭ ಅವರಿಗೆ ದೊರಕುವಂತೆ ಮಾಡಬೇಕಾದರೆ, ಸಶಕ್ತ ಸಂಘಟನೆಯ ಅಗತ್ಯವಿದೆ. ದುಡಿಯುವ ಹೆಣ್ಣು ನಡೆಯುತ್ತಿರುವ ದಾರಿಯಲ್ಲಿ ಮುಳ್ಳುಕಲ್ಲು ಬೇಕಾದಷ್ಟು. ಆದರೆ ಇದಕ್ಕಾಗಿ ಎದೆಗುಂದಬೇಕಾಗಿಲ್ಲ. ಹಿಂದಿನ ಮಹಿಳೆಗಿಂತ ಇಂದಿನ ಮಹಿಳೆ ಹೆಚ್ಚು ಅನುಕೂಲಗಳನ್ನು ಹೊಂದಿದ್ದರೆ ಅದು ಅವಳ ಸಂಘಟಿತ ಹೋರಾಟದ ಫಲ. ಮಹಿಳೆಯನ್ನು ಸಮಾಜದ ನಿಶ್ಶಕ್ತ ಭಾಗವೆಂದು, ಅಲಂಕರಣ ವಸ್ತುವೆಂದು ಪರಿಗಣಿಸುವ ಮೌಲ್ಯಗಳ ವಿರುದ್ಧವೂ ಹೋರಾಟ ನಡೆಸಬೇಕಾಗಿದೆ. ಇಲ್ಲದಿದ್ದರೆ ಕಾನೂನು, ಕಾಯಿದೆಗಳು ಕಣ್ಣೊರೆಸುವ ತಂತ್ರವಾಗುತ್ತವೆ; ಕಾಗದದ ಮೇಲೆ ವಿಜೃಂಭಿಸುವ ಕೊಡುಗೆಗಳಾಗುತ್ತವೆ. ಕಿವುಡು ಸರ್ಕಾರ, ಕುರುಡು ಕಾನೂನು ಯಥಾಪ್ರಕಾರ ತಮ್ಮ ಹಾದಿಯಲ್ಲೇ ಸಾಗಿರುತ್ತವೆ.

ಕಾನೂನಿನ ಚೌಕಟ್ಟು–ವಿಸ್ತರಣೆಯ ಅಗತ್ಯ

(10ನೇ ಪುಟದಿಂದ)

ಅಂಶಗಳ, ಆಪಾದನೆಯ ಪಟ್ಟಿಯ, ಸಾಕ್ಷಿಗಳ ರುಜುವಾತಿನ, ಮತ್ತು ಅದರ ಆಧಾರದ ಮೇಲೆ ಸದ್ಯದ ಕಾನೂನಿನ ಪರಿಧಿಯಲ್ಲಿ ನ್ಯಾಯ ದೊರೆಯುವ ಸಾಧ್ಯತೆ ತೀರಾ ಕಡಿಮೆಯಾಗಿರುವುದು ಸಹಜವಾಗಿದೆ.

ಇಂದಿಗೂ ನಮ್ಮಲ್ಲಿರುವುದು ಪುರುಷರ ಮೇಲುಗೈ ಎಂಬುದನ್ನು ಮರೆಯದಿರೋಣ. ಕಾನೂನಿನ ರಚನೆಯಲ್ಲಿ ಸಹ ಅವನದೇ ಮೇಲುಗೈ ಆಗಿದೆ. ಸಂವಿಧಾನಾತ್ಮಕವಾಗಿ ಮತ್ತು ಕಾನೂನಿನ ಸೂತ್ರದ ಪ್ರಕಾರ ಸ್ತ್ರೀ–ಪುರುಷರಿಬ್ಬರೂ ಸಮಾನರು; ಆದರೆ ನಿಜ ಜೀವನದ ವಿಪರ್ಯಾಸದ ಅನುಭವ ಯಾರಿಗಿಲ್ಲ ? ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಯ ಅಡಿಪಾಯದ ಮೇಲೆ ಸಂವಿಧಾನಾತ್ಮಕವಾದ ಸಮಾನತೆಯು ಕೇವಲ ಕಾಗದದ ಹೂವು, ಅಷ್ಟೆ! ಮಹಿಳೆಯ ಸ್ಥಿತಿಗತಿ ಸದ್ಯಕ್ಕಿರುವುದಂತೂ ಹಾಗೆಯೇ. ದಿನನಿತ್ಯದ ವೃತ್ತ ಪತ್ರಿಕೆಗಳಲ್ಲಿ ವರದಿಯಾಗುವ ಅತ್ಯಾಚಾರಗಳ ಘೋರಘಟನೆಗಳನ್ನೇ ನೋಡಿ: "ವರದಕ್ಷಿಣೆ ಸಾವು", "ಮಹಿಳೆಯ ಮೇಲೆ ಅತ್ಯಾಚಾರ," ಇತ್ಯಾದಿ. ಇಂದಿಗೂ ಸ್ತ್ರೀ ಎಂದರೆ ಒಂದು ಸರಕು ಎಂಬ ಭಾವನೆ ಇದಕ್ಕೆಲ್ಲಾ ಮೂಲಾಧಾರ. ಇದು ಸ್ತ್ರೀಯರನ್ನಷ್ಟೇ ಅಲ್ಲ, ಸಂವೇದನಾಶೀಲ ಪುರುಷರನ್ನು ಸಹ ಆತಂಕಕ್ಕೆ ಒಳಪಡಿಸುತ್ತದೆ. ಕಾನೂನಿನ ಚೌಕಟ್ಟಿನಲ್ಲಿ ಸಮಾನತೆ ಸಿದ್ಧವಾಗಲು ಆರ್ಥಿಕ–ಸಾಮಾಜಿಕ–ಸಾಂಸ್ಕೃತಿಕ ಚೌಕಟ್ಟಿನಲ್ಲಿ ಸಮಾನತೆಯು ಕೇವಲ ಕಲ್ಪನೆಯಾಗಿ ಉಳಿಯದೆ ನೈಜ ಅನುಭವಕ್ಕೆ ಬರುವಂತಿರಬೇಕು. ಅದರ ಆಗುವಿಕೆಯತ್ತ ಮುನ್ನಡೆಯುವುದೇ ಮಹಿಳಾ ಹೋರಾಟದ ಮೊದಲ ಹೆಜ್ಜೆ. ○

ಎನ್ನಲು ಅರ್ಧ ಗಂಟೆ ಹಿಡಿದಿರುತ್ತದೆ. ಮುಂದೆ ಅರ್ಧ ಗಂಟೆಗೆ ಮತ್ತೆ ಫಣ್. ಸುವ್ಯವಸ್ಥಿತ ವಸ್ತುವಿನಿಂದ ಅವ್ಯವಸ್ಥಿತ ವಸ್ತು ಚಿತ್ರಣ ಪ್ರಾರಂಭಿಸುವುದು ಅಸಂಬದ್ಧವಾಗುತ್ತದೆ.

ಅವರು ಅಂದು ಕರೆದು–

"ಈ ಸಲ ಅಭ್ಯಾಸ ಆಗಿಲ್ಲವೆಂದು ಅಂದಿರುವಿಯಂತೆ; ಹಾಗೆಲ್ಲ ಮಾಡಿ ಪರೀಕ್ಷೆ ಬಿಡಬೇಡ. ಇನ್ನು ಮೇಲಾದರೂ ಅಭ್ಯಾಸ ಮಾಡು. ಬರಿ ಸ್ತ್ರೀ ವಿಮೋಚನೆ ಅದು ಇದು ಅಂತ ಚರ್ಚೆ ಮಾಡುತ್ತ ಹೋಗುವುದರೊಳಗೇನಿದೆ? ಮುಂದಿನ ಸಲ ರಿಸರ್ಚ್ ಅಸಿಸ್ಟೆಂಟ್ ಆಗಿ ಸೇರಿಸಿಕೊಳ್ಳಲು ಬಾಸ್ ಅನುಮತಿ ಇತ್ತಿದ್ದಾರೆ. ಆದರೆ ಒಂದು ಮಾತು, ನೀನು ಕೆಲ ವಿದ್ಯಾರ್ಥಿಗಳೊಡನೆ ತಿರುಗುವುದನ್ನು ಬಾಸ್ ನೋಡಿದ್ದಾರೆ. ಅಂದಿನಿಂದ ನಿನ್ನ ಬಗ್ಗೆ ಅವರಿಗೆ ಬೇಸರ. ಅಷ್ಟೇ ಅಲ್ಲ, ನೀನೊಂದು ಸಲ ಅವರ ಮಗಳ ಮುಂದೆ "ಅರುಣ್ ಮತ್ತು ಅವರ ಗೆಳೆಯರು ಪ್ರೊಗ್ರೆಸ್ಸಿವ್ ಇದ್ದಾರೆ, ಜಗತ್ತಿನ ಸಮಸ್ಯೆಗಳ ಕುರಿತು ಚರ್ಚಿಸುತ್ತಾರೆ" ಎಂದಿರುವಿಯಂತೆ. ಅದು ಕೂಡ ಬಾಸ್‌ಗೆ ಗೊತ್ತಿದೆ. ನೀನು ಅವರ ಗೊಡವೆಗೆ ಹೋಗಬೇಡ. ಅವರು ನಿಜವಾಗಿಯೂ ವಿದ್ಯಾರ್ಥಿಗಳಲ್ಲ. ತಾಯಿ–ತಂದೆ ಕಲಿಯಲು ಕಳಿಸಿದರೆ ಇವರು ಕ್ರಾಂತಿಕಾರಿಗಳಾಗಲು ಹೊರಟಿದ್ದಾರೆ. ನೀನು ಅವರೊಡನೆ ತಿರುಗಾಡಿದರೆ ಬಾಸ್ ಮುಂದಿನ ಸಲ ಖಂಡಿತಾ ನಿನಗೆ ರಿಸರ್ಚ್ ಅಸಿಸ್ಟೆಂಟ್ ಆಗಿ ತೆಗೆದು ಕೊಳ್ಳೋದಿಲ್ಲ."

"ನನಗಂತೂ ತುಂಬಾ ಬೇಜಾರಾಗಿದೆ ಸಾರ್"

"ಅದಕ್ಕಾಗಿಯೇ ಹೇಳೋದು ನೀನಿಲ್ಲಿರು ಎಂದು"

"ನನ್ನ ಲಗ್ನದ ವಿಚಾರವಾಗಿ ಅಮ್ಮ ಪತ್ರ ಬರೆದಿದ್ದಾರೆ ಆತ ಎಸ್. ಐ. ಅಂತೆ"

"ಸಾಹಿತ್ಯದ ಗಂಧವಿಲ್ಲದವನೊಡನೆ ಹೇಗೆ ಬದುಕುವಿ"?

"ತುಂಬಾ ಒಳ್ಳೆಯವರಂತೆ"

"ನಮ್ಮ ರಿಸರ್ಚ್ ಸ್ಕಾಲರ್‌ಗಿಂತಲೂ"?

"ಯಾರು"?

"ಈ ಸಲ ಸೇರಿಕೊಂಡಿದ್ದಾನೆ. ವಿನಯ ಅಂತ ಹೆಸರು. ತುಂಬಾ ಒಳ್ಳೆಯ ಹುಡುಗ. ನಾ ಹಾಕಿದ ಗೆರೆ ದಾಟುವವನಲ್ಲ. ನಿನ್ನ ಲಗ್ನದ ಕುರಿತು ಕೇಳಿದರೆ ಖಂಡಿತ ಒಪ್ಪುತ್ತಾನೆ."

ಬೇಡ, ಹೀಗೆ ಬರೆಯುತ್ತ ಹೋದರೆ ಅಂತನೇ ಹತ್ತುವುದಿಲ್ಲ.

ಆ ದಿನದ ಸನ್ನಿವೇಶದಿಂದ ಬರೆಯಲೆ?

"ಮಾನಸಿ" "ಏನ್ ಸಾರ್"

"ಅರುಣ್ ಜೊತೆ ನಿಂತಿದ್ದು ನೋಡಿ ಶಾಕ್ ಆಯ್ತು"

"ಏಕೆ ಸಾರ್"

"ಆತ ಕೆಟ್ಟವ. ನನ್ನ ಬಗ್ಗೆ ಸಲ್ಲದ ಮಾತು ಆಡ್ತಾ ತಿರುಗುತ್ತಾನೆ"

"ವಿಮಲಾ ಎಂಬ ಓಲ್ಡ್ ಸ್ಟುಡೆಂಟ್ ನಿಮಗೆ ನೆನಪಿದೆಯಾ"?

"ಯಾವ ವಿಮಲಾ"?

"ವಿಮಲಾ ದೇಶಪಾಂಡೆ"

"ಯಾರು!"

"ಈಗ ಮುಂಬಯಿನಲ್ಲಿ ಸೂಳೆಯಾಗಿದ್ದಾಳಲ್ಲಾ"

"ಮಾನಸಿ"

"ಸಾರ್"

"ಇನ್ನೊಮ್ಮೆ ಆಕೆಯ ಹೆಸರು ತೆಗೆಯಬೇಡ"

"ನಂಗೊತ್ತಿಲ್ಲಾ ಸಾರ್; ಅವಳು ಒಳ್ಳೆಯ ಹುಡುಗಿ -ಹೀಗೆಲ್ಲಾ ಅನ್ಯಾಯ ಆಯ್ತು ಅಂತ ಸುದ್ದಿ ಇದೆ"

ಇನ್ನು ಮುಂದಿನದೆಲ್ಲ ಬರೆಯುತ್ತ ಹೋಗುವುದು ಬೇಸರದ ವಿಷಯ. ಈ ಕಥೆ ಬರೆಯುವುದನ್ನು ನಿಲ್ಲಿಸಿ ನಾಟಕ ಬರೆದರೆ ಚೆನ್ನಾಗಿರುತ್ತದೆ. ನನಗೆ ಸುಖಾಂತ ನಾಟಕಗಳು ಹಿಡಿಸುತ್ತವೆ. ಆದರೆ ನನ್ನ ಜೀವನವನ್ನು ಅದರಲ್ಲಿ ಹೇಗೆ ಹಿಡಿದಿಡಲಿ! ನನ್ನ ಗೆಳತಿಯರನ್ನೆಲ್ಲ ದಿನ ನಿತ್ಯ ನೋಡುತ್ತೇನೆ. ಅವರ ಆಶಗಲಗಳೆಲ್ಲ ಗೊತ್ತಿವೆ. ರಜನಿ ಏನೆಲ್ಲ ಜಂಬ ಕೊಚ್ಚಿಕೊಳ್ಳುತ್ತಾಳೆ. ಆದರೆ ತನ್ನ ದೌರ್ಬಲ್ಯಗಳ ಬಗ್ಗೆ ಒಂದು ಮಾತನ್ನೂ ಆಡುವುದಿಲ್ಲ. ಅವಳು ಹೇಳದಿದ್ದರೇನು ಎಲ್ಲರಿಗೂ ಗೊತ್ತಿದೆ. ತಾರಾ ತನ್ನಷ್ಟಕ್ಕೇ ಇರುತ್ತಾಳೆ. ಅವಳ ಜೀವನದಲ್ಲಿ ಅಂಥ ಆಘಾತವಾಗಬಾರದಿತ್ತು. ಮೊದಮೊದಲಿಗೆ ಆಕೆ ಚೇತರಿಸಿಕೊಳ್ಳುವುದಿಲ್ಲವೆಂದೇ ತಿಳಿದಿದ್ದೆ. ಆದರೇನು, ಕಾಲ ಎಲ್ಲವನ್ನೂ ಮರೆಸುತ್ತದೆ. ಬಯಕೆಗಳೆಲ್ಲ ಪಳಿ–ಯುಳಿಕೊಗಿ ಉಳಿಯುತ್ತವೆ. ಉಷಾಳನ್ನು ನೋಡಿದಾಗ ನನಗೆ ಆನಂದವಾಗುತ್ತದೆ. ಅವಳು ತನ್ನ ಜೀವನದಲ್ಲಿ ಏನೆಲ್ಲ ನಡೆದರೂ ಏನೂ ಅರಿಯದವಳಂತೆ ನಗು-ನಗುತ್ತ ಇರುತ್ತಾಳೆ. ಸಂಧ್ಯಾ ಇಲ್ಲಿಯವರೆಗೆ ಜೀವನ

ಕಾವ್ಯಸೃಷ್ಟಿಯು ಗೊಡವೆಯೇಕೆ?

ಸಾಹಿತ್ಯ ಅಕಾಡೆಮಿ ಮತ್ತು ಶಾಶ್ವತಿಯ ಆಶ್ರಯದಲ್ಲಿ 'ಲೇಖಕಿಯಾಗಿ ಮಹಿಳೆ'ಯೆಂಬ ವಿಚಾರ ಸಂಕಿರಣ ಫೆಬ್ರವರಿ 23ರಂದು ಬೆಂಗಳೂರಿನಲ್ಲಿ ನಡೆಯಿತು. ಉದ್ಘಾಟಿಸಿದವರು ನಿಸಾರ್ ಅಹಮದ್. ಅಧ್ಯಕ್ಷತೆ: ಕನ್ನಡದ ಖ್ಯಾತಕವಿ ಅಡಿಗರು. ತಮ್ಮ ಅಧ್ಯಕ್ಷ ಭಾಷಣದಲ್ಲಿ ಅಡಿಗರು, "ಅದ್ಭುತ ವ್ಯಕ್ತಿಗಳನ್ನು ಸೃಷ್ಟಿಸಿರುವವರು ನೀವು. ಅದಕ್ಕೆ ಹೆಮ್ಮೆ ಪಡಿ. ಸೃಜನಶೀಲ ಸಾಹಿತ್ಯ ರಚನೆಯಲ್ಲಿ ನೀವಾರೂ ಗಂಡಸರನ್ನು ಮೀರಿಸಿಲ್ಲ. ನಿಮ್ಮ ಕೃತಿ ರಚನೆಯನ್ನು ಶ್ರೇಷ್ಠತೆಯತ್ತ ಹೋಲಿಸಿ (ಅಂದರೆ ಶ್ರೇಷ್ಠ ಸಾಹಿತ್ಯ ರಚಿಸುವ ಪುರುಷರೊಂದಿಗೆ ಹೋಲಿಸಿ!). ಗಂಡಸರಲ್ಲಿ ಅಹಂಕಾರ ಇರುತ್ತದೆ. ಅಹಂ ಸ್ತ್ರೀಯರಲ್ಲಿಯೂ ಇದ್ದರೆ ಸರ್ವನಾಶವಾದೀತು", ಎಂದು ಅಪ್ಪಣೆ ಕೊಡಿಸಿದರು.

ವಿಚಾರ ಸಂಕಿರಣದ ವರದಿ

ಮೊದಲನೆಯ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಡಿ. ವಿಜಯಾ, ತಮ್ಮ ಅಧ್ಯಕ್ಷ ಭಾಷಣದಲ್ಲಿ ಅಡಿಗರ ಬೇಜವಾಬ್ದಾರಿ ಮಾತುಗಳಿಗೆ ಉತ್ತರ ಕೊಟ್ಟು ಎಚ್ಚರಿಸಿದರು. "ಕವಿಗಳನ್ನೇ ಸೃಷ್ಟಿಸಿದ್ದೀರಿ. ಕವನ ಬರೆಯುವುದು ಇನ್ನೇನು? ಎಂದ ಅಡಿಗರ ಮತ್ತು ಅವರಂತಹವರ ಮಾತುಗಳಿಗೆ ಬಲಿ ಬೀಳಬೇಡಿ. ಇಂತಹ ಮಾತುಗಳಿಂದ ಹೆಣ್ಣಿನ ಬೌದ್ಧಿಕ ಅಗತ್ಯಗಳನ್ನು ನಯವಾಗಿ ಮರೆಮಾಚುತ್ತಾರಷ್ಟೇ ಅಲ್ಲದೆ, ಹೆಣ್ಣನ್ನು ಅವಳ ದೈಹಿಕ ಕ್ರಿಯೆಯಿಂದ ಅಟ್ಟಕ್ಕೇರಿಸಿ ಅವಳು ಬೆಳೆಯದಂತೆ ತಡೆಯುತ್ತಾರೆ," ಎಂದರು.

"ನೀವೇ ಪ್ರತ್ಯೇಕತೆಯನ್ನು ಹಾಕಿಕೊಂಡಿದ್ದೀರಿ" ಎಂದು ತಮ್ಮ ಉದ್ಘಾಟನಾ ಭಾಷಣದಲ್ಲಿ ಆಪಾದಿಸಿದ ಹಾಗೂ ಮಹಿಳೆಯರಿಗಾಗಿ ಪ್ರತ್ಯೇಕ ಸಭೆ, ಸಮಾರಂಭಗಳನ್ನು ವ್ಯವಸ್ಥೆಗೊಳಿಸುವ ಅಕಾಡೆಮಿಯ ಅಧ್ಯಕ್ಷರು ಒಂದು ಕಡೆಯಾದರೆ, ತಮಗೇ ಪ್ರತ್ಯೇಕ ವಿಮರ್ಶಾ ಮಾನದಂಡಗಳು, ಸಭೆ, ಸಮಾರಂಭಗಳು ಬೇಕು ಎನ್ನುವ ಬಹಳಷ್ಟು ಲೇಖಕಿಯರು ಇನ್ನೊಂದು ಕಡೆ! ಇವರಿಗೆಲ್ಲಾ ಉತ್ತರವೆಂಬಂತೆ ಡಾ|| ಡಿ. ವಿಜಯಾರವರು ಪ್ರತ್ಯೇಕತೆಯ ಅಪಾಯ ಕುರಿತು ಮಾತನಾಡಿದುದು ಆರೋಗ್ಯಪೂರ್ಣ ವಿಮರ್ಶೆಯಾಗಿತ್ತು. "ಪ್ರತ್ಯೇಕ ವಿಮರ್ಶಾಮಾನದಂಡಗಳು ಬೇಕೆನ್ನುವುದು ಮಹಿಳೆಯರು ತಾವೇ ಹಾಕಿಕೊಳ್ಳುವ ಉರುಳು", ಎಂದರು. "ಪ್ರತ್ಯೇಕ ಸಾಹಿತ್ಯ ಸಮ್ಮೇಳನಗಳ ಪರಿಣಾಮ ಎಂತಹ ಆತಂಕಕಾರಿಯಾದುದು ಎಂಬುದು ಇನ್ನೊಂದು ದಶಕದ ನಂತರ ತಿಳಿಯುತ್ತದೆ", ಎಂದು ಎಚ್ಚರಿಸಿದರು.

ಸಂಕಿರಣದಲ್ಲಿ ಭಾಗವಹಿಸಿದ್ದ ಬಹಳಷ್ಟು ಲೇಖಕಿಯರಿಗೆ ಸಾಕಷ್ಟು ಗೊಂದಲಗಳಿದ್ದವು. ಅವರ ವಿಚಾರಧಾರೆಯಲ್ಲೇ ಸಾಕಷ್ಟು ವಿರೋಧಾಭಾಸ ಕಂಡುಬರುತ್ತಿತ್ತು. 'ಅನುಭವದ ಕೊರತೆ ಮಹಿಳೆಗಿದೆ. ತಮ್ಮ ಅನುಭವವನ್ನು ಹೆಚ್ಚಿಸಿಕೊಳ್ಳಬೇಕು' ಎಂಬ ಸತ್ಯಾಂಶವನ್ನು ವಿಜಯಾ, ಅನುಪಮಾ ನಿರಂಜನ ಮತ್ತು ಒಬ್ಬಿಬ್ಬರು ಲೇಖಕಿಯರು ಗುರುತಿಸಿದರಾದರೂ, ಬಹಳಷ್ಟು ಲೇಖಕಿಯರಿಗೆ ಮಹಿಳಾ ಸಾಹಿತ್ಯದ ಬಗೆಗಿನ ಕಟು ವಿಮರ್ಶೆಯನ್ನು ಒಪ್ಪಿಕೊಳ್ಳಲು ಮನಸ್ಸಿದ್ದಂತಿರಲಿಲ್ಲ.

ಸಮಾರಂಭದ ಕೊನೆಯಲ್ಲಿದ್ದ ಕವಿಗೋಷ್ಠಿಯಲ್ಲೊಂದು ವೈಶಿಷ್ಟ್ಯತೆ ಎದ್ದು ಕಾಣುತ್ತಿತ್ತು. ಕವಯಿತ್ರಿಯರ ಕವನದ ವಸ್ತುಗಳು ಮಾಮೂಲಾಗಿ ಸ್ತ್ರೀಯರನ್ನೇ ಕುರಿತದ್ದಾಗಿರುತ್ತದೆ, ಎಂಬ ಆರೋಪ ಇದೆ. (ಅದು ಸತ್ಯವೂ ಕೂಡ!) ಆದರೆ ಈ ಕವಿಗೋಷ್ಠಿಯಲ್ಲಿ ಓದಿದ ಕವನಗಳು ಹೆಣ್ಣು, ರಾಜಕೀಯ, ಬದುಕು, ಹೋರಾಟ, ಸರ್ವೋದಯ ಎಂದು ವಿಷಯ ವೈವಿಧ್ಯದಿಂದ ಕೂಡಿತ್ತು.

ಉಷಾ ನವರತ್ನರಾಂರವರ ಸಮಾರೋಪ ಭಾಷಣ ಅವರ ಕಾದಂಬರಿಗಳಷ್ಟೇ ಸುಂದರವಾಗಿತ್ತು! ಆದರೆ ಅವರ ಕಾದಂಬರಿಗಳಿಗೆ ಇರುವಷ್ಟು ಓದುಗರ ಸಂಖ್ಯೆಯಲ್ಲಿ ಪ್ರೇಕ್ಷಕರು ಇಲ್ಲದಿದ್ದುದೊಂದೇ ವ್ಯತ್ಯಾಸ!!

ನಿರೀಕ್ಷಿಸಿದ್ದಂತೆ ಶಾಶ್ವತಿಯ ನಿರ್ದೇಶಕಿಯವರಾದ ಚಿ. ನ. ಮಂಗಳಾರವರು ಮಾಡಿದ್ದ ಅಚ್ಚುಕಟ್ಟಾದ ವ್ಯವಸ್ಥೆ ಮೆಚ್ಚುವಂತಹದ್ದು. ○

ವನ್ನು ಕಂಡಿದ್ದೇ ಬೇರೆ, ಇಂದು ಅನುಭವಿಸುತ್ತಿರುವುದೇ ಬೇರೆ.

ಸುಮ್ಮಿ, ನಿಮ್ಮಿ, ಶಾರಿ, ರಜಿ, ಕನ್ಮಿ ಇವೇ ಮುಂತಾದವರ ಗೆಳೆತನವಂತೂ ನನಗೆ ತುಂಬ ವಿಚಿತ್ರ ವೆನಿಸುತ್ತದೆ. ಇವರ ಸಂಬಂಧಗಳು ಎಂಥ ಸಮಾಜ ವಿಜ್ಞಾನಿಗೂ ಅರ್ಥವಾಗಲಿಕ್ಕಿಲ್ಲ. ಹೋಟೆಲ್‌ಗೆ ಹೋಗುವಾಗ, ಹೀರೋನನ್ನು ಲಾಯ್‌ಕ್ ಮಾಡುವಾಗ ನಿರ್ದೇಶಕನ ಗುಣ ದೋಷಗಳನ್ನು ಎಣಿಸುವಾಗ, ನೋಟ್ಸ್ ತೆಗೆಯುವಾಗ ಪಕ್ಷಾಂತರಗಳು ನಡೆದೇ ಇರುತ್ತವೆ. ಮೂರು ಜನರ ಮಧ್ಯೆ ನಾಲ್ಕು ಪಾರ್ಟಿಗಳಾಗುತ್ತಲೇ ಇರುತ್ತವೆ. ಪಾರ್ಟಿಗಳು ಜನಿಸುತ್ತಲೇ ಇರುತ್ತವೆ; ಜನಿಸಿದ್ದು ಸಾಯುತ್ತಲೇ ಇರುತ್ತವೆ. ಇವರೆಲ್ಲ ಈ ಚಕ್ರದಲ್ಲಿ ತಿರುಗುತ್ತಲೇ ಇರುತ್ತಾರೆ. ಇವರಲ್ಲಿ ಕೆಲವರು ನನ್ನ ಬಗ್ಗೆ ಹುಡುಗರ ಮುಂದೆ ಹಾಗೆ ಹೀಗೆ ಮಾತನಾಡುತ್ತಾರಂತೆ. ಮಾತನಾಡಲಿ ನನಗೇನು.

ಅದೇನೇ ಇದ್ದರೂ ನಾನು ಸುಂದರಿಯಾಗಿರುವುದರಿಂದಲೇ ನೋಡುತ್ತಿರಬಹುದು. ಇದನ್ನೆಲ್ಲ ಏನು ಬರೆಯುವುದು. ಹೇಗಾದರೂ ನೋಡಲಿ ನನಗೇನಾಗಬೇಕಿದೆ. ಎಲ್ಲರಿಗೂ ಗೊತ್ತಿದ್ದನ್ನೆಲ್ಲ ಬರೆಯುತ್ತ ಹೋಗುವುದರಲ್ಲೇನಿದೆ ?

ಗೊತ್ತಿರಲಾರದ್ದೇನಿದೆ !

ನನಗೆ ಗೊತ್ತಿರಲಾರದ್ದು ಉಳಿದವರಿಗಾದರೂ

ಹೇಗೆ ಗೊತ್ತಿರುತ್ತದೆ ?

ನಾನು ಅನುಭವಿಸಿದ್ದನ್ನು ಮಾತ್ರ ಬರೆಯಬಲ್ಲೆ

ಹಾಗಾದರೆ ನಾ ಸಾಹಿತಿಯಾಗಲಾರೆ

ರವಿ ಕಾಣುವುದನ್ನು ಕವಿ ಕಾಣುವನಂತೆ.

ರವಿ ಕಾಣದುದನ್ನು ಕಂಡವಳೆಂದರೆ ನಮ್ಮನೆ ಎದುರಿಗಿರುವ ಕಲ್ಪನಾ ಎಂದೆನಿಸುತ್ತದೆ. ಅಮ್ಮ ಅವಳನ್ನು 'ಮುಗ್ಧ ಸೂಳೆ' ಎಂದು ವ್ಯಂಗ್ಯವಾಗಿ ಹೇಳುತ್ತಾಳೆ. ಆದರೆ ಅಮ್ಮನನ್ನು ಕಂಡರೆ ಅವಳಿಗೆ ಸಂತೋಷ. ಅಮ್ಮನ ಹಣೆಯ ಮೇಲೆ ಶೋಭಿಸುವ ಕುಂಕುಮ ಅವಳ ಮನಸ್ಸನ್ನು ಸೆಳೆಯುತ್ತದೆ. ತನ್ನ ದುರ್ದೈವಕ್ಕಾಗಿ ಅಳುತ್ತಾಳೆ. ಬೇರೆಯವರ ಸುದೈವದಲ್ಲಿ ಏನು ಕಂಡಿರುವಳೊ. ಅವಳು ಸಿಕ್ಕಾಗ ಅಮ್ಮನ ಬಗ್ಗೆ ಹೇಳುತ್ತ

"ಮಾನಸಿ ನಿಮ್ಮಮ್ಮನ ಕಂಡಾಗ ನನಗೆ ತುಂಬ ಖುಷಿ"

"ನನಗೆ ನಿನ್ನನ್ನು ಕಂಡಾಗ"

"ನನ್ನನ್ನು ಕಂಡರೆ ಅನುಕಂಪ ಪಡಬೇಕು"

"ಅಮ್ಮನನ್ನು ಕಂಡು ನೀನೇಕೆ ಅನುಕಂಪ ಪಡಬಾರದು" ?

"ನಿಮ್ಮ ತಂದೆ ಅವಳನ್ನು ಒಂದು ದಿನವೂ ಸರಿಯಾಗಿ ನಡೆಸಿಕೊಳ್ಳಲಿಲ್ಲ"

"ಹೇಗಾದರೂ ಆಗಲಿ ನಡೆಸಿಕೊಳ್ಳುತ್ತಾರಲ್ಲ"

"ನಿಮ್ಮಮ್ಮ ಪತಿಯೇ ದೇವರು....ಹಾಡುವಾಗ ನಾನು ಗದ್ಗದ ಕಂಠಿತಳಾಗುತ್ತೇನೆ"

"ನಾನು ನಗುತ್ತೇನೆ"

"ನಾನು ಬೆಲೆವೆಣ್ಣು"

"ನಮ್ಮಮ್ಮ ಅಮೌಲ್ಯ ಹೆಣ್ಣು"

"ನಾನು ನಾಚಿಕೆ ಇಲ್ಲದವಳು"

"ಅಮ್ಮ ನಾಚಿಕೆ ತೋರಿಸುವವಳು"

"ನಿನ್ನ ತಾಯಿ ಸುದೈವಿ"

"ನನ್ನ ತಂದೆ ದುರ್ದೈವಿ"

ಹೀಗೆಂದಾಗ ಕಲ್ಪನಾ ಸುಮ್ಮನಿರುತ್ತಾಳೆ. ಅವಳೊಬ್ಬಳು ವಿಚಿತ್ರ ಸೂಳೆ. ಈ ಸಮಾಜ ಅವಳನ್ನು ಹಾಳು ಮಾಡಿದೆ. ಆದರೂ ಅವಳು ಈ ಸಮಾಜದ ರೀತಿ– ನೀತಿಗಳನ್ನು ಪ್ರೀತಿಸುತ್ತಾಳೆ. ಅವಳಿನಿಯನನ್ನು ಹೊಡೆದೋಡಿಸಿದುದು ಈ ಸಮಾಜ. ರಾತ್ರಿಇವಳ ಸುತ್ತ ಸುತ್ತುವುದೂ ಇದೇ ಸಮಾಜ. ಅಂದು ಅವಳು ಪ್ರೇಯಸಿ; ಸಮಾಜ ಬಾಹಿರಳು. ಇಂದು ಸೂಳೆ. ಸಮಾಜದ ಒಂದು ಅಂಗ. ವಿವಿಧೋದ್ದೇಶಗಳ ವಸ್ತು. ಉಪಯೋಗಿಸುತ್ತಿದ್ದರು, ಉಪಯೋಗಿಸುತ್ತಾರೆ, ಉಪಯೋಗಿಸುವರು. ಈ ಸಮಾಜ ಇರುವವರೆಗೆ ಕಲ್ಪನಾ ಇರುತ್ತಾಳೆ ಒಂದು ಅಂಗವಾಗಿ, ಸಮಾಜದ ವಿವಿಧ ಅಂಗಗಳಿಗೆ ಸಹಕಾರಿಯಾಗಿ........

ಹೀಗೇ ಯೋಚಿಸುತ್ತ ಹೋದಂತೆಲ್ಲ ಭೂಗೋಳವನ್ನೇ ಸುತ್ತಿದಂತಾಗುತ್ತದೆ. ಅರುಣ್ ಅರುಣ್ ಎಂದು ಕೂಗುವೆ. ಆತ ದೂರ ಬಹುದೂರ ಹೋಗಿದ್ದಾನೆ. ಪ್ರಚಂಡ ಸೂರ್ಯನಾಗಿದ್ದಾನೆ.

○

1984 ರ ಮಧ್ಯಭಾಗದಲ್ಲಿ ಆವರ್ಸ್ಟೈರ್ ಡಾವರ್‌ನಲ್ಲಿ ಒಂದು ಸಮ್ಮೇಳನ ಜರುಗಿತು. ವಿಷಯ : ಮಹಿಳೆಯರ ಸಂತಾನಾಭಿವೃದ್ಧಿಯ ಹಕ್ಕು. ದಕ್ಷಿಣ ಆಫ್ರಿಕಾ ರಾಷ್ಟ್ರೀಯ ವಿಮೋಚನಾರಂಗದ ಪ್ರತಿನಿಧಿಯಾಗಿ ಫೆಲೀಷಿಯಾ ಎವರ್‌ಜಾಮೋ ಎಂಬ ದಾದಿಯು ದಕ್ಷಿಣ ಆಫ್ರಿಕಾದಲ್ಲಿ ಕುಟುಂಬಯೋಜನೆಯನ್ನು ಕುರಿತು ಮಾತನಾಡಿದಳು. ಸಂತಾನ ನಿಯಂತ್ರಣವನ್ನು ಕರಿಯ ಹೆಂಗಸರ ಮೇಲೆ ಹೇರಿ ಪ್ರಿಟೋರಿಯಾದ ಬಿಳಿಯರ ಸರ್ಕಾರವು ಒಂದು ಜನಾಂಗವನ್ನೇ ನಾಶಪಡಿಸಲು ಹೊರಟಿದೆ. ಇದಕ್ಕೆ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ವ್ಯಾಪಾರಸ್ಥರಿಂದ ಬೆಂಬಲ ದೊರೆತಿದೆ, ಎಂದು ವಾದಿಸಿದಳು.

ದಕ್ಷಿಣ ಆಫ್ರಿಕಾದ ವೈದ್ಯಕೀಯ ಸಂಘದ ಮಾಜಿ ಅಧ್ಯಕ್ಷ ಡಾ॥ ಕ್ರಿಸ್ ಟಾಸ್ಕಿ ಒಮ್ಮೆ ಹೀಗೆ ನುಡಿದಿದ್ದ: "ಮಾನವ ಜನಾಂಗದಲ್ಲಿ ಮುಖ್ಯವಾಗಿ ಎರಡು ಗುಂಪುಗಳಿವೆ: ಉಳ್ಳವರು ಮತ್ತು ಇಲ್ಲದವರು. ಈ ಪೈಕಿ ಮೊದಲ ಗುಂಪಿನವರು ಬುದ್ಧಿವಂತಿಕೆ, ಉತ್ಪಾದನಾ ಸಾಮರ್ಥ್ಯ, ನಾಗರೀಕತೆ ಮತ್ತು ಜವಾಬ್ದಾರಿತನವನ್ನು ಉಳ್ಳವರು. ಎರಡನೆಯ ಗುಂಪಿನವರು ಬೇಜವಾಬ್ದಾರಿಗಳು, ಹಾಗೂ ಇತಿಮಿತಿಯಿಲ್ಲದೆ ಸಂತಾನ ಹೆಚ್ಚಿಸಿಕೊಳ್ಳುತ್ತಾರೆ. ಆದ್ದರಿಂದ ಸಂಪತ್ತನ್ನು ಉತ್ಪಾದಿಸುವವರ ಮತ್ತು ಉತ್ಪಾದಿಸದವರ ನಡುವೆ ಸಮತೋಲನವನ್ನು ಸಾಧಿಸಬೇಕಾದ್ದು ಅತ್ಯವಶ್ಯಕ. ವಿಶ್ವಸಂಸ್ಥೆಯು ನಮೂದಿಸುವ ಸಾಮಾಜಿಕ ವ್ಯವಸ್ಥೆಗಳಲ್ಲೆಲ್ಲಾ ಎಲ್ಲರೂ ಸಮಾನರೆಂದು ಬಗೆಯಲಾಗುತ್ತದೆ; ಆದರೆ ಇದು ಸರ್ವಥಾ ಅಸತ್ಯ."

ಒತ್ತಾಯದ ನಿಯಂತ್ರಣ

ಇನ್ನೊಬ್ಬ ತಜ್ಞ ಡಾ॥ ಎಂ.ಜೆ. ಫಾನ್‌ರೆನ್ಸ್‌ಬರ್ಗ್‌ನ ಮಾತುಗಳಿವು: "ಒಂದು ಶರೀರಕ್ಕೆ ಕ್ಯಾನ್ಸರ್ ರೋಗ ತಾಕಿದ್ದರೆ ಅದಕ್ಕೆ ಶಮನಕಾರಿ ಔಷಧಿಯನ್ನು ನೀಡಬೇಕು; ಇಲ್ಲದಿದ್ದಲ್ಲಿ ಅದು ಇಡೀ ಶರೀರವನ್ನು ವ್ಯಾಪಿಸಿ ಶರೀರವನ್ನೇ ನಾಶಗೊಳಿಸುತ್ತದೆ. ಜನಸಂಖ್ಯೆಯ ಬೆಳವಣಿಗೆಯನ್ನು ಕ್ಯಾನ್ಸರಿಗೆ ಹೋಲಿಸಬಹುದು."

ವಿಜ್ಞಾನ ಮತ್ತು ವರ್ಣಭೇದ ನೀತಿ

ಇಂತಹ ಧೋರಣೆಯ ಹಿನ್ನೆಲೆಯಲ್ಲಿ ಜನಾಂಗೀಯ ಸರ್ಕಾರವು ಕುಟುಂಬ ಯೋಜನಾ ಕಾರ್ಯಕ್ರಮವನ್ನು 1974 ರಲ್ಲಿ ರೂಪಿಸಿತು. ಅದರ ಉದ್ದೇಶಗಳು ಎರಡು : ಕುಟುಂಬ ಯೋಜನೆಯ ಜ್ಞಾನಕ್ಕೆ ಸಾರ್ವತ್ರಿಕವಾಗಿ ಕಂಡು ಬಂದಿರುವ ಅಪೇಕ್ಷೆಯನ್ನು ಪೂರೈಸುವುದು ಹಾಗೂ ಅತ್ಯಂತ ಕನಿಷ್ಠ ಮಟ್ಟದಲ್ಲಿರುವ ಜನರಿಗೆ ಕುಟುಂಬ ಯೋಜನಾ ಸಾಧನೆಗಳು ಮತ್ತು ಸೇವೆಯನ್ನು ಒದಗಿಸುವುದು; ಅಧಿಕ ಸಂತಾನ ಪ್ರಮಾಣದಿಂದಾಗಿ ಯಾವ ಜನವಿಭಾಗಗಳಲ್ಲಿ ಸಾಮಾಜಿಕ – ಆರ್ಥಿಕ ದುಃಸ್ಥಿತಿಯು ಕಂಡು ಬರುತ್ತದೋ ಅದನ್ನು ಸುಧಾರಿಸಲು ಸಹಕಾರ ನೀಡುವುದು. ಕಡಿಮೆ ಕೂಲಿ, ನಿರುದ್ಯೋಗ, ವಸತಿ ಸೌಕರ್ಯ ಇಲ್ಲದಿರುವುದು ಮತ್ತು ವೈದ್ಯಕೀಯ ಸೌಲಭ್ಯದ ಅಭಾವದಿಂದುಂಟಾಗುವ ಸಾಮಾಜಿಕ, ದುಃಸ್ಥಿತಿಗಳನ್ನು ಸುಧಾರಿಸುವುದರ ಬಗ್ಗೆ ಆರೋಗ್ಯ ಇಲಾಖೆಯು ಚಕಾರವೆತ್ತಲಿಲ್ಲ. ಸರ್ಕಾರದ ಗಮನಕ್ಕೆ ಬಂದದ್ದು ಅಧಿಕ ಸಂತಾನದ ಪ್ರಮಾಣ ಮಾತ್ರ.

> ಸಂತಾನ ನಿಯಂತ್ರಣ ಶಕ್ತಿ ವಿಜ್ಞಾನದ ಸಾಧನೆಗಳಲ್ಲಿ ಮಹತ್ವದ ಒಂದು ಭಾಗ. ಸ್ವನಿಯಂತ್ರಣವಾದರೆ ವರವಾಗಬಲ್ಲ ಈ ಶಕ್ತಿ ರಾಜ್ಯಯಂತ್ರದ ಶೋಷಕ ಅಸ್ತ್ರವಾದಾಗ ಅದು ಅತಿ ಅಮಾನವೀಯವಾಗಬಲ್ಲುದು.

ಈ ಇಲಾಖೆಯು ತನ್ನ ನೀತಿಯನ್ನು ವಿಪುಲವಾಗಿ ಕಾರ್ಯರೂಪಕ್ಕಿಳಿಸಿತು. ಹಳ್ಳಿಗಳಲ್ಲಿ ಬಿಳಿಯ ಜಮೀನ್ದಾರರ ಹೆಂಡತಿಯರು ಸಹ ಪ್ರಚಾರ ಕಣಕ್ಕೆ ಧುಮುಕಿದ್ದರು ! ಕಾರ್ಖಾನೆಗಳಲ್ಲಿ ಕೆಲಸಕ್ಕಿದ್ದ ಮಹಿಳೆಯರು ಈ ಪ್ರಚಾರ ಕಾರ್ಯದಲ್ಲಿ ತೊಡಗದಿದ್ದರೆ ಅವರ ಕೆಲಸಕ್ಕೆ ಕುತ್ತು ಬರುವ ಸಂಭವವಿತ್ತು.



ಕಸಗುಡಿಸುವವರ ಸಮಸ್ಯೆ ಝೂಡಿಸುವುದೆಂತು ?

● ಡಾ|| ಮಾರ್ಗರೆಟ್ ಬಿಸ್ವಾಸ್
ಅನು : ನಾಗರಾಜ್

ಪೌರಪದ್ಧತಿಯ ಸುಧಾರಣೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುವ, ಆಧುನಿಕಗೊಳ್ಳುತ್ತಿರುವ ಆರ್ಥಿಕ ವ್ಯವಸ್ಥೆಯಲ್ಲಿ ತತ್ ಕ್ಷಣದ ಸ್ಥಾನಪಲ್ಲಟಕ್ಕೊಳಗಾಗದ ದೆಹಲಿ ಝೂಡಮಾಲಿ ಮಹಿಳೆಯರ ಅಭ್ಯಾಸ ಕುರಿತ ಈ ಪುಸ್ತಕದಲ್ಲಿ ಮಹಿಳೆಯರ ಸ್ಥಾನಮಾನ ಕುರಿತ ಶೋಧನೆ ಇದೆ.

ದಾರಿದ್ರ್ಯ ಮತ್ತು ಮಹಿಳೆಯ ದುಡಿಮೆ (ದೆಹಲಿಯ ಕಸಗುಡಿಸುವ ಮಹಿಳೆಯರ ಬಗ್ಗೆ ಒಂದು ಅಧ್ಯಯನ): ಮಾಳವಿಕ ಕಾರ್ಲೇಕರ್, ವಿಕಾಸ್ ಪಬ್ಲಿಶಿಂಗ್ ಹೌಸ್, 5, ಅನ್ಸಾರಿ ರಸ್ತೆ, ನವದೆಹಲಿ; ಪುಟ : 158, ಬೆಲೆ ರೂ. 75.

ಒಟ್ಟು ನಾಲ್ಕು ಅಧ್ಯಾಯಗಳ ಈ ಪುಸ್ತಕದ ಪ್ರಥಮ ಅಧ್ಯಾಯದಲ್ಲಿ ಗ್ರಾಮ ಹಾಗೂ ನಗರಗಳಲ್ಲಿ ಕಡಿಮೆ ಸೌಲಭ್ಯ ಅಥವಾ ಏನೂ ಸೌಲಭ್ಯ ಪಡೆಯದೆ ಜೀವನ ಸಾಗಿಸುತ್ತಿರುವ ಝೂಡಮಾಲಿ ಮಹಿಳೆಯ ಕುರಿತ ಅಧ್ಯಯನ, ದುಡಿಯುವ ಮಹಿಳೆಯ ಶೋಷಣೆ ಕುರಿತು ವಿವರಿಸಲಾಗಿದೆ.

ಜನಭರಿತ ಕೊಳಚೆ ಪ್ರದೇಶದಲ್ಲಿ ಮಹಿಳೆಯರ ಸ್ಥಿತಿ, ವಿವಿಧ ಜೀವನ ಶೈಲಿ ಕುರಿತು ಎರಡನೇ ಅಧ್ಯಾಯದಲ್ಲಿ ಚಿತ್ರಿಸಲಾಗಿದೆ. ಮೂರನೇ ಅಧ್ಯಾಯದಲ್ಲಿ ವಾಲ್ಮೀಕಿ ಝೂಡಮಾಲಿ ಮಹಿಳೆಯರ ಜೀವನ ಕ್ರಮ, ದೆಹಲಿ ಝೂಡಮಾಲಿಗಳೊಳಗಿನ ಆಂತರಿಕ ಸ್ತರಗಳನ್ನೂ ಖಾಸಗಿ ರಂಗದಲ್ಲಿ ದುಡಿಯುವ ಮಹಿಳೆಯರ ಅತಿಯಾದ ಬಡತನವನ್ನೂ ವಿವರಿಸಿದ್ದಾರೆ.

ಕೊನೆಯ ಅಧ್ಯಾಯದಲ್ಲಿ ಮಹಿಳೆಯ ಗ್ರಹಿಕೆ,ಆಕೆಯ ಆಶಯಗಳನ್ನು ಕುರಿತು ಹೇಳಿದ್ದಾರೆ. ಝೂಡಮಾಲಿ ಮಹಿಳೆಯರ ಕೌಟುಂಬಿಕ, ಸಾಮಾಜಿಕ ಶೋಷಣೆ, ಕೌಟುಂಬಿಕ ಚಟುವಟಿಕೆಗಳಲ್ಲಿ ಪುರುಷರ ಭಾಗವಹಿಸುವಿಕೆ (ಭಾಗವಹಿಸದಿರುವಿಕೆ) ಕುರಿತು ಸಹ ವಿವರಿಸಿದ್ದಾರೆ. ಮಹಿಳೆಯರ ಕುರಿತ ಸಮಕಾಲೀನ ಅಧ್ಯಯನಕ್ಕೆ ಯೋಗ್ಯವಾದ ಅಂಕಿ ಅಂಶಗಳ ಸಾಮಗ್ರಿಯನ್ನು ಪುಸ್ತಕದಲ್ಲಿ ಒದಗಿಸಲಾಗಿದೆ.

ಮನೆಗೆಲಸಗಳಲ್ಲಿ ಅಥವಾ ಝೂಡಮಾಲಿಗಳಾಗಿ ಕೆಲಸ ನಿರ್ವಹಿಸುವ ನಗರದ ಬಹುಪಾಲು ದುಡಿಯುವ ಮಹಿಳೆಯರು ಅಸಂಘಟಿತ ಕಾರ್ಮಿಕರು. ಆದ್ದರಿಂದ ಬರೀ ಮಹಿಳೆಯರ ಆರ್ಥಿಕ ಕಾಣಿಕೆಯನ್ನಷ್ಟೇ ಪರಿಗಣಿಸದೆ ವೇತನರಹಿತ ಹೆಂಡತಿಯಾಗಿ, ತಾಯಿಯಾಗಿ ಮಹಿಳೆ ಹೇಗೆ ಪಾತ್ರ ನಿರ್ವಹಿಸುತ್ತಾಳೆಂಬ ಅಂಶವೂ ಪ್ರಮುಖವಾದುದು. ಮಹಿಳೆಯ ಸ್ಥಾನಮಾನ ಅರಿಯಲೂ ಈ ಅಂಶ ನೆರವಾಗುವುದು. ಗಂಡ ಉದ್ಯೋಗದಲ್ಲಿರಲಿ, ಇಲ್ಲದಿರಲಿ ಮಕ್ಕಳ ಪಾಲನೆ, ಪೋಷಣೆ, ಅಡಿಗೆ ಮಾಡುವುದು ಅವಳಿಗೆ ಅನಿವಾರ್ಯ. ವಾಲ್ಮೀಕಿ ಝೂಡಮಾಲಿ ಕುಟುಂಬದಲ್ಲಿ ಬಹುತೇಕ ನಿರ್ಣಯಗಳನ್ನು ಪುರುಷ ತೆಗೆದುಕೊಳ್ಳುತ್ತಾನೆ. ಮಹಿಳೆಗೆ ಆ ಸ್ವಾತಂತ್ರ್ಯ ಇಲ್ಲ.

ಪುರುಷ ಶಿಕ್ಷಣ ಪಡೆಯುತ್ತಾನೆ, ಹೆಸರು ಬದಲಿಸಿಕೊಳ್ಳುತ್ತಾನೆ, ಹೆಚ್ಚು ಆಧುನೀಕರಣಗೊಳ್ಳುತ್ತಾನೆ. ಮೇಲಾಗಿ ಅವನ ಕೆಲಸ ಹೆಚ್ಚು ಪ್ರತಿಷ್ಠೆಯದು. ಜಾತಿ ಉದ್ಯೋಗಗಳನ್ನೂ ತೊರೆಯುವುದು ಅವಳಿಗೆ ಕಷ್ಟ. ತೊರೆವ ಮನಸ್ಸಿದ್ದರೂ ಪರಿಸರ ನೆರವಾಗುತ್ತಿಲ್ಲ.

ಪುಸ್ತಕದ ಉಪಸಂಹಾರದಲ್ಲಿ ಲೇಖಕಿಯು ತಾವು ಸಂಗ್ರಹಿಸಿರುವ ಮತ್ತು ಇತರರು ಸಂಗ್ರಹಿಸಿರುವ ಮಾಹಿತಿಗಳಿಂದ ಮಹಿಳೆಯ ಸ್ಥಾನಮಾನ ಕುರಿತು ಇರುವ ಕೆಲವೊಂದು ತಪ್ಪು ಗ್ರಹಿಕೆಗಳನ್ನು ಎರಡು ಮುಖ್ಯ ಅಂಶಗಳ ಮೂಲಕ ತೊಡೆಯಲು ಯತ್ನಿಸಿದ್ದಾರೆ:

1) ಮಹಿಳೆಯನ್ನು ಒಂದು ವರ್ಗವೆಂದು ಮಾತನಾಡುವುದು ತಪ್ಪು ಅಭಿಪ್ರಾಯ ; ವಿವಿಧ ರೀತಿಯ ಮಹಿಳೆ ವಿಭಿನ್ನ ಸಮಸ್ಯೆಗಳನ್ನು ಎದುರಿಸುತ್ತಾಳೆ. ಇದು ವಿಧವಿಧವಾದ ಪರಿಹಾರವನ್ನು ಅಪೇಕ್ಷಿಸುತ್ತದೆ. ಉದಾಹರಣೆಗೆ, ಉದ್ಯೋಗಕ್ಕೆ ಹೋಗುವ ಮಹಿಳೆಯರ ಸಂಖ್ಯೆ ಹೆಚ್ಚಾಗುತ್ತಿದೆ. ಅವರು ಮನೆಗೆಲಸಕ್ಕೆ ಬೇರೆ ಮಹಿಳೆಯರ ಮೇಲೆ ಅವಲಂಬಿತರಾಗುವ ಪರಿಸ್ಥಿತಿ. ಮನೆಗೆಲಸವಲ್ಲದೆ, ಮಗು ನೋಡಿಕೊಳ್ಳುವ ಕೆಲಸ ಕೂಡ. ಇಂಥ 'ಖಾಸಗಿ ಕೆಲಸ'ದ ಮಹಿಳೆಯರು ತಮ್ಮ 'ಮಹಿಳಾ ಮಾಲೀಕ'ರ ಬಗ್ಗೆ ದೂರು ಹೇಳಿಕೊಂಡರು. ವ್ಯವಸ್ಥಿತ ಸಂಘಟನೆಯಲ್ಲಿರುವವರಿಗೆ ಇವರ ಸಮಸ್ಯೆ ಅರ್ಥವಾದೀತು. ಆದರೆ ಖಾಸಗಿ ಕೆಲಸದ ಮಹಿಳೆಯರ ಬಗ್ಗೆ ಕಾರ್ಪೊರೇಷನ್ ಗುಡಿಸುವ ಮಹಿಳೆಯರ ಧೋರಣೆ ಕೂಡ ಗಮನಾರ್ಹ. ಆದುದರಿಂದ ಸಮಾಜವು ಮಹಿಳಾ ಸಮುದಾಯವನ್ನೇ ಶೋಷಿಸಿದರೆ, ವ್ಯವಸ್ಥೆಯೊಂದರ ಹಿಡಿತದಲ್ಲಿ ಕೆಲವು ಗುಂಪಿನ ಮಹಿಳೆಯರು ಇನ್ನೊಂದು ಗುಂಪಿನ ಮಹಿಳೆಯರನ್ನು ಶೋಷಿಸುತ್ತಾರೆ.

2) ಉದ್ಯೋಗದಿಂದಲೇ ಆರ್ಥಿಕ ಸ್ವಾತಂತ್ರ್ಯ ಮಹಿಳೆಯರಿಗೆ ದಕ್ಕೀತು ಎಂಬ ನಿರೀಕ್ಷಣೆ ತಪ್ಪು. ಕೈಬೆರಳೆಣಿಕೆಯಷ್ಟು ಮಹಿಳೆಯರ ವಿಷಯದಲ್ಲಿ ಮಾತ್ರ ಈ ವಾದ ಸರಿ ಇರಬಹುದು. ಆದರೆ ಬಹುತೇಕ ದುಡಿಯುವ ಮಹಿಳೆಯರಿಗೆ ದುಡಿಮೆ ಅವರ ದೈಹಿಕ, ಮಾನಸಿಕ ಒತ್ತಡ ಹೆಚ್ಚಿಸಿದ್ದು ಮಾತ್ರ. ಅವರ ಸ್ಥಾನಮಾನ ಸುಧಾರಣೆಗೆ ಅದು ನೆರವಾಗಿಲ್ಲ. ವಾಲ್ಮೀಕಿ ಝೂಡ ಮಾಲಿಗಳಲ್ಲಿ ಪುರುಷರು ಪ್ರಶ್ನಾತೀತ ಯಜಮಾನರು. ಮಹಿಳೆಯರು ಅದನ್ನು ಒಪ್ಪಿಕೊಳ್ಳಬೇಕಾಗಿದೆ. ಮಹಿಳೆಯರ ಈ ಪರಿಸ್ಥಿತಿಗೆ ಅವರು ಅಶಿಕ್ಷಿತರಾಗಿರುವುದು ಕಾರಣ ಎಂಬ ಪ್ರಾಥಮಿಕ ಅಂಶವನ್ನು ಗಮನಿಸಲೇಬೇಕು.

ಸಂಘಟನೆ

ಅಂತಿಮವಾಗಿ ಬರುವ ಪ್ರಶ್ನೆ ವಿಶಾಲವಾದ ಮಹಿಳಾ ಸಂಘಟನೆ ಬಗ್ಗೆ. ಸಮಾನ ದುಡಿಮೆಗೆ ಕಡಿಮೆ ವೇತನ ಪಡೆದುಕೊಂಡೇ ಮಹಿಳೆ ಮುಂದುವರೆಯಬೇಕೆ? ಇದು ಕೃಷಿಯಲ್ಲಷ್ಟೇ ಅಲ್ಲ ಅನೇಕ ಉತ್ಪಾದನಾ ಘಟಕಗಳಲ್ಲೂ ನಿಜ. ಕಡಿಮೆ ವೇತನಕ್ಕೆ ಅಮಾನವೀಯ ಪರಿಸರದಲ್ಲಿ ದುಡಿದು ಇಡೀ ಗೃಹಕೃತ್ಯದ ಭಾರ ಹೊರಬೇಕೆ? ಕುಟುಂಬ ಅಥವಾ ಆರ್ಥಿಕ ವ್ಯವಸ್ಥೆ ಬಡ ಮಹಿಳೆಯರ ದುಡಿಮೆ ಇಲ್ಲದೆ ಜೀವಿಸಿರಲಾರದು. ಅದೇ ಸಮಯದಲ್ಲಿ ಮಾಲೀಕರಲ್ಲಿ ಇನ್ನೂ ಹೆಚ್ಚು ಪ್ರಬಲರು ಮತ್ತು ಕಠಿಣರು ಎಂಬುದನ್ನು ಮರೆಯುವಂತಿಲ್ಲ. ಹಾಗಾದರೆ ಈ ಎರಡೂ ವಿಭಿನ್ನ ಅಂಶಗಳನ್ನೂ ಸಮೀಪಕ್ಕೆ ತರುವುದು ಹೇಗೆ? ಕೆಲವೊಂದು ಚಳವಳಿಗಳು ಯಶಸ್ವಿಯಾಗಿವೆ. ಆದರೆ ಅನೇಕವನ್ನು ತುಳಿದುಹಾಕಲಾಗಿದೆ. ಪರಿಹಾರ ಎಲ್ಲಿದೆ? ಮಾಳವಿಕ ಕಾರ್ಲೇಕರ್ ಎರಡು ಸಲಹೆಗಳನ್ನು ನೀಡುತ್ತಾರೆ; ಎ) ಸಂಬಂಧಿಸಿದ ವಿಚಾರಗಳ ಬಗ್ಗೆ ಪ್ರಜ್ಞೆ ಮೂಡಿಸುವುದು. ಬಿ) ನೌಕರರ ಬಗ್ಗೆ ಇರುವ ಕರ್ತವ್ಯಗಳ ತಿಳುವಳಿಕೆಯನ್ನು ಮಾಲೀಕರಲ್ಲಿ ಮೂಡಿಸುವುದು.

ಈ ಎರಡೂ ಕೆಲಸಗಳು ಸುಲಭವಲ್ಲ. ಮಹಿಳಾ ಸಂಘಟನೆಗಳು ಈಗ ಬಡ ಮಹಿಳೆಯರಿಗೆ ಕಾನೂನು ನೆರವು ಅತ್ಯಾಚಾರ, ವರದಕ್ಷಿಣೆ ನಿಷೇಧ ಕಾಯಿದೆ ಇಂಥವುಗಳಲ್ಲಿ ನಿರತವಾಗಿವೆ. ದುಡಿವ ಮಹಿಳೆಯರ ಸತತ ಶೋಷಣೆ ನಿವಾರಣೆ ಕುರಿತ ಮಾರ್ಗೋಪಾಯಗಳ ಬಗ್ಗೆ ಯೋಚಿಸುವುದೂ ಅಷ್ಟೇ ಮುಖ್ಯ. ಮಧ್ಯಮ ವರ್ಗದ ಗೃಹಿಣಿಗೆ ಬೆಂಕಿ ಹಚ್ಚಿ ಸಾಯಿಸುವ ಪ್ರಕರಣಕ್ಕೆ ಗಮನ ಕೊಡಬೇಕು ನಿಜ. ಅದೇ ಸಮಯದಲ್ಲಿ ಅಸಂಖ್ಯ ಬಡ ದುಡಿವ ಮಹಿಳೆಯರ ಶೋಷಣೆಯನ್ನು ನಿರ್ಲಕ್ಷಿಸಬಾರದಷ್ಟೆ. ○

ಜನಸಂಖ್ಯಾ ನಿಯಂತ್ರಣಕಾರರು ಬಹಳ ಕಡಿಮೆ ಮಟ್ಟದಲ್ಲಿ ಆಯ್ಕೆ ಮಾಡಿಕೊಂಡ ವಿಧಾನವೆಂದರೆ ಸಂತಾನ ನಿರೋಧಕ ಗುಳಿಗೆಗಳ ಬಳಕೆ. ಬದಲಿಗೆ ಗರ್ಭ ನಳಿಕೆಯ ನಡುವಿನಲ್ಲಿ ಇರಿಸಬಹುದಾದ ಸಾಧನಗಳ ಬಳಕೆಗೇ ಹೆಚ್ಚು ಒತ್ತು ಕೊಡಲಾಗಿತ್ತು. ಅದನ್ನು ಮಹಿಳೆಯ ದೇಹ ಪರೀಕ್ಷೆಯ ಸೋಗಿನಲ್ಲಿ ಅವಳಿಗೆ ಅರಿವಿಲ್ಲದೆಯೇ ಅದನ್ನು ಒಳಗಿರಿಸಬಹುದು. ಇದರಿಂದ ಅವಳ ದೇಹಕ್ಕೆ ಉಂಟಾಗಬಹುದಾದ ಹಾನಿಯ ಬಗ್ಗೆ ಅವರಿಗೇನು ಕಾಳಜಿ? ಹಾಗೇನಾದರೂ ಅಪಾಯ ಸಂಭವಿಸಿದರೆ ಅವಳಿಗೆ ಯಾವ ವೈದ್ಯಕೀಯ ಸೌಲಭ್ಯವನ್ನೂ ನೀಡಲು ಏರ್ಪಾಡು ಮಾಡಲಾಗಿಲ್ಲ.

ಸರ್ಕಾರದ ವತಿಯಿಂದ ಅತಿ ಹೆಚ್ಚಿನ ಆದ್ಯತೆ ಲಭಿಸಿದ್ದು ಸಂತಾನ ನಿಯಂತ್ರಕ ಸೂಜಿಮದ್ದಿನ ಬಳಕೆಗೆ. ಡೆಪೋ ಪ್ರಾವೆರಾ ಎಂಬ ಈ ಸೂಜಿಮದ್ದನ್ನು ಅಮೆರಿಕಾದ ಔಷಧಿ ತಯಾರಕರ ಕಂಪೆನಿಯೊಂದರ ಅಂಗಸಂಸ್ಥೆಯು ದಕ್ಷಿಣ ಆಫ್ರಿಕಾದಲ್ಲಿ ತಯಾರಿಸುತ್ತದೆ. ಸ್ವತಃ ಅಮೆರಿಕಾ, ಮತ್ತಿತರ ಅಭಿವೃದ್ಧಿಶೀಲ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಡೆಪೋ ಪ್ರಾವೆರಾವನ್ನು ನಿಷೇಧಿಸಲಾಗಿದೆ. ಪ್ರಯೋಗಗಳಿಂದ ಖಚಿತಪಟ್ಟಿರುವ ಅಂಶವೆಂದರೆ, ಇದರ ಬಳಕೆಯು ಗರ್ಭಕೋಶ ಹಾಗೂ ಸ್ತನಗಳ ಕ್ಯಾನ್ಸರ್‌ಗೆ ದಾರಿ ಮಾಡಿಕೊಡುತ್ತದೆ. ಇದರ ಬಳಕೆಯಿಂದ ಡಯಾಬಿಟೀಸ್, ನರಗಳ ದೌರ್ಬಲ್ಯ ಮುಂತಾದ ರೋಗಗಳು ಉಂಟಾಗಬಹುದು. ಇದರಿಂದ ವಿಶೇಷತಃ ಮಹಿಳೆಯರ ಸಂತಾನ ಶಕ್ತಿ ಸದಾಕಾಲಕ್ಕೂ ಹರಣವಾಗುವ ಸಂಭವ ಇದೆ. ಬಲವಂತವಾಗಿ ಸಂಭೋಗವೆಸಗುವಂತಹವರ ಕಾಮತೃಷೆಯನ್ನು ರಾಸಾಯನಿಕವಾಗಿ ತೊಡೆದು ಹಾಕಲು ಇದರ ಬಳಕೆಯನ್ನು ಅಮೆರಿಕಾದಲ್ಲಿ ಪ್ರೋತ್ಸಾಹಿಸಲಾಗಿತ್ತು. ಹೀಗಿರುವಾಗ ದಕ್ಷಿಣ ಆಫ್ರಿಕಾದಲ್ಲಿ ಅದನ್ನು ಬಲವಂತವಾಗಿ ಮತ್ತು ಹೇರಳವಾಗಿ ಕರಿಯ ಹೆಂಗಸರ ಮೇಲೆ ಬಳಸಲಾಗುತ್ತಿದೆ.

ಸಂತಾನ ನಿಯಂತ್ರಣ ಶಕ್ತಿ ವಿಜ್ಞಾನದ ಸಾಧನೆಗಳಲ್ಲಿ ಮಹತ್ವದ ಒಂದು ಭಾಗ. ಸ್ವನಿಯಂತ್ರಣವಾದರೆ ವರವಾಗಬಲ್ಲ ಈ ಶಕ್ತಿ ರಾಜ್ಯಯಂತ್ರದ ಶೋಷಕ ಅಸ್ತ್ರವಾದಾಗ ಅದು ಅತಿ ಅಮಾನವೀಯವಾಗಬಲ್ಲುದು. ಭಾರತದಲ್ಲಿ ಒತ್ತಾಯಪೂರ್ವಕವಾಗಿ ಸಂತಾನ ಹರಣ ಕ್ರಿಯೆಯನ್ನು ಸಾಧಿಸಿದ್ದುದನ್ನು ಮತ್ತು ಈಗಲೂ ನಮ್ಮಲ್ಲಿ ಅಲ್ಲಲ್ಲಿ ಇಂತಹ ಪ್ರಕರಣಗಳು ನಡೆಯುತ್ತಿರುವುದನ್ನು ಗಮನಿಸಬೇಕು. ○

ಕೃಪೆ: ಸೆಚಾಬಾ
ನವೆಂಬರ್, 1984

ಉಜ್ವಲ ಭವಿಷ್ಯ ?

ಎರಡು ತಿಂಗಳ ಹಿಂದೆ ನಡೆದ ಲೋಕಸಭಾ ಚುನಾವಣೆಯಲ್ಲಿ ಕೇಂದ್ರದಲ್ಲಿ ರಾಜ್ಯಭಾರ ಮಾಡಲು ಕಾಂಗ್ರೆ ಪಕ್ಷಕ್ಕೆ ಮತ ನೀಡಿದ ಕರ್ನಾಟಕದ ಜನತೆ ಇಂದು ರಾಜ್ಯದಲ್ಲಿ ಜನತಾ ಪಕ್ಷಕ್ಕೆ ಅಧಿಕಾರ ಸೂತ್ರ ಕೊಟ್ಟಿದೆ. ಹೀಗೆ ಮಾಡುವುದರ ಮೂಲಕ ಕರ್ನಾಟಕದ ಜನರು ತಮ್ಮ ಜಾಣ್ಮೆಯನ್ನು ತೋರಿದ್ದಾರೆ. ಮೂವತ್ತು ವರ್ಷಗಳ ಕಾಲ ಜಡವಾಗಿ ಬೇರೂರಿದ್ದ ಕಾಂಗ್ರೆಸ್ ಪಕ್ಷಕ್ಕೆ ಪರ್ಯಾಯವಾಗಿ ಜನತಾ ಪಕ್ಷವನ್ನು ಎರಡು ಬಾರಿ ಚುನಾವಣೆಯಲ್ಲಿ ಗೆಲ್ಲಿಸಿದ ಜನತೆ ಜನತಾ ಪಕ್ಷದಿಂದ ಬಹಳಷ್ಟನ್ನು ನಿರೀಕ್ಷಿಸುವುದು ಸಹಜವೇ.

*ಇನ್ನು ಮುಂದೆ ಬಡ ತಂದೆತಾಯಿಗಳು ತಮ್ಮ ಹೆಣ್ಣು ಮಕ್ಕಳ ಮದುವೆಯ ಬಗ್ಗೆ ಯೋಚನೆಯನ್ನೇ ಮಾಡಬೇಕಿಲ್ಲ. ಹೇಗೂ ಸರ್ಕಾರವೇ ಅವರಿಗೆ ಮಂಗಳಸೂತ್ರ, ಸೀರೆ, ಮಂಗಳದ್ರವ್ಯಗಳನ್ನು ಉಚಿತವಾಗಿ ಕೊಡುತ್ತದೆ! ದೇವದಾಸಿಯರು, ವೇಶ್ಯೆಯರು ಎಲ್ಲರಿಗೂ ಮದುವೆಯ ಕನಸು ನನಸಾಗಲಿದೆ. ಮದುವೆಗೆ ಅಗತ್ಯವಾದದ್ದನ್ನೆಲ್ಲಾ ಸರ್ಕಾರವೇ ಪೂರೈಸುವಾಗ ಅವರ ಸಮಸ್ಯೆಗಳೆಲ್ಲಾ ಬಗೆಹರಿದಂತೆ ಅಲ್ಲವೇ ?

*ಜನತಾ ಸರ್ಕಾರ ಇಂತಹ ಆಶ್ವಾಸನೆಗಳನ್ನು ಪೂರೈಸುವ ಕೆಲಸ ಮಾಡದಿದ್ದರೆ ಅವರಿಗೆ ಓಟು ಕೊಟ್ಟ ಮಹಿಳಾ ಮತದಾರರೇನೂ ಆಕ್ಷೇಪಿಸಲಾರರು. ಅದರ ಬದಲು ತಮ್ಮ ವೈಯಕ್ತಿಕ ಬದುಕನ್ನು ತಾವೇ ರೂಪಿಸಿಕೊಳ್ಳಲು ಸಾಧ್ಯವಾಗುವಂತೆ, ತಮ್ಮ ಮನೆಗೆ ಒಲೆ, ಕೊರಳಿನ ತಾಳಿ, ಸೀರೆ ಬಟ್ಟೆಗಳನ್ನು ತಾವೇ ಸಂಪಾದಿಸಿ ಪಡೆಯಲು ಸಾಧ್ಯವಾಗುವಂತೆ ಉದ್ಯೋಗಾವಕಾಶಗಳನ್ನು ಕಲ್ಪಿಸಲಿ.

*ಅವಳಿಗಾಗಿಯೇ ರೂಪಿಸಲ್ಪಟ್ಟಿರುವ ರಕ್ಷಣಾ ಶಾಸನಗಳು ಈಗ ಬಿಳಿಯ ಹಾಳೆಯ ಮೇಲಷ್ಟೇ ಇವೆ. ಇವುಗಳನ್ನು ಶಕ್ತವಾಗಿ ಅನುಷ್ಠಾನಕ್ಕೆ ತಂದರೆ ಮಹಿಳೆಯರು ತಾಳಿಯನ್ನಾಗಲೀ, ಸೀರೆಯನ್ನಾಗಲೀ ಕೇಳುವುದೇ ಇಲ್ಲ. ಹೊಗೆಯಿಲ್ಲದ ಒಲೆಯೂ ಬೇಡ; ಪಿಂಚಣಿಯೂ ಬೇಡ.

ರಾಜ್ಯ ವಿಧಾನಸಭೆಯಲ್ಲಿ ಹಿಂದೆ ಇಬ್ಬರಿದ್ದ ಶಾಸಕಿಯರು ಈಗ ಎಂಟು ಮಂದಿಯಾಗಿದ್ದಾರೆ. ಇವರಾದರೂ ಮಹಿಳೆಯರ ಸಮಸ್ಯೆಗಳನ್ನು ಸರಿಯಾಗಿ ಗ್ರಹಿಸಿ ಅದಕ್ಕೆ ಪರಿಹಾರವಾಗಿ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಲು ನಿಷ್ಠೆಯಿಂದ ಪ್ರಯತ್ನಿಸಲಿ. ○

ಭಾವನಾ : ಶೋಷಣೆಯ ವೈಭವೀಕರಣ

● ಸುಶೀಲ

ದಲಿತರ ಮೇಲಿನ ದಬ್ಬಾಳಿಕೆ, ಹೆಣ್ಣಿನ ಶೋಷಣೆಯನ್ನು ಕೇಂದ್ರವಾಗಿಟ್ಟುಕೊಂಡು ಕಥೆ, ಕಾದಂಬರಿ, ಚಲನ ಚಿತ್ರಗಳನ್ನು ಹೆಣೆಯುವುದು ಇತ್ತೀಚಿನ ದಶಕದ ಫ್ಯಾಷನ್ ಎನ್ನುವಷ್ಟು ಚರ್ವಿತಚರ್ವಣ ಎನಿಸಿಬಿಟ್ಟಿದೆ. ಪ್ರವೀಣ್ ಭಟ್ ಕಥೆ, ಛಾಯಾಗ್ರಹಣ, ನಿರ್ದೇಶನ ಹೊಂದಿರುವ 'ಭಾವನಾ' ಇದೇ ನೆಲಗಟ್ಟಿನ ಮೇಲೆ ತಯಾರಾದ ಒಂದು ಮಾದರಿ. ಕೆಲವರ್ಷಗಳ ಹಿಂದೆ ಸುಚಿತ್ರಾ ಸೇನ್ ನಾಯಕಿಯಾಗಿ ಅಭಿನಯಿಸಿದ 'ಮಮತಾ' ಚಿತ್ರದ ಪ್ರತಿಕೃತಿ ಎನ್ನಲಡ್ಡಿಯಿಲ್ಲ !

ಚಿತ್ರ ವಿಮರ್ಶೆ

ಹೆಣ್ಣಿನ ಶೋಷಣೆಯ ವಸ್ತುವಿಗೆ ತ್ಯಾಗದ ಮೆರುಗು ನೀಡಲಾಗಿರುವ ಈ ಚಿತ್ರದ ನಾಯಕಿ ಭಾವನಾ ತಬ್ಬಲಿಯಾಗಿ ಬೆಳೆದ ವಿದ್ಯಾವಂತ ಹುಡುಗಿ. ಸೂಕ್ಷ್ಮ ಸ್ವಭಾವದ ಈಕೆಯ ಮೇಲೆ ಗಂಡಿನ ನಿರಂತರ ದಬ್ಬಾಳಿಕೆ ಚಿತ್ರದ ವಸ್ತು.

ತರುಣನೊಬ್ಬನ ಕಪಟ ಪ್ರೇಮವನ್ನು ನಿಜವೆಂದು ನಂಬಿ ಸವಿರು ಭಾವನೆಗಳನ್ನು ಹೊತ್ತು ಆತನನ್ನು ಮದುವೆಯಾಗುವ ಭಾವನಾ ಜೀವನಾಧಾರವಾದ ಸ್ಕಾಲರ್‌ಷಿಪ್ ಅನ್ನು ಕಳೆದುಕೊಳ್ಳುವುದರ ಜೊತೆಗೆ ಮತ್ತೊಂದು ಜೀವವನ್ನು ಹೊತ್ತ ಅಸಹಾಯಕ ಸ್ಥಿತಿಯಲ್ಲಿ ಗಂಡ ಎನಿಸಿಕೊಂಡವನಿಂದ ತ್ಯಜಿಸಲ್ಪಡುತ್ತಾಳೆ. ಗೆಳತಿಯೊಬ್ಬಳ ಅನುಕಂಪ, ಸಹಕಾರ ಬಿಟ್ಟರೆ ಪ್ರಪಂಚದಲ್ಲಿ ಅವಳವರೆನ್ನುವ ಜೀವ ಮತ್ತೊಂದಿಲ್ಲದೆ ನಿರ್ಗತಿಕ ಸ್ಥಿತಿ. ನಾಳಿನ ಬದುಕಿಗೆ ಹೆದರಿ ಒಡಲ ಚಿಗುರನ್ನು ಚಿವುಟ ಬಯಸದೆ ಹೆತ್ತು ಬೆಳೆಸಿ ವಿದ್ಯಾವಂತನನ್ನಾಗಿಸುವ ಛಲ ಹೊತ್ತು ಏಕಾಂಗಿಯಾಗಿ ಬದುಕನ್ನು ಎದುರಿಸಹೊರಟ ಇವಳಿಗೆ ಉದ್ದಕ್ಕೂ ಎದುರಾಗುವುದು ಕಾಮದೃಷ್ಟಿಯಿಂದ ನೋಡುವ ಗಂಡುಗಳೇ. ಈ ಮಧ್ಯೆ ಗೆಳತಿಯನ್ನು ಅತ್ಯಾಚಾರದಿಂದ ರಕ್ಷಿಸುವ ಯತ್ನ ಕೊಲೆಯಲ್ಲಿ ಪರ್ಯವಸಾನವಾಗಿ ಜೈಲುವಾಸ. ಬಿಡುಗಡೆ ನಂತರ ನಂಬಿದ ವ್ಯಕ್ತಿಯಿಂದಲೇ ಅತ್ಯಾಚಾರಕ್ಕೊಳಗಾಗಿ ಹೃದಯ ಕಲ್ಲಾಗುವ ಭಾವನಾಳಿಂದ ಪುಟ್ಟ ಮಗನ ಉತ್ತಮ ಭವಿಷ್ಯಕ್ಕಾಗಿ ವೇಶ್ಯಾವೃತ್ತಿಯ ಸ್ವೀಕಾರ. ಮಗನಿಗೆ ತನ್ನ ಬದುಕಿನ ನೆರಳೂ ಬೀಳದಂತೆ ಯತ್ನ ; ಕೊನೆಗೆ ಸ್ವಾರ್ಥಕ್ಕಾಗಿ ಮಗನನ್ನು ಬಯಸಿ ಬರುವ ಗಂಡನ ಕೊಲೆಯಲ್ಲಿ ಬದುಕಿನೊಡನೆ ಇವಳೆಲ್ಲ ಹೋರಾಟದ ಮುಕ್ತಾಯ. ಇದು ಚಿತ್ರದ ಒಟ್ಟು ಕಥೆ.

ಹೆಣ್ಣು ವಿದ್ಯಾವಂತೆಯಾದರೂ ಬದುಕಿನ ಹೋರಾಟದಲ್ಲಿ ಕೊನೆ ಮುಟ್ಟುವುದು ವೇಶ್ಯಾ ವೃತ್ತಿಯಲ್ಲಿ ಎಂಬ ಸಿದ್ಧ ತೀರ್ಮಾನವೇ ಮೂಲಭೂತ ಪ್ರಶ್ನೆಯನ್ನು ಎತ್ತುತ್ತದೆ. ವಿದ್ಯಾವಂತೆಯಾದ, ಬದುಕನ್ನೂ ದಿಟ್ಟವಾಗಿ ಎದುರಿಸುವ ಭಾವನಾಳಂತಹ ಮಹಿಳೆಯರಿಗೆ ಬೇರೆ ಪರಿಹಾರವೇ ಇಲ್ಲವೆ? ನ್ಯಾಯಾಲಯದ ಮೊರೆ ಏಕೆ ಹೊಗಲಿಲ್ಲ? ಬದುಕಿನ ಒಂದು ದುರಂತ ಇಡೀ ಬದುಕಿನ ಮೇಲೆ ಕರಿಛಾಯೆ ಎಳೆಯಬೇಕೆ? ಇಂಥ ಪ್ರಶ್ನೆಗಳಿಗೆ ನಿರ್ದೇಶಕ ಉತ್ತರಿಸಬೇಕಾಗಿದೆ. ಏಕೆಂದರೆ ಚಿತ್ರದುದ್ದಕ್ಕೂ ಆತ ನಕಾರಾತ್ಮಕ ನಿಲುವು ತಳೆದಿರುವಂತಿದೆ. 'ಪಾಸಿಟಿವ್ ಅಪ್ರೋಚ್' ಎಲ್ಲೂ ಇಲ್ಲ. ಪ್ರೇಕ್ಷಕರನ್ನು ಯೋಚನೆಗೆ ಹಚ್ಚುವ ಯಾವ ಯತ್ನವನ್ನೂ ಮಾಡದೆ ತ್ಯಾಗ, ಶೋಷಣೆ, ದುರಂತದ ಸಂಪೂರ್ಣ ಲಾಭ ಪಡೆಯುವ ನಿರ್ದೇಶಕರ ನಿಲುವು ಸಹ ಹೆಣ್ಣಿನ ಶೋಷಣೆಯ ಮತ್ತೊಂದು ಮುಖವಲ್ಲವೇ ಎನಿಸುತ್ತದೆ. ○

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ

221, IV ಮೇನ್, ವ್ಯೆಯಾಳಿಕಾವಲ್ ಬೆಂಗಳೂರು–560 003

ಸಮಾಜದ ವಿವಿಧ ಸ್ತರಗಳ ಮಹಿಳೆಯರ ಸ್ಥಾನಮಾನ, ಹಕ್ಕುಗಳು, ಚಟುವಟಿಕೆಗಳ ಬಗ್ಗೆ ವಿಶ್ಲೇಷಣಾತ್ಮಕವಾಗಿ ಮತ್ತು ವೈಜ್ಞಾನಿಕವಾಗಿ ಅಧ್ಯಯನ ನಡೆಸುವ ದೃಷ್ಟಿಯಿಂದ ರೂಪುಗೊಂಡಿರುವ **ಜಾಗೃತಿ ಮಹಿಳಾ ಅಧ್ಯಯನ ಕೇಂದ್ರದ** ಗೊತ್ತು ಗುರಿಗಳಲ್ಲಿ ಕೆಲವೊಂದು ಇಲ್ಲಿವೆ:

1. ವಿವಿಧ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಮಹಿಳೆಯರ ಜೊತೆ ನಿಕಟ ಸಂಬಂಧವೂ ಸೇರಿದಂತೆ ಅವರ ಸ್ಥಿತಿಗತಿಗಳ ಬಗ್ಗೆ ವಿಶ್ಲೇಷಣಾತ್ಮಕ ಅಧ್ಯಯನ.

2. ವಿವಿಧ ಸಮಸ್ಯೆಗಳ ಬಗ್ಗೆ ಅರ್ಥ ಗ್ರಹಿಕೆ ಮತ್ತು ಅಭಿಪ್ರಾಯ ಸಂಗ್ರಹಣೆಗೆ ಕಾರ್ಯಾಗಾರ, ವಿಚಾರ ಸಂಕಿರಣ, ವಿಚಾರಗೋಷ್ಠಿ ಮತ್ತಿತರ ಕಾರ್ಯಕ್ರಮ ರೂಪಿಸುವುದು.

3. ಗೊತ್ತುಗುರಿಗಳ ಜ್ಞಾನ ಪ್ರಸಾರಕ್ಕಾಗಿ ಮಾಸಿಕ, ದ್ವೈಮಾಸಿಕ ಪತ್ರಿಕೆಗಳ ಪ್ರಕಟಣೆ ಹಾಗೂ ಪುಸ್ತಕ, ಕರಪತ್ರ, ಸ್ಮರಣ ಸಂಚಿಕೆ, ಕಿರುಹೊತ್ತಿಗೆ ಮುಂತಾದವುಗಳನ್ನು ಹೊರತರುವುದು.

4. ಮಹಿಳೆಯರನ್ನು ಕುರಿತ ಸಮಸ್ಯೆಗಳ ಬಗ್ಗೆ ವೈಜ್ಞಾನಿಕ ಅಧ್ಯಯನ, ಸಂಶೋಧನೆ ಮತ್ತು ದಾಖಲೆಗಳ ಸಂಗ್ರಹಣೆಗಾಗಿ ಗ್ರಂಥಾಲಯ ಮತ್ತು ವಾಚನಾಲಯ ಸೌಲಭ್ಯ ಇರುವ ಅಧ್ಯಯನ ಕೇಂದ್ರ ಸ್ಥಾಪಿಸುವುದು.

5. ಮಹಿಳೆಯರ ಸ್ಥಾನಮಾನದ ಬಗ್ಗೆ ಸಮಾಜದಲ್ಲಿ ಪ್ರಜ್ಞೆ ಮೂಡಿಸಲು ಅನುವಾಗುವಂತಹ ವಿಷಯಗಳ ಮೇಲೆ ವಿದ್ಯಾರ್ಥಿಗಳಿಗೆ ಚರ್ಚಾಸ್ಪರ್ಧೆ, ಪ್ರಬಂಧ ರಚನೆ ಏರ್ಪಡಿಸುವುದು.

6. ಮಹಿಳೆಯರಲ್ಲಿ ನಿರಕ್ಷರತೆ ತೊಡೆದುಹಾಕಲು ರಚನಾತ್ಮಕ ಕಾರ್ಯಕ್ರಮ ಹಾಕಿಕೊಳ್ಳುವುದು.

Printed and published by Dr. G. Ramakrishna at ILA Press, 153, 8th cross, Chamarajapet, Bangalore–18 on behalf of Jagruthi Mahila Adhyayana Kendra, 221, IV Main, Vyalikaval, BANGALORE–3 Editor: **N. Gayathri**